# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 15 ಭಾನುವಾರ 2023

₹4

ಸಂಪುಟ: 43 | ಸಂಚಿಕೆ: 269 | ಪುಟಗಳು: 12



ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com












ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಆಯ್ಕೆಯಾದ ಸಿ.ಸಂತೋಷ್ ಅವರನ್ನು ಶಾಸಕ ಎಲ್.ನಾಗೇಂದ್ರ ಸನ್ಮಾನಿಸಿದರು. ಈ ವೇಳೆ ದಿ ಸಿಟಿ ಕೋ ಆಪರೇ ಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮ ಕೃಷ್ಣ, ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ಪ್ರಕಾಶ್, ಅವಿನಾಶ್, ರಾಜೇಂದ್ರ, ದರ್ಶನ್, ವೇಣು ಇನ್ನಿತರರಿದ್ದರು.



ಮೈಸೂರು ಜೆಡಿಎಸ್ ಕಚೇರಿಯಲ್ಲಿ ಶನಿವಾರ ನೂತನ ಪದಾಧಿಕಾರಿಗಳಿಗೆ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ರಾಮು ನೇಮಕಾತಿ ಪತ್ರ ವಿತರಿಸಿದರು. ಈ ವೇಳೆ ನಗರಧ್ಯಕ್ಷ ಕೆ.ಟಿ.ಚೆಲುವೇಗೌಡ, ನಗರ ಪ್ರಧಾನ ಕಾರ್ಯದರ್ಶಿ ಗಂಗಾಧರ್‌ಗೌಡ ಹಾಗೂ ಮುಖಂಡರು ಉಪಸ್ಥಿತರಿದ್ದರು.

# ಕೆಪಿಸಿಸಿ ಪ್ರಚಾರ ಸಮಿತಿಯ ವಿವಿಧ ವಿಭಾಗಕ್ಕೆ ನೇಮಕ

## ಡಾ.ಯತೀಂದ್ರ ಸಿದ್ದರಾಮಯ್ಯ ಮೈಸೂರು ವಿಭಾಗದ ಸಹ ಉಪಾಧ್ಯಕ್ಷ

**ಬೆಂಗಳೂರು:** ಮುಂಬರುವ ವಿಧಾನ ಸಭೆ ಚುನಾವಣೆಗೆ ಕಾಂಗ್ರೆಸ್ ಭರ್ಜರಿ ತಯಾರಿ ನಡೆಸಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಪ್ರಚಾರ ಸಮಿತಿಯ ವಿವಿಧ ಜವಾಬ್ದಾರಿ ಹಂಚಿಕೆ ಮಾಡಿ ಎಐಸಿಸಿ ಆದೇಶ ಹೊರಡಿಸಿದೆ. ಅಖಿಲ ಕರ್ನಾಟಕ ಸಂಘಟನಾ ಸಹ ಅಧ್ಯಕ್ಷರು ಹಾಗೂ ವಿಭಾಗ ವಾರು ಸಹ ಅಧ್ಯಕ್ಷರುಗಳನ್ನು ನೇಮಿಸಿದೆ.

ಕೆಪಿಸಿಸಿ ಸಂಘಟನಾ ಸಹ ಅಧ್ಯಕ್ಷರಾಗಿ ಬಿ.ಎಲ್.ಶಂಕರ್ ಅವರನ್ನು ನೇಮಕ ಮಾಡಲಾಗಿದೆ. ಇದರ ಜೊತೆಗೆ ಕಲಬುರಗಿ, ಮೈಸೂರು, ಕರಾವಳಿ, ಬೆಳಗಾವಿ, ಮಧ್ಯ ಕರ್ನಾಟಕ, ಬೆಂಗಳೂರು ವಿಭಾಗಗಳಿಗೆ ಸಹ ಉಪಾಧ್ಯಕ್ಷರನ್ನು ನೇಮಿಸಿದೆ. ಅಲ್ಲದೇ 10 ಜನರ ಸಾಮಾಜಿಕ ಜಾಲತಾಣ ತಂಡ, 9 ಜನರ ಮಾಧ್ಯಮ ವಿಭಾಗ, 29 ಜಿಲ್ಲಾ ಛೇರ್ಮನ್ ಹಾಗೂ 32 ಮಂದಿ ಮುಖ್ಯ ಸಂಯೋಜಕರು, 41 ಸಂಯೋಜಕರನ್ನು ಸಹ ನೇಮಕ ಮಾಡಿದೆ.



ಡಾ.ಯತೀಂದ್ರ

**ವಿಭಾಗವಾರು ಸಹ ಅಧ್ಯಕ್ಷರು:** ಅಖಿಲ ಕರ್ನಾಟಕ ಸಂಘಟನಾ ಸಹ ಅಧ್ಯಕ್ಷರಾಗಿ ಬಿ.ಎಲ್ ಶಂಕರ್, ಸಹ ಉಪಾಧ್ಯಕ್ಷರಾಗಿ ಕಲಬುರಗಿ–ಡಾ.ಶರಣಪ್ರಕಾಶ್ ಪಾಟೀಲ್ ಬೆಳಗಾವಿ ವಿಭಾಗ– ಸಂತೋಷ್ ಲಾಡ್, ಬೆಂಗಳೂರು ವಿಭಾಗ–ರಿಜ್ವಾನ್ ಅರ್ಷದ್, ಮೈಸೂರು ವಿಭಾಗ– ಡಾ.ಯತೀಂದ್ರ ಸಿದ್ದರಾಮಯ್ಯ, ಮಧ್ಯ ಕರ್ನಾಟಕ ವಿಭಾಗ– ಚಂದ್ರಪ್ಪ, ಕರಾವಳಿ ಕರ್ನಾಟಕ– ಮಂಜುನಾಥ್ ಭಂಡಾರಿ.

**ಮುಖ್ಯ ಸಂಯೋಜಕರು:** ಶಾಸಕರಾದ ನಾಗೇಂದ್ರ ಆನಂದ್ ನ್ಯಾಮಗೌಡ, ಅಂಜಲಿ ಲಿಂಬಾಳ್ಕರ್, ಸೌಮ್ಯಾ ರೆಡ್ಡಿ, ಲಕ್ಷ್ಮೀ ಹೆಬ್ಬಾಳ್ಕರ್, ರೂಪ ಶಶಿಧರ್, ಗಣೇಶ್ ಹುಕ್ಕೇರಿ, ಡಾ.ರಂಗನಾಥ್, ವಿಧಾನಪರಿಷತ್ ಸದಸ್ಯರಾದ ಪ್ರಕಾಶ್ ರಾಥೋಡ್, ಗೋವಿಂದ ರಾಜು, ನಜೀರ್ ಅಹಮ್ಮದ್, ರಾಜೇಂದ್ರ, ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮಾಜಿ ಸಚಿವರಾದ ಎ.ಬಿ ಪಾಟೀಲ್, ಕಿಮ್ಮನೆ ರತ್ನಾಕರ್, ರಾಣಿ ಸತೀಶ್ ಸೇರಿದಂತೆ ಒಟ್ಟು 32 ಜನರನ್ನು ಮುಖ್ಯ ಸಂಯೋಜಕರನ್ನಾಗಿ ನೇಮಕ ಮಾಡಲಾಗಿದೆ.

# ಪಂಚಮಸಾಲಿ ಮೀಸಲಾತಿ: ಬೆಂಗಳೂರಿನಲ್ಲಿ ಮತ್ತೊಂದು ಸುತ್ತಿನ ಹೋರಾಟ ಆರಂಭ

ಬೆಂಗಳೂರು, ಜ.14– ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ರಾಜಧಾನಿಯಲ್ಲಿ ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಶನಿವಾರದಿಂದ ಮತ್ತೊಂದು ಸುತ್ತಿನ ಹೋರಾಟ ಆರಂಭವಾಗಿದೆ.

ಸ್ವಾಮೀಜಿ ನೇತೃತ್ವದಲ್ಲಿ ಶಿಗ್ಗಾವಿ ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ಹೊರಹಾಕಿದ್ದ ಪ್ರತಿಭಟನಕಾರರು ಅಲ್ಲಿಂದ ಶನಿವಾರ ನಗರದ ಸ್ವಾತಂತ್ರ್ಯ ಉದ್ಯಾನಕ್ಕೆ ಆಗಮಿಸಿ ಪ್ರತಿಭಟನೆ ಆರಂಭಿಸಿದರು. ಅವರೊಂದಿಗೆ ಪಂಚಮಸಾಲಿ ಸಮುದಾಯ ಮುಖಂಡರೂ ಪಾಲ್ಗೊಂಡಿದ್ದರು. ಮುಖ್ಯಮಂತ್ರಿ ಬೊಮ್ಮಾಯಿ ಅವರ ಮೇಲೆ ನಂಬಿಕೆಯಿತ್ತು. 2ಎ ಮೀಸಲು ಕೊಡುತ್ತೇನೆ ಎಂದು ಮುಖ್ಯಮಂತ್ರಿ ತಾಯಿ ಮೇಲೆ ಆಣೆ ಮಾಡಿದ್ದರು. ಆದರೂ ಮೋಸ ಮಾಡಿದ್ದಾರೆ. ರಾಜಧಾನಿಯಲ್ಲಿ ಈ ಹಿಂದೆಯೇ 10 ಲಕ್ಷ ಜನರನ್ನು ಸೇರಿಸಿ ಪಾದಯಾತ್ರೆ ಮಾಡಲಾಗಿತ್ತು. ಆಗಲೇ ಸರ್ಕಾರದ ಮನಸ್ಸು ಕರಗಬೇಕಿತ್ತು ಎಂದು ಹೇಳಿದರು.

# ನಾಳೆ ಸರ್ಪಸಂಸ್ಕಾರ, ನಾಡಿದ್ದು ಆಶ್ಲೇಷಾ ಬಲಿ

ಮೈಸೂರು, ಜ.14– ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜ.16ರ ಸೋಮವಾರ ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರ ಮತ್ತು ಜ.17ರ ಮಂಗಳವಾರ ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷಾ ಬಲಿ ಪೂಜೆ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ವೈ ಕುಮಾರ್ (ಜಾತಕ ವಿಮರ್ಶಕ) ಮೊ.9845183399, 9342183392 ಸಂಪರ್ಕಿಸಬಹುದು.

# ಕೆ.ಎಂ.ಸುಮತಿ ನಿಧನ



ಮೈಸೂರು, ಜ.14– ಕಾಲೇಜು ಶಿಕ್ಷಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಹಾಗೂ ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆ ವಿಶೇಷಾಧಿಕಾರಿ ಸಿ.ರಾಮಣ್ಣ ಅವರ ಸೊಸೆ ಕೆ.ಎಂ.ಸುಮತಿ (36) ಗುರುವಾರ ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಮಹಾರಾಜ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಅತಿಥಿ ಉಪನ್ಯಾಸಕ ಡಾ.ಆರ್.ರಾಘವೇಂದ್ರ ಅವರ ಪತ್ನಿ. ಹಾಸನದ ನಿವೃತ್ತ ಎಎಸ್ಐ ಮಾಳಿಗೇಗೌಡರ ಪುತ್ರಿಯಾದ ಸುಮತಿ ಅವರು ಶ್ರೀರಂಗಪಟ್ಟಣ ಮೀನುಗಾರಿಕೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರಿಗೆ ನೂಲ್ಕೂವರೆ ವರ್ಷದ ಪುತ್ರ ಗುಹಾನ್ ಹಾಗೂ ಅಪಾರ ಬಂಧು ವರ್ಗ ಇದ್ದಾರೆ.

ಅಂತ್ಯಕ್ರಿಯೆಯು ಕುವೆಂಪುನಗರದ ಕಾವೇರಿ ಶಾಲೆ ಪಕ್ಕದ ಸ್ಮಶಾನದಲ್ಲಿ ನೆರವೇರಿತು. ಕುವೆಂಪುನಗರದ ಸಂಪಿಗೆ ರಸ್ತೆಯಲ್ಲಿರುವ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ ಆದ ಮಾಜಿ ಶಾಸಕ ವಾಸು ಸೇರಿದಂತೆ ಹಲವಾರು ಗಣ್ಯರು ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

## ಪ್ರಿನ್ಸಿ ಲಿಜೀನಾ ಡಿಸೋಜಾ



ಕೊಡಗಿನ ವಿರಾಜಪೇಟೆ ಮೂಲದ ಮೈಸೂರಿನ ಗೋಕುಲಂ 3ನೇ ಹಂತದ ನಿವಾಸಿ ದಿವಂಗತ ವಲೇರಿಯನ್ ಡಿಸೋಜಾ ಅವರ ಪತ್ನಿ ಪ್ರಿನ್ಸಿ ಲಿಜೀನಾ ಡಿಸೋಜಾ(67) ಶನಿವಾರ ಮಧ್ಯಾಹ್ನ ನಿಧನರಾದರು.

ಮೃತರು ಪುತ್ರ ಡೆರಿಕ್ ಡಿಸೋಜಾ, ಪುತ್ರಿ ರೀನಾ ಲೋಬೋ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಬೆಳವಾಡಿ ಸ್ಮಶಾನದಲ್ಲಿ ಭಾನುವಾರ(ಜ.15) ಮಧ್ಯಾಹ್ನ 2.54ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೈಸೂರಿನ ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಷನ್ ಅಧ್ಯಕ್ಷ ಜಾನ್ ವಿಲಿಯಂ ಡಿಸೋಜಾ, ಪ್ರಧಾನ ಕಾರ್ಯದರ್ಶಿ ಜಾಯ್ಸ್ ಸಿಕ್ವೇರಾ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಪ್ರಿನ್ಸಿ ಲಿಜೀನಾ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

## ಮೋನಿಷಾ ಭಾರತಿ



ಮೈಸೂರಿನ ಜೆಪಿ ನಗರ ಬಿ.ಬ್ಲಾಕ್ 6ನೇ ಮೇನ್, 18ನೇ ಕ್ರಾಸ್‌ನ ನಿವಾಸಿ ಅಶೋಕಾನಂದ ಭಾರತಿ ಅವರ ಪುತ್ರಿ ಮೋನಿಷಾ ಭಾರತಿ (17) ಶನಿವಾರ ಸಂಜೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ತಂದೆ–ತಾಯಿ ಮತ್ತು ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಮೈಸೂರಿನ ವಿಶ್ವೇಶ್ವರನಗರದ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ವಿದ್ಯುತ್ ಸ್ಪರ್ಶ: ಹೆಣ್ಣಾನೆ ಸಾವು

ಸರಗೂರು,ಜ.14–ವಿದ್ಯುತ್ ತಂತಿ ಸ್ಪರ್ಶಿಸಿ ಹೆಣ್ಣಾನೆ ಸಾವನ್ನಪ್ಪಿರುವ ಘಟನೆ ಸರಗೂರು ತಾಲೂಕು ಬರಗಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಗಂಗಮ್ಮ ಎಂಬುವರಿಗೆ ಸೇರಿದ ಸರ್ವೆ ನಂ.36ರ ಜಮೀನಿನಲ್ಲಿ ಬೆಳೆ ರಕ್ಷಣೆಗಾಗಿ ವಿದ್ಯುತ್ ತಂತಿ ಅಳವಡಿಸಿ, ಅದಕ್ಕೆ ವಿದ್ಯುತ್ ಸಂಪರ್ಕ ನೀಡಲಾಗಿತ್ತು. ಜ.12ರಂದು ರಾತ್ರಿ ಆಹಾರ ಅರಸಿ ಬಂದಿದ್ದ ಹೆಣ್ಣಾನೆ ವಿದ್ಯುತ್ ಸ್ಪರ್ಶಿಸಿ ಸಾವನ್ನಪ್ಪಿರುವ ಬಗ್ಗೆ ಗೊತ್ತಾಗಿದೆ. ಈ ಜಮೀನಿಗೆ ಗಂಗಮ್ಮ ಅವರ ಪುತ್ರ ಗೋಪಾಲ ಹಾಗೂ ಈ ಜಮೀನನ್ನು ಗುತ್ತಿಗೆಗೆ ಪಡೆದಿರುವ ಗ್ರಾಮದ ರಾಜು ಎಂಬುವರು ವಿದ್ಯುತ್ ಸಂಪರ್ಕ ನೀಡಿ ಕಾಡಾನೆ ಸಾವಿಗೆ ಕಾರಣರಾಗಿದ್ದಾರೆ ಎಂದು ಹೆಡಿಯಾಲ ವಲಯ ಅರಣ್ಯಾಧಿಕಾರಿ ನಾರಾಯಣ ಸರಗೂರು ಠಾಣೆಗೆ ದೂರು ಸಲ್ಲಿಸಿದ್ದಾರೆ. ಆರೋಪಿಗಳಲ್ಲೊಬ್ಬನಾದ ಗೋಪಾಲ, 2018ರ ಆ.16ರಂದು ಕೂಡ ಜಮೀನಿಗೆ ಅಕ್ರಮವಾಗಿ ವಿದ್ಯುತ್ ತಂತಿ ಬೇಲಿ ನಿರ್ಮಿಸಿ ಹೆಣ್ಣಾನೆ ಸಾವಿಗೆ ಕಾರಣನಾಗಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

# ಚಾಮುಂಡೇಶ್ವರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬಿಜೆಪಿ ಸಂಕಲ್ಪ

## ಕ್ಷೇತ್ರ ಸಂಘಟನಾ ಪ್ರವಾಸದಲ್ಲಿ ಕ್ಷೇತ್ರದ ಮುಖಂಡ ಎನ್.ಅರುಣ್‌ಕುಮಾರ್‌ಗೌಡ

ಮೈಸೂರು,ಜ.14(ಪಿಎಂ)–ಚಾಮುಂಡೇಶ್ವರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬಿಜೆಪಿ ಸಂಕಲ್ಪ ಮಾಡಿರುವುದಾಗಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್ ಕುಮಾರ್‌ಗೌಡ ಹೇಳಿದರು.

ಕ್ಷೇತ್ರದ ಶೆಟ್ಟನಾಯಕನಹಳ್ಳಿ, ಡಿಎಂಜಿ ಹಳ್ಳಿ, ಕಮರಹಳ್ಳಿ, ಮರಯ್ಯನಹುಂಡಿ, ಮರಟಿಕ್ಯಾತನಹಳ್ಳಿ, ಬೀರಿಹುಂಡಿ ಮೊದಲಾದ ಗ್ರಾಮಗಳಲ್ಲಿ ಕ್ಷೇತ್ರ ಸಂಘಟನಾ ಪ್ರವಾಸ ಕೈಗೊಂಡಿದ್ದ ಅವರು, ಶೆಟ್ಟನಾಯಕನಹಳ್ಳಿಯ ಬಿಜೆಪಿ ಪ್ರಮುಖ ಮಲ್ಲಿಕಾರ್ಜುನ ಸ್ವಾಮಿಯವರ ನಿವಾಸದ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬೂತ್ ವಿಜಯ ಅಭಿಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಕ್ಷೇತ್ರದಲ್ಲಿ ಬಿಜೆಪಿ ಗೆಲುವಿಗೆ ಪೂರಕ ವಾತಾವರಣ ಸೃಷ್ಟಿಯಾಗಿದ್ದು, ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಕ್ಷೇತ್ರದ ಜನತೆ



ಆಶೀರ್ವದಿಸಲಿದ್ದಾರೆ. ಗ್ರಾಮಾಂತರ ಪ್ರದೇಶ ಮಾತ್ರವಲ್ಲದೆ, ಮೈಸೂರು ನಗರದ ಹಲವು ಪ್ರದೇಶಗಳನ್ನೂ ಚಾಮುಂಡೇಶ್ವರಿ ಕ್ಷೇತ್ರ ಒಳಗೊಂಡಿದೆ. ಕ್ಷೇತ್ರದ ಅಭಿವೃದ್ಧಿಗೆ ನಮ್ಮ ಸರ್ಕಾರ ಕೋಟ್ಯಾಂತರ ರೂ. ಅನುದಾನ ನೀಡಿದೆ. ಆದರೆ ಕ್ಷೇತ್ರದ ಶಾಸಕರು ಸಂಪೂರ್ಣವಾಗಿ ಅನುದಾನ ಬಳಸಿ, ಕ್ಷೇತ್ರವನ್ನು ಅಭಿವೃದ್ಧಿಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ದೂರಿದರು.

ಬೂತ್ ವಿಜಯ ಅಭಿಯಾನದ ಮೂಲಕ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ಜನಪರ ಯೋಜನೆಗಳನ್ನು ಪ್ರತಿಯೊಬ್ಬರ ಮನೆ ಮನೆಗೆ ತಿಳಿಸಲು ಕಾರ್ಯಕರ್ತರು ಮುಂದಾಗಬೇಕು ಎಂದು ಸಲಹೆ ನೀಡಿದರು. ಕ್ಷೇತ್ರದ ಬೂತ್ ವಿಜಯ ಅಭಿಯಾನದ ಸಂಚಾಲಕ ಹಿನಕಲ್ ಶ್ರೀನಿವಾಸ್, ಸಹ ಸಂಚಾಲಕ ಗೋಪಾಲ್‌ಗೌಡ, ಮುಖಂಡರಾದ ಸೋಮಶೇಖರ್, ಎನ್.ಕೆ.ರವಿಕುಮಾರ್, ಕೃಷ್ಣಮಹಾದೇವ, ನಿಂಗರಾಜು, ಮಲ್ಲಿಕಾರ್ಜುನಸ್ವಾಮಿ, ಮೋಹನ್‌ಕುಮಾರ್, ಚಂದ್ರಶೇಖರ್ ಪಟೇಲ್, ಕೆಂಚಪ್ಪ, ಸ್ಥಳೀಯ ಮುಖಂಡರಾದ ಸೋಮಣ್ಣ, ಗುರುಮಲ್ಲು, ಗುರುಸ್ವಾಮಿ, ಮಹದೇವು, ಮಂಜು, ಸುಂದ್ರಪ್ಪ, ಮಂಜು, ನಿಂಗರಾಜು, ಕೆಂಡಗಣ್ಣಸ್ವಾಮಿ, ಚೆನ್ನಿಗಸ್ವಾಮಿ ಸೇರಿದಂತೆ ಆಯಾಯ ಗ್ರಾಮಗಳ ಬಿಜೆಪಿ ಕಾರ್ಯಕರ್ತರು ಹಾಜರಿದ್ದರು.

# ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಜಾ ಪಾರ್ಟಿ ಸ್ಪರ್ಧೆ; ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನ

ಮೈಸೂರು,ಜ.14(ಪಿಎಂ)–ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಕರ್ನಾಟಕ ಪ್ರಜಾ ಪಾರ್ಟಿ (ರೈತಪರ್ವ) ರಾಜ್ಯದ 224 ಕ್ಷೇತ್ರಗಳಲ್ಲೂ ಸ್ಪರ್ಧಿಸಲು ನಿರ್ಧರಿಸಿದ್ದು, ಪಕ್ಷದಿಂದ ಅಭ್ಯರ್ಥಿಯಾಗಲಿಚ್ಛಿಸುವ ಆಕಾಂಕ್ಷಿಗಳು ಜ.25ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪಕ್ಷದ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಜನ ಕಲ್ಯಾಣ, ಭ್ರಷ್ಟಾಚಾರ ನಿರ್ಮೂಲನೆ, ಮದ್ಯಪಾನ ಮುಕ್ತ ನಾಡು ನಿರ್ಮಾಣ, ಕರ್ನಾಟಕದಲ್ಲಿ ಕನ್ನಡಿಗರೇ ಸಾರ್ವಭೌಮರೆಂದು ಸಾರುವ ಉದ್ದೇಶ, ಗುರಿಗಳೊಂದಿಗೆ ನಮ್ಮ ಪಕ್ಷವನ್ನು ಅಸ್ತಿತ್ವಕ್ಕೆ ತರಲಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ರಾಜ್ಯ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸಲು ನಿರ್ಧರಿಸಿದ್ದು, ಪ್ರಾಮಾಣಿಕರು, ಜನಸೇವೆಯಲ್ಲಿ ಆಸಕ್ತಿ ಇರುವವರು ಪಕ್ಷದ ಕಚೇರಿಯ ವಿಳಾಸಕ್ಕೆ (ನಂ.2002, 2ನೇ ಮಹಡಿ, ಹಿನಕಲ್ ರಿಂಗ್ ರಸ್ತೆ, ಫ್ಲೈಓವರ್ ಹತ್ತಿರ, ಮೈಸೂರು) ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಮೊ.ಸಂ. 93421 14996 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಆಡಳಿತಾವಧಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಪ್ರಸ್ತುತ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ಜೀವನ ತತ್ತರಿಸುವಂತಾಗಿದೆ. ಈ ಪಕ್ಷಗಳು ರಾಜಕಾರಣವನ್ನು ತಮ್ಮ ಪಿತ್ರಾರ್ಜಿತ ಆಸ್ತಿ ಎಂದು ಭಾವಿಸಿದಂತಿರುವ ಕಾರಣ, ದಿನೇದಿನೆ ಪ್ರಜಾಪ್ರಭುತ್ವ ಕ್ಷೀಣಿಸುತ್ತಿದೆ ಎಂದು ದೂರಿದರು.

**ಗೃಹ ಸಚಿವರ ರಾಜೀನಾಮೆಗೆ ಒತ್ತಾಯ:** ವೇಶ್ಯಾವಾಟಿಕೆ ದಂಧೆ ಆರೋಪಿ ಸ್ಯಾಂಟ್ರೋ ರವಿ ಬಂಧಿಸಲು ಇಷ್ಟು ವಿಳಂಬಕ್ಕೆ ಕಾರಣವೇನು? ದೂರದ ಗುಜರಾತ್‌ಗೆ ಹೋಗಿದ್ದು ಹೇಗೆ ಎಂದು ಪ್ರಶ್ನಿಸಿದರಲ್ಲದೆ, ಆರಗ ಜ್ಞಾನೇಂದ್ರ ಅವರು ಸಮರ್ಥವಾಗಿ ಗೃಹ ಇಲಾಖೆ ನಿಭಾಯಿಸುತ್ತಿಲ್ಲ. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಡಾ.ಬಿ.ಶಿವಣ್ಣ ಒತ್ತಾಯಿಸಿದರು. ಇದೇ ವೇಳೆ ಪಕ್ಷದ ಮಂಡ್ಯ ಜಿಲ್ಲಾ ಘಟಕದ ಕಾನೂನು ವಿಭಾಗದ ಅಧ್ಯಕ್ಷರಾಗಿ ಹಿರಿಯ ವಕೀಲ ಎಸ್.ಕೆ.ಶ್ರೀನಿವಾಸ್ ಹಾಗೂ ಪಕ್ಷದ ಹೆಚ್‌ಡಿ ಕೋಟೆ ತಾಲೂಕು ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾಗಿ ಮಾಲೇಗೌಡ ಅವರನ್ನು ನೇಮಕ ಮಾಡಿ, ಆದೇಶ ಪ್ರತಿ ನೀಡಲಾಯಿತು. ಪಕ್ಷದ ಪದಾಧಿಕಾರಿಗಳಾದ ಚೆಲುವರಾಜು, ಪಿ.ಕುಮಾರಸ್ವಾಮಿ, ತೇಜಸ್ವಿ ಪಾಟೀಲ್, ಮಂಜುನಾಥ್, ರವಿಕುಮಾರ್ ಗೋಷ್ಠಿಯಲ್ಲಿದ್ದರು.

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 15 ಭಾನುವಾರ 2023

ಸಂಪುಟ: 43 | ಸಂಚಿಕೆ: 269 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4






**ಬಿಡುವು**

ಸಂಕ್ರಾಂತಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 16.1.2023ರ ಸೋಮವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

# ಮೋದಿ, ಅಮಿತ್ ಶಾ ನೂರು ಬಾರಿ ಬಂದರೂ ರಾಜ್ಯದಲ್ಲಿ ಅಧಿಕಾರಕ್ಕೆ ಬಿಜೆಪಿ ಬರಲ್ಲ

- ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಭವಿಷ್ಯ
- ಈಗಿನ ಬಿಜೆಪಿ ಸರ್ಕಾರದಿಂದ ಜನ ಬೇಸತ್ತು ಹೋಗಿದ್ದಾರೆ
- ಜೆಡಿಎಸ್ ಅಧಿಕಾರಕ್ಕೆ ಬಂದರೆ ರೈತರಿಗೆ ಶಾಶ್ವತ ಯೋಜನೆ ಜಾರಿ



**ಬೆಂಗಳೂರು, ಜ.14(ಕೆಎಂಶಿ)– ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಕ್ಕೆ ನೂರು ಬಾರಿ ಬಂದರೂ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಭವಿಷ್ಯ ನುಡಿದಿದ್ದಾರೆ.**

ಬೆಂಗಳೂರು ಪ್ರೆಸ್ ಕ್ಲಬ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಮೋದಿ ಹೆಸರು ಮುಂದಿಟ್ಟುಕೊಂಡೇ ರಾಜ್ಯದ ಬಿಜೆಪಿ ನಾಯಕರು ಚುನಾವಣೆಗೆ ಹೋಗುತ್ತಿದ್ದಾರೆ. ಕಾಂಗ್ರೆಸ್‌ನವರು ಭಾರತ್ ಜೋಡೋ ಅಂತಾರೆ, ನಾವು ಕಾರ್ಯಕ್ರಮ ಆಧಾರದ ಮೇಲೆ ಮತ ಕೇಳುತ್ತಿದ್ದೇವೆ ಎಂದರು. ಮೈತ್ರಿ ಸರ್ಕಾರದ ಪತನದ ನಂತರ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂತು. ಅವರು ಕೊರೊನಾ, ಅಕಾಲಿಕ ಮಳೆ ಮತ್ತಿತರ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಇದು ಜನರ ಮೇಲೆ ಸಾಕಷ್ಟು ಪರಿಣಾಮ ಬೀರಿದೆ ಎಂದರು. ಬಿಜೆಪಿ ಸರ್ಕಾರದ ನಡವಳಿಕೆಯಿಂದ ಜನ ಬೇಸತ್ತು ಹೋಗಿದ್ದಾರೆ. ಮಂಡ್ಯಕ್ಕೆ ಅಮಿತ್ ಶಾ ಬಂದು ಹೋಗಿರೋದು ಪರಿಣಾಮ ಬೀರಲ್ಲ. ಬೇಕಿದ್ದರೆ ಬರೆದಿಟ್ಟುಕೊಳ್ಳಿ, ಮಂಡ್ಯದಲ್ಲಿ ಏಳಕ್ಕೆ ಏಳು ಕ್ಷೇತ್ರ ಮತ್ತೆ ಈ ಬಾರಿ ಜೆಡಿಎಸ್ ಗೆಲ್ಲುತ್ತದೆ. ನಾಡಿನ ಜನತೆ ಏನು ಬಯಸುತ್ತಾರೋ ಅದನ್ನು ಈಡೇರಿಸುವ ನಿಲುವು ನಮ್ಮದು. 2006ರಲ್ಲಿ ನಾವು 58 ಸ್ಥಾನ ಗೆದ್ದಿದ್ದೆವು. ಆಗ ಎಂ.ಪಿ.ಪ್ರಕಾಶ್ ಸೇರಿದಂತೆ ಅನೇಕ ನಾಯಕರು ಇದ್ದರು. ನಂತರ ಬಿಟ್ಟು ಹೋದರು. 2008, 2013 ಹಾಗೂ 2018ರಲ್ಲಿ ನಮ್ಮದು ಏಕಾಂಗಿ ಹೋರಾಟ ಆಯಿತು. ಏಕಾಂಗಿ ಹೋರಾಟದಲ್ಲೂ ನಾವು ಸಾಕಷ್ಟು ಸ್ಥಾನಗಳನ್ನು ಗೆದ್ದಿದ್ದೇವೆ. ಕಾಂಗ್ರೆಸ್ ಗೆದ್ದಿದ್ದು ನಮ್ಮ ದುಡಿಮೆಯಿಂದ. ಬಿ.ಎಸ್.ಯಡಿಯೂರಪ್ಪ ಆಗ ಬಿಜೆಪಿ ಬಿಟ್ಟಿದ್ದರಿಂದ ಅವರು ಅಧಿಕಾರಕ್ಕೆ ಬರಲು ಸಾಧ್ಯವಾಯಿತು. ಜೆಡಿಎಸ್, ಬಿಜೆಪಿ ಬಿ ಟೀಂ, ಅವರಿಗೆ ಮತ ಹಾಕಬೇಡಿ ಅಂತ ಇಡೀ ರಾಜ್ಯದಲ್ಲಿ ನಮ್ಮ ಪಕ್ಷದ ಬಗ್ಗೆ ಅಪಪ್ರಚಾರ ಮಾಡಿದರು.

▶ 8ನೇ ಪುಟಕ್ಕೆ

# ಮೈಸೂರು ವಿಜಯನಗರ ಠಾಣೆಯಲ್ಲಿ ಎಡಿಜಿಪಿ ಅಲೋಕ್‌ಕುಮಾರ್ ಖುದ್ದು ಸ್ಯಾಂಟ್ರೋ ರವಿ ವಿಚಾರಣೆ



ಮೈಸೂರು, ಜ.14(ಆರ್‌ಕೆ)–ಶುಕ್ರವಾರ ಗುಜರಾತ್‌ನಲ್ಲಿ ಬಂಧಿಸಿ ಕರೆತಂದಿರುವ ಲೈಂಗಿಕ ದೌರ್ಜನ್ಯ ಹಾಗೂ ಅಕ್ರಮ ಚಟುವಟಿಕೆ ಪ್ರಕರಣದ ಆರೋಪಿ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿಯನ್ನು ಮೈಸೂರಿನ ವಿಜಯನಗರ ಠಾಣೆಯಲ್ಲಿ, ಖುದ್ದು ಎಡಿಜಿಪಿ ಅಲೋಕ್‌ಕುಮಾರ್ ಇಂದು ವಿಚಾರಣೆ ನಡೆಸಿದರು. ಗುಜರಾತ್‌ನಿಂದ ವಿಮಾನದಲ್ಲಿ ಬಿಗಿ ಪೊಲೀಸ್ ಭದ್ರತೆಯೊಂದಿಗೆ ಕಳೆದ ಮಧ್ಯರಾತ್ರಿ ಬೆಂಗಳೂರಿಗೆ ಕರೆತಂದ ಪೊಲೀಸರು, ಅಲ್ಲಿಂದ ರಸ್ತೆ ಮೂಲಕ ಇಂದು ಮುಂಜಾನೆ ಅವನ ವಿರುದ್ಧ ಪ್ರಕರಣ ದಾಖಲಾಗಿರುವ ಮೈಸೂರಿನ ವಿಜಯನಗರ ಠಾಣೆಗೆ ಕರೆತಂದರು. ವಿಷಯ ತಿಳಿಯುತ್ತಿದ್ದಂತೆಯೇ ಬೆಳಗ್ಗೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಠಾಣೆಗೆ ಭೇಟಿ ನೀಡಿ, ಆರಂಭಿಕವಾಗಿ ಸ್ಯಾಂಟ್ರೋ ರವಿ ವಿಚಾರಣೆ ನಡೆಸಿದರು. ಆ ಸಂದರ್ಭ ಆತ ಪ್ರಕರಣ ಸಂಬಂಧ, ತಾನು ತಲೆಮರೆಸಿಕೊಂಡಿದ್ದರ ಬಗ್ಗೆ

▶ 8ನೇ ಪುಟಕ್ಕೆ

## ಸ್ಯಾಂಟ್ರೋ ರವಿ ನ್ಯಾಯಾಂಗ ಬಂಧನ



ಮೈಸೂರು, ಜ.14(ಆರ್‌ಕೆ) –ಲೈಂಗಿಕ ದೌರ್ಜನ್ಯ, ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿರುವ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿಯನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಶುಕ್ರವಾರ ಗುಜರಾತ್‌ನಲ್ಲಿ ಸೆರೆ ಸಿಕ್ಕಿದ್ದ ಸ್ಯಾಂಟ್ರೋ ರವಿ ಮತ್ತು ಇಬ್ಬರು ಸಹಚರರನ್ನು ಶನಿವಾರ ಮುಂಜಾನೆ ಮೈಸೂರಿಗೆ ಕರೆತಂದು ವಿಜಯನಗರ ಠಾಣೆಯಲ್ಲಿ ಪ್ರಕರಣ ಸಂಬಂಧ ಪ್ರಾಥಮಿಕ ಹಂತದ ವಿಚಾರಣೆ ನಡೆಸಿದ ಬಳಿಕ ಶನಿವಾರ ಸಂಜೆ ವಿವಿ ಮೊಹಲ್ಲಾದ ವಾಲ್ಮೀಕಿ ರಸ್ತೆಯಲ್ಲಿರುವ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನಿವಾಸದಲ್ಲಿ ಹಾಜರುಪಡಿಸಲಾಗಿ, ಆರೋಪಿಗಳನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರಾದ ಎಸ್.ಗುರುರಾಜ್

▶ 8ನೇ ಪುಟಕ್ಕೆ




# ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಪುತ್ರಿ ನಿಧನ



ಬೆಂಗಳೂರು, ಜ. 14–ಮೇಜರ್ ಜನರಲ್ ಕೊಂಗೇಟಿರ ಎಂ. ಚೆಂಗಪ್ಪ ಅವರ ಪತ್ನಿ ಮತ್ತು ಜನರಲ್ ಕೊಡಂದೆರ ಎಸ್. ತಿಮ್ಮಯ್ಯ ಅವರ ಏಕೈಕ ಪುತ್ರಿ ಕೊಂಗೇಟಿರ ಮಿರೇಲ್ ಅವರು ಶುಕ್ರವಾರ ಸಂಜೆ 7 ಗಂಟೆ ಸಮಯದಲ್ಲಿ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಮೃತರು ಪುತ್ರ ಕೆ.ಸಿ.ಬೆಳ್ಳಿಯಪ್ಪ ಮತ್ತು ಪುತ್ರಿ ಅಮೃತಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ಹೆಬ್ಬಾಳು ರುದ್ರಭೂಮಿಯಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಜನರಲ್ ಕೊಡಂದೆರ ಸುಬ್ಬಯ್ಯ ತಿಮ್ಮಯ್ಯ ಅವರು 1962ರಲ್ಲಿ ಚೀನಾದೊಂದಿಗೆ ಸಂಘರ್ಷಕ್ಕೆ ಕಾರಣವಾದ ನಿರ್ಣಾಯಕ ವರ್ಷಗಳಾದ 1957ರಿಂದ 1961ರವರೆಗೆ ಸೇನಾ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಜನರಲ್ ತಿಮ್ಮಯ್ಯ ಮತ್ತು ಅವರ ಪತ್ನಿ ನೀನ (ಕೋದಂಡ ಕುಟುಂಬ) ದಂಪತಿಗೆ ಮಿರೇಲ್ ಅವರು 1936ರಲ್ಲಿ ಜನಿಸಿದರು. ಅವರು 13 ವರ್ಷದವರಾಗಿದ್ದಾಗ ಶಾಲಾ ಶಿಕ್ಷಣಕ್ಕಾಗಿ ಫ್ರಾನ್ಸ್‌ಗೆ ಕಳುಹಿಸಲ್ಪಟ್ಟಿದ್ದರಿಂದ ಅವರಿಗೆ ಮಿರೆಲ್ ಎಂದು ಹೆಸರಿಸಲಾಯಿತು. ಅವರು ಸುಮಾರು 5 ವರ್ಷಗಳ ಕಾಲ ಫ್ರಾನ್ಸ್‌ನಲ್ಲಿ ವಾಸವಿದ್ದರು. ಫ್ರಾನ್ಸ್‌ನಲ್ಲಿ ಮಿರೇಲ್ ಎಂಬ ಹೆಸರು ಬಹಳ ಜನಪ್ರಿಯವಾದದ್ದು. ಮಿರೇಲ್ ಅವರು ಮುಸ್ಸೋರಿಯ ವುಡ್‌ಸ್ಟಾಕ್‌ಗೆ ತೆರಳುವ ಮೊದಲು ಬೆಂಗಳೂರಿನ ಬಿಷಪ್ ಕಾಟನ್ ಗರ್ಲ್ಸ್ ಸ್ಕೂಲ್‌ನಲ್ಲಿ ಕೆಲವು ವರ್ಷಗಳು ವ್ಯಾಸಂಗ ಮಾಡಿದ್ದರು. ನಂತರ ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕೆಲಸ ಮಾಡಿದರು. ಅವರ ಪುತ್ರ (ಜನರಲ್ ತಿಮ್ಮಯ್ಯ ಅವರ ಮೊಮ್ಮಗ) ಬೆಳ್ಳಿಯಪ್ಪ ಅವರು ಬೆಂಗಳೂರಿನಲ್ಲಿ ವಾಸವಿದ್ದು, ವೃತ್ತಿಯಲ್ಲಿ ಛಾಯಾಗ್ರಾಹಕರಾದ ನಿಕೋಲ್ ಅವರನ್ನು ವಿವಾಹವಾಗಿದ್ದಾರೆ. ಜನರಲ್ ಅವರ ಮೊಮ್ಮಗಳು ಅಮೃತ ಚೆಂಗಪ್ಪ ಅವರು ಜರ್ಮನಿಯವರನ್ನು ಮದುವೆಯಾಗಿದ್ದು, ಉತ್ತರಾಂಚಲದಲ್ಲಿರುವ ಅಲ್‌ಮೋರಾದಲ್ಲಿ ವಾಸವಿದ್ದಾರೆ.





# ಇಂದು ಎಂಆರ್‌ಸಿ ಮೈದಾನದಲ್ಲಿ ಯೋಗಥಾನ್

## ಅಧಿಕಾರಿಗಳಿಂದ ಸಕಲ ಸಿದ್ಧತೆ ಪರಿಶೀಲನೆ; 40ರಿಂದ 50 ಸಾವಿರ ಮಂದಿಯಿಂದ ಯೋಗ ಪ್ರದರ್ಶನ



ಮೈಸೂರು, ಜ.14 (ಆರ್‌ಕೆ)– ಮೈಸೂರಿನ ಎಂಆರ್‌ಸಿ ಮೈದಾನದಲ್ಲಿ ನಾಳೆ (ಜ.15) ಬೆಳಗ್ಗೆ ಯೋಗಥಾನ್ ಏರ್ಪಡಿಸಲಾಗಿದೆ. ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಮೈಸೂರು ಮಹಾನಗರ ಪಾಲಿಕೆ, ಆಯುಷ್ ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ, ಶಿಕ್ಷಣ ಇಲಾಖೆ, ಯೋಗ ಫೆಡರೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಯೋಗಥಾನ್‌ನಲ್ಲಿ 40ರಿಂದ 50 ಸಾವಿರ ಮಂದಿ ಪಾಲ್ಗೊಂಡು ಯೋಗ ಪ್ರದರ್ಶನ ಮಾಡುವರು. ಯೋಗಥಾನ್‌ಗಾಗಿ

▶ 8ನೇ ಪುಟಕ್ಕೆ





## ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : ಮಕ್ಕಳೇ ಇಂದು ನಾನು ಹೇಳುವ ಪಾಠ ಬಹಳ ಮಹತ್ವದ್ದು. ಆದ್ದರಿಂದ ನೀವೆಲ್ಲರೂ ಲಕ್ಷ್ಯ ಕೊಟ್ಟು ಕೇಳಬೇಕು.

ವಿದ್ಯಾರ್ಥಿಯೋರ್ವ : ಸಾರ್ ನಿಮ್ಮ ಆ ಮಹತ್ವದ ಪಾಠವನ್ನು ನಾವು 'ಲಕ್ಷ' ಕೊಟ್ಟು ಕೇಳಬೇಕೆ?

ಮೈಸೂರು ಮಿತ್ರ

ಭಾನುವಾರ, 15 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

**ಅಮೃತವಾಹಿನಿ.........**

ಮನುಷ್ಯರು ಹುಟ್ಟಿನಿಂದಲೇ ಮಹಾನ್ ವ್ಯಕ್ತಿಗಳಾಗಿರುವುದಿಲ್ಲ. ತಮ್ಮ ಕರ್ಮ ಫಲದಿಂದ ಮಹಾನ್ ವ್ಯಕ್ತಿಗಳಾಗುತ್ತಾರೆ. – ಭಗವಾನ್ ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಗುಣಿತ ಬಾರದವನಿಗೆ ಕಾವ್ಯದ ಗೊಡವೆ ಏಕೆ

## ನಿಮ್ಮ ಪತ್ರಗಳು

### ಬೆಟ್ಟದ ಪರಿಸರ ಸಂರಕ್ಷಿಸೋಣ

ಮಾನ್ಯರೆ,

ಮೈಸೂರು ಎಂದರೆ ಮಹಿಷನೂರು, ಮಹಿಷ, ಚಾಮುಂಡಿ, ಅರಮನೆ, ಸಾಂಸ್ಕೃತಿಕ ನಗರಿ ಹೀಗೆ ಹತ್ತು ಹಲವು ವೈಶಿಷ್ಟ್ಯಗಳೊಂದಿಗೆ ತನ್ನದೇ ಆದಂತಹ ಅಪಾರ ಹಿರಿಮೆ, ಗರಿಮೆಯನ್ನು ಹೊಂದಿದೆ. ಹಾಗೆಯೇ ನಮ್ಮ ಮೈಸೂರಿನ ಚಾಮುಂಡಿ ಬೆಟ್ಟ ಅಲ್ಲಿನ ಪ್ರಕೃತಿ ಸೌಂದರ್ಯ, ಅಲ್ಲಿನ ನವಿರಾದ ತಂಗಾಳಿ, ಹಕ್ಕಿ ಪಕ್ಷಿಗಳ ಕಲರವ ಹೀಗೆ ಅಪಾರವಾದ ಪ್ರಕೃತಿ ಸೌಂದರ್ಯದಿಂದಾಗಿಯೇ ಕಣ್ಮನ ಸೆಳೆಯುತ್ತಿದೆ. ಈ ಬೆಟ್ಟದಲ್ಲಿ ಕಳೆದ ವರ್ಷದಲ್ಲಿ 3 ಬಾರಿ ಕುಸಿದು ಮೈಸೂರಿಗರಲ್ಲಿ ಭಾರಿ ಆತಂಕವನ್ನುಂಟು ಮಾಡಿದೆ. ಇಷ್ಟೆಲ್ಲಕ್ಕೂ ಕಾರಣ ನಮ್ಮ ಮಾನವರ ದುರಾಸೆಯ ಫಲವೇ ಹೊರತು ಬೇರೇನೂ ಅಲ್ಲ. ಅಭಿವೃದ್ಧಿಯ ಹೆಸರಲ್ಲಿ ಬೆಟ್ಟ ಕಡಿದು ವಿವಿಧ ಕಟ್ಟಡಗಳನ್ನು ನಿರ್ಮಿಸಿದ್ದು ಇದು ಇಂದು ಚಾಮುಂಡಿಬೆಟ್ಟ ಕುಸಿಯಲು ಪರೋಕ್ಷವಾಗಿ ಕಾರಣವಾಗಿದೆ. ಇಷ್ಟಿದ್ದರೂ ಇತ್ತೀಚೆಗೆ ನಮ್ಮ ಸರ್ಕಾರ ಪ್ರಸಾದ್ ಯೋಜನೆಯಡಿ ವಿವಿಧ ಯೋಜನೆಗಳನ್ನು ರೂಪಿಸಿ ಅಭಿವೃದ್ಧಿ ಕೆಲಸದ ಹೆಸರಲ್ಲಿ ಮತ್ತೆ ಬೆಟ್ಟದ ಪರಿಸರವನ್ನು ನಾಶ ಮಾಡಲು ಹೊರಟಿರುವುದು ದೊಡ್ಡ ದುರಂತ.

ಹೀಗಾಗಿ ಮುಂದಿನ ದಿನಗಳಲ್ಲಾದರೂ ಆದಷ್ಟು ಪ್ರವಾಸೋದ್ಯಮಕ್ಕೆ ಕಡಿವಾಣ ಹಾಕಿ, ಇದ್ದಷ್ಟೆ ಕಟ್ಟಡಗಳನ್ನು ಉಳಿಸಿಕೊಂಡು ಹೊಸ ಕಟ್ಟಡಗಳಿಗೂ ಕಡಿವಾಣ ಹಾಕುವ ಮೂಲಕ ನಮ್ಮ ಹೆಮ್ಮೆಯ ಚಾಮುಂಡಿ ಬೆಟ್ಟದ ಹಸಿರು ಪರಿಸರವನ್ನು ಹಾಗೂ ಅಲ್ಲಿನ ಪ್ರಾಣಿ ಪಕ್ಷಿ ಸಂಕುಲವನ್ನು ಸಂರಕ್ಷಿಸಿಕೊಂಡು ಅಲ್ಲಿನ ಅರಣ್ಯವನ್ನು ಪೋಷಿಸಿಕೊಂಡು ಉಳಿಸಿಕೊಳ್ಳಲೇ ಬೇಕಾಗಿದೆ.

ಇಲ್ಲವಾದಲ್ಲಿ ಇತ್ತೀಚೆಗೆ ಉತ್ತರಾಖಂಡದ ಪ್ರಸಿದ್ಧ ಜೋಶಿಮಠ ಪಟ್ಟಣವು ಎದುರಿಸುತ್ತಿರುವ ಭೂಕುಸಿತದ ಭೀತಿಯನ್ನು ನಾವು ಸಹ ಭವಿಷ್ಯದಲ್ಲಿ ಎದುರಿಸಬೇಕಾಗಬಹುದು. ಹಾಗಾಗಿ ಆದಷ್ಟು ಬೇಗ ನಾವೆಲ್ಲಾ ಎತ್ತೆಚ್ಚುಕೊಂಡು ತಜ್ಞರುಗಳ ಸೂಕ್ತ ಸಲಹೆ ಪಡೆದು ಕುಸಿಯುತ್ತಿರುವ ಬೆಟ್ಟವನ್ನು ಉಳಿಸಿಕೊಳ್ಳುವ ಮೂಲಕ ನಮ್ಮ ಮುಂದಿನ ಪೀಳಿಗೆಗೆ ಸ್ವಚ್ಛಂದವಾದ ಪರಿಸರ ಉಳಿಸಬೇಕಾಗಿದೆ. ಹಾಗಾಗಿ ಅನಿವಾರ್ಯವಾಗಿ ಆದರೂ ಬೆಟ್ಟದ ಪರಿಸರವನ್ನು ಎಲ್ಲಾ ಸೇರಿ ಸಂರಕ್ಷಿಸಬೇಕಿದೆ.

**–ಅಪುರಾ, ಪರಿಸರ ಪ್ರೇಮಿ, ಲೋಕನಾಯಕನ ನಗರ, ಮೈಸೂರು.**

### ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ 'ಕಾವೇರಿ ಎಕ್ಸ್‌ಪ್ರೆಸ್‌ವೇ' ಹೆಸರು ಸೂಕ್ತ

ಮಾನ್ಯರೆ,

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ಯಾವ ಹೆಸರು ಸೂಕ್ತ ಎನ್ನುವುದಕ್ಕೆ ಕೆಲವರು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಭಿವೃದ್ಧಿ ಕೊಡುಗೆ ಅಪಾರ. ಈ ಹೆದ್ದಾರಿಯ ಕೆಲಸ–ಕಾರ್ಯಗಳು ಮುಗಿಯುತ್ತಾ ಬಂದಿರುವುದರಿಂದ ಇದರ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ದಶಪಥ ಹೆದ್ದಾರಿಗೆ "ಕಾವೇರಿ ಎಕ್ಸ್‌ಪ್ರೆಸ್ ವೇ" ಹೆಸರು ಸೂಕ್ತ ಎಂದಿರುತ್ತಾರೆ. ಆದರೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮತ್ತು ಮಂಡ್ಯ ಸಂಸದೆ ಶ್ರೀಮತಿ ಸುಮಲತಾ ಅವರು ಒಡೆಯರ್ ಹೆಸರು ಸೂಕ್ತ ಎಂದಿದ್ದಾರೆ. ಮತ್ತೆ ಕೆಲವರು ಸರ್.ಎಂ.ವಿಶ್ವೇಶ್ವರಯ್ಯ ಅವರ ಹೆಸರು ಸೂಕ್ತ ಎಂದಿರುತ್ತಾರೆ. (ಸರ್ ಎಂ.ವಿ. ಅವರ ಹೆಸರು ಸೂಕ್ತವಾಗಿದ್ದರೂ ಕೆಲವು ಕಾರಣಗಳಿರುವುದರಿಂದ ವಿಮರ್ಶಿಸಬೇಕಾಗುತ್ತದೆ). ಹೆಚ್ಚಿನ ಜನರ ಅಭಿಪ್ರಾಯವು ಕೂಡ ಕಾವೇರಿ ಎಕ್ಸ್‌ಪ್ರೆಸ್ ವೇ ಕಡೆಗೆ ಇರುವುದರಿಂದ, ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ಮೈಸೂರು ನಗರ ಹಾಗೂ ಸುತ್ತಮುತ್ತಲೂ ಇರುವುದರಿಂದ ಕಾವೇರಿ ನದಿ ಕೊಡಗಿನಲ್ಲಿ ಹುಟ್ಟಿ ಮೈಸೂರು ಇತರೆ ಕಡೆಗಳಲ್ಲಿ ಹರಿಯುವುದರಿಂದ ದಶಪಥ ಹೆದ್ದಾರಿಗೆ "ಕಾವೇರಿ ಎಕ್ಸ್‌ಪ್ರೆಸ್ ವೇ" ಹೆಸರು ಸೂಕ್ತವಾಗಿರುತ್ತದೆ.

**–ಬೆಸಗರಹಳ್ಳಿ ವೆಂಕಟರಾಮು, ವಿವೇಕಾನಂದನಗರ, ಮೈಸೂರು**

### ಮೈಸೂರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಸ್ವಾಗತಾರ್ಹ

ಮಾನ್ಯರೆ,

ಹಲವು ಕ್ರೀಡೆಗಳಲ್ಲಿ ಕ್ರಿಕೆಟ್ ಕ್ರೀಡೆಯು ಒಂದು. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರನ್ನು ಅತ್ಯಂತ ವೇಗವಾಗಿ ತನ್ನತ್ತ ಸೆಳೆಯುತ್ತಿದೆ. ಹಲವು ವರ್ಷಗಳಿಂದ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಮೈಸೂರಿನಲ್ಲಿ ಆಗಬೇಕೆಂಬ ಕನಸು ಕಾಣುತ್ತಿದ್ದ ಅಭಿಮಾನಿಗಳಿಗೆ ನನಸಾಗುವ ದಿನಗಳು ಹತ್ತಿರದಲ್ಲಿವೆ. ಇದು ಸ್ವಾಗತಾರ್ಹ ವಿಷಯ.

ಮೈಸೂರಿಗೆ ಹತ್ತಿರವಿರುವ ಚಾ.ನಗರ ಜಿಲ್ಲೆ, ಊಟಿ, ಕ್ಯಾಲಿಕಟ್, ಕೊಯಮತ್ತೂರು, ಕಾಸರಗೋಡು, ಮಂಗಳೂರು ಇನ್ನಿತರ ಭಾಗದ ಜನರು ಇಲ್ಲಿ ಅಂತರರಾಷ್ಟ್ರೀಯ ಸ್ಟೇಡಿಯಂ ಆದರೆ ಬರುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದರಿಂದ ಮೈಸೂರಿನ ಪ್ರವಾಸೋದ್ಯಮಕ್ಕೂ ಕೂಡ ಲಾಭಾಂಶ ಸಿಗಬಹುದು. ಕ್ರೀಡಾಂಗಣ ನಿರ್ಮಾಣಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈಗಾಗಲೇ ಬಿರುಸಿನ ಕಾರ್ಯ ಚಟುವಟಿಕೆ ಆರಂಭಿಸಿರುವುದರಿಂದ ಮೈಸೂರಿನ ಜನರು ಹರ್ಷ ವ್ಯಕ್ತಪಡಿಸುತ್ತಿದ್ದಾರೆ. ಮುಡಾ ಅಧ್ಯಕ್ಷರು, ಆಯುಕ್ತರು ಈಗಾಗಲೇ ಸ್ಥಳ ಪರಿಶೀಲಿಸಿರುವ ಪ್ರದೇಶದಲ್ಲಿ (20 ಎಕರೆ 8 ಗುಂಟೆ) ಬೆಳೆದಿರುವ ಗಿಡ ಮರಗಳಿಂದ ಮೈಸೂರಿಗೆ ಸಾಕಷ್ಟು ಆಮ್ಲಜನಕ ದೊರೆಯುತ್ತಿರುವುದನ್ನು ಮರೆಯಬಾರದು. ಬೆಳೆದಿರುವ ಗಿಡ ಮರಗಳ ತೆರವಿಗೆ 14 ಲಕ್ಷ ರೂಗೆ ಟೆಂಡರ್ ನೀಡಲು ಮುಂದಾಗಿದ್ದು ಮತ್ತು ಈ ಕ್ರೀಡಾಂಗಣ ನಿರ್ಮಾಣ ಆದರೆ ಮೈಸೂರಿನ ರಿಯಲ್ ಎಸ್ಟೇಟ್ ಲಾಭಾಂಶ ಪಡೆಯಬಹುದಾಗಿದೆ. ಇದರಂತೆ ಕ್ರೀಡಾಂಗಣ ನಿರ್ಮಾಣದ ಜಾಗದಲ್ಲಿರುವ ಮರಗಿಡಗಳನ್ನು ತೆರವುಗೊಳಿಸುವುದರಿಂದ ಮೈಸೂರಿನಲ್ಲಿ "ಪರಿಸರ ನಾಶವಾಗಲಿದ್ದು, ಹಸಿರೇ ನಮ್ಮ ಉಸಿರಾಗಿದೆ. ಆ ಜಾಗದಲ್ಲಿ ತೆರವುಗೊಳಿಸಿದಂತೆ ಈ ವಿಷಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ನಡೆಸಿ ಒಂದಿಷ್ಟು ಹಣವನ್ನು ವ್ಯಯಮಾಡಿ ತೋಟಗಾರಿಕೆ ಇಲಾಖೆಗೆ ಟೆಂಡರ್ ನೀಡಿ ಮೈಸೂರಿನಾದ್ಯಂತ ಖಾಲಿ ಇರುವ ಸ್ಥಳಗಳಲ್ಲಿ ಗಿಡಗಳನ್ನು ಪೋಷಣೆ ಮಾಡಿ ಉತ್ತಮ ಆರೋಗ್ಯ, ಉತ್ತಮ ಆಮ್ಲಜನಕ ನೀಡಲು ನೀಡಲು ಕ್ರಮಕೊಳ್ಳಬೇಕು.

**–ನಾಗೇಶ್, ಮಾನಸಗಂಗೋತ್ರಿ, ಮೈಸೂರು.**

### ರಾವಂದೂರಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಸುಮಾರು ಒಂದೂವರೆ ವರ್ಷದಿಂದ ಮೈಸೂರು ಹಾಗೂ ಹುಣಸೂರು ಘಟಕದ ವತಿಯಿಂದ ಹುಣಸೂರು, ಮಾಕೋಡು, ಬೆಟ್ಟದಪುರ ಹಾಗೂ ರಾಮನಾಥಪುರ ಮಾರ್ಗ ರೂಟ್ ನಂಬರ್ 73ರ ಬಸ್ ಸೌಲಭ್ಯ ಸ್ಥಗಿತಗೊಂಡಿದೆ ಇದರಿಂದ ವಿದ್ಯಾರ್ಥಿಗಳು, ವ್ಯಾಪಾರಸ್ಥರು ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಸಾಲಿಗ್ರಾಮ, ಪಿರಿಯಾಪಟ್ಟಣ, ಕುಶಾಲನಗರ ಮಾರ್ಗದ ಮಡಿಕೇರಿ ಘಟಕದ ಬಸ್ ಸೌಲಭ್ಯವನ್ನು ಹೊಸದಾಗಿ ಆರಂಭಿಸಬೇಕು ಹಾಗೂ ಹುಣಸೂರು ಘಟಕದ ವತಿಯಿಂದ ಮಾಕೋಡು, ಬೆಟ್ಟದಪುರ ಮಾರ್ಗವಾಗಿ ಪ್ರತಿದಿನ ಸಂಚರಿಸುವಂತೆ ನೂತನ ಬಸ್ ಸೌಲಭ್ಯ ಒದಗಿಸಿ ಕೊಡಬೇಕೆಂದು ಮನವಿ.

**– ಬಸವರಾಜ್, ರಾವಂದೂರು ವರ್ತಕರ ಸಂಘದ ಗೌರವಾಧ್ಯಕ್ಷ.**

# ಆಧ್ಯಾತ್ಮಿಕ ಅರಿವಿನ ನಿರಾಭಾರಿ ನಮ್ಮ ಸಿದ್ದೇಶ್ವರ ಶ್ರೀಗಳು

ನುಡಿದಂತೆ ನಡೆಯುವ ಯಾರಾದರೂ ನಮ್ಮ ಕಣ್ಣ ಮುಂದೆ ಇದ್ದರು ಅಂದರೆ ಅವರೊಬ್ಬರೇ ಸರಳ, ಸಜ್ಜನಿಕೆಯ ನಡೆದಾಡುವ ದೇವರೆಂದೇ ಲಕ್ಷಾಂತರ ಭಕ್ತರ ಆರಾಧ್ಯರು, ಪರಮಪೂಜ್ಯ ಬಿಜಾಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು.

ಪೂಜ್ಯರು ಬೆಳಗಿನ ತಂಪಾದ ವಾತಾವರಣದಲ್ಲಿ ಸಾವಿರಾರು ಭಕ್ತ ಸಮೂಹಕ್ಕೆ ಸರಳ, ಸುಂದರ ಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ನೀಡುತ್ತಿದ್ದ ಒಂದು ಗಂಟೆ ಪ್ರವಚನವನ್ನು ಸುಮಾರು 50 ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಅವರ ಪ್ರವಚನವನ್ನು ಒಮ್ಮೆ ಕೇಳಿದರೆ ಸಾಕು ಮತ್ತೆ ಎಂದಿಗೂ ಅವರ ಪ್ರವಚನಕ್ಕೆ ಜನ ತಪ್ಪಿಸಿಕೊಳ್ಳುತ್ತಿರಲಿಲ್ಲ.

ಅವರ ಪ್ರವಚನದ ಸಮಯದಲ್ಲಿ ಎಷ್ಟು ಸಾವಿರ ಜನರಿದ್ದರೂ ಗುಂಡು ಸೂಜಿ ಬಿದ್ದರೂ ಕೇಳಿಸುವಂತಹ ನಿಶ್ಶಬ್ದ. ಅಷ್ಟೇನು ಬೆಳ್ಳಗಿರದ ಜುಬ್ಬ, ಒಂದು ಬಿಳಿಪಂಚೆ, ಕತ್ತಲ್ಲಿ ಬಿಳಿವಸ್ತ್ರ, ಮೂಗಿನಮೇಲೆ ದಪ್ಪದಾದ ಗಾಜಿನ ಕನ್ನಡಕ, ತೆಳುವಾದ ದೇಹ, ತಲೆ ಮೇಲೆ ತೆಳ್ಳನೆಯ ಕೂದಲು, ಹೊರ ನೋಟಕ್ಕೆ ಅಷ್ಟೇನೂ ಆಕರ್ಷಣೀಯವಲ್ಲದ ಸರಳ–ಸಜ್ಜನಿಕೆಯ ಸಾಕಾರ ಮೂರ್ತಿ. ಆದರೂ ಎದುರುಗಡೆ ಕುಳಿತ ಸಾವಿರಾರು ಭಕ್ತರ ಮುಖದಲ್ಲಿ ಅವರ ಬಗ್ಗೆ ಅಪಾರವಾದ ಭಕ್ತಿಭಾವ. ನನ್ನದು ತನ್ನದೆಂಬ ಮಮಕಾರ ತೊರೆದ ಮಹಾಪುರುಷರು ಶ್ರೀ ಸಿದ್ಧೇಶ್ವರ ಸ್ವಾಮಿಗಳು. ಇವರು ಸಂತರಷ್ಟೇ ಅಲ್ಲ, ಜ್ಞಾನೋಪಾಸಕರು ಕೂಡ. ಸಂತರು ನಾಡಿನಲ್ಲಿ ಬಹಳ ಜನರಿದ್ದರೂ ಇಂತಹ ಜ್ಞಾನಯೋಗಿಗಳು ಅಪರೂಪದಲ್ಲಿ ಅಪರೂಪ.

ಇವರ ಗುರುಗಳಾದ ವೇದಾಂತಕೇಸರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಕಾಲದಲ್ಲಿ ಬಿಜಾಪುರದ ಜ್ಞಾನಯೋಗಾಶ್ರಮ ಜನತೆಗೆ ಜ್ಞಾನದಾಸೋಹ ನೀಡುವ ವಿಶಿಷ್ಟ ಕೇಂದ್ರವಾಯಿತು. ಶ್ರೀಗಳ ನಿಸ್ವಾರ್ಥ ಸೇವೆ, ಯಾರ ಹಂಗಿಗೂ ಒಳಗಾಗದೆ ಸರ್ವ ಜನರಿಂದಲೂ ಪ್ರೀತಿ ವಿಶ್ವಾಸದ ಆಶ್ರಯ ತಾಣವಾಗಿ ಬೆಳೆಯಿತು.

ಹಿರಿಯ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಕರ್ನಾಟಕ ಮಹಾರಾಷ್ಟ್ರದ ಪ್ರಮುಖ ನಗರಗಳಲ್ಲಿ ತಿಂಗಳುಗಟ್ಟಲೆ ಪ್ರವಚನ ನೀಡುತ್ತಿದ್ದರು. ಜೊತೆಗೆ ಗ್ರಾಮೀಣ ಪ್ರದೇಶದ ಮಕ್ಕಳು ವಿದ್ಯೆಗಾಗಿ ಕಷ್ಟಪಡುತ್ತಿದ್ದುದನ್ನು ನೋಡಿ ಅವರಿಗಾಗಿ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸುವ ಮೂಲಕ ವಿದ್ಯೆ, ಊಟ, ವಸತಿ ಕಲ್ಪಿಸಿದ ಮೇಲೆ ಸಾವಿರಾರು ಮಕ್ಕಳು ವಿದ್ಯಾವಂತರಾದರು. ಹಾಗೆ ವಿದ್ಯೆ ಕಲಿಯಲು ಬಂದ ಸಾವಿರಾರು ಮಕ್ಕಳಲ್ಲಿ ಶ್ರೀ ಸಿದ್ಧೇಶ್ವರ ಶ್ರೀಗಳು ಕೂಡ ಒಬ್ಬರು. ಇವರಂತೆ ಮೈಸೂರಿನಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸಹ ವಿದ್ಯಾಭ್ಯಾಸಕ್ಕಾಗಿ ಕಷ್ಟಪಡುತ್ತಿದ್ದುದನ್ನು ನೋಡಿ ತಾವು ಸಹ ವಿದ್ಯಾರ್ಥಿನಿಲಯಗಳು ನಂತರ ಶಾಲಾ ಕಾಲೇಜುಗಳನ್ನು ಪ್ರಾರಂಭಿಸಿ ಸಾವಿರಾರು ಜನರಿಗೆ ಜೀವನಾಧಾರವಾಗಿದ್ದನ್ನು ಸ್ಮರಿಸಬಹುದು.

ಸಿದ್ಧೇಶ್ವರ ಶ್ರೀಗಳು 1941 ಸೆಪ್ಟೆಂಬರ್ 5ರಂದು ವಿಜಾಪುರ ಜಿಲ್ಲೆ ಬಿಜ್ಜರಗಿ ಗ್ರಾಮದ ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದರು. ಅಲ್ಲಿನ ಬಡತನ, ನಿರಕ್ಷರತೆಯ ವಾತಾವರಣದಲ್ಲಿ ಊರಿನ ಶಾಲೆಯಲ್ಲಿ ನಾಲ್ಕನೇ ತರಗತಿ ಓದಿ ನಂತರ ಮಲ್ಲಿಕಾರ್ಜುನ ಸ್ವಾಮಿಗಳ ಬಳಿ ಬಂದರು. ಕ್ರಮೇಣ ಬಾಲಕ ಸಿದ್ಧೇಶ್ವರನ ಚುರುಕುತನ ಮಲ್ಲಿಕಾರ್ಜುನ ಸ್ವಾಮಿಗಳ ಮನ ಸೆಳೆಯಿತು. ಅವರು, ತಾವು ಪ್ರವಚನ ಮಾಡುವ ಸ್ಥಳಗಳಿಗೆ ಸಿದ್ಧೇಶ್ವರರನ್ನು ಕರೆದುಕೊಂಡು ಹೋಗುತ್ತಿದ್ದರು. ಜೊತೆಯಲ್ಲಿ ಶಾಲಾ ಕಾಲೇಜುಗಳ ವಿದ್ಯಾಭ್ಯಾಸವೂ ಮುಂದುವರಿಯುವಂತೆ ನೋಡಿಕೊಂಡರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ, ನಂತರ ಕೊಲ್ಹಾಪುರ ವಿಶ್ವವಿದ್ಯಾನಿಲಯದಿಂದ ತತ್ವಶಾಸ್ತ್ರದಲ್ಲಿ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡಿದರು.

ಎಂ.ಎ. ಪದವಿ ಅಭ್ಯಾಸದ ಸಮಯದಲ್ಲಿ ತಮ್ಮ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಾಡಿದ ಪ್ರವಚನಗಳನ್ನು ಒಂದುಗೂಡಿಸಿ 'ಸಿದ್ಧಾಂತ ಶಿಖಾಮಣಿ' ಪುಸ್ತಕ ಪ್ರಕಟಿಸಿದರು. ಆಗ ಅವರಿಗೆ ಕೇವಲ 19 ವರ್ಷ. ಸ್ನಾತಕೋತ್ತರ ಪದವಿ ಪಡೆದು ಬಿಜಾಪುರಕ್ಕೆ ಹಿಂದಿರುಗಿದ ನಂತರ ಸಿದ್ಧೇಶ್ವರರಿಗೆ ಭಗವದ್ಗೀತೆ, ಉಪನಿಷತ್ತುಗಳ ಬಗ್ಗೆ ಮಲ್ಲಿಕಾರ್ಜುನ ಸ್ವಾಮಿಗಳು ವ್ಯಾಖ್ಯಾನ ನೀಡಿ ಅವರ ಜ್ಞಾನ ದಿಗಂತವನ್ನು ಮತ್ತಷ್ಟು ವಿಸ್ತೃತಗೊಳಿಸಿದರು. ಗುರುಗಳ ಮುಖಾಂತರ ಕಲಿತ ಭಗವದ್ಗೀತೆ, ಉಪನಿಷತ್ತುಗಳು, ಯೋಗಸೂತ್ರ, ವಚನಶಾಸ್ತ್ರ ಮುಂತಾದ ವಿಷಯಗಳ ಕುರಿತಾಗಿ ಪ್ರವಚನ ನೀಡಲು ಪ್ರಾರಂಭಿಸಿದರು. ಗಹನವಾದ ವೇದಾಂತ ತತ್ವಗಳನ್ನು ಅತ್ಯಂತ ಸರಳವಾಗಿ ಜನಮಾನಸದಲ್ಲಿ ಉಳಿಯುವಂತೆ ವಿವರಿಸುವುದೇ ಅವರ ವೈಶಿಷ್ಟ್ಯವಾಗಿತ್ತು. ಪ್ರವಚನದುದ್ದಕ್ಕೂ ಅವರ ಸರಳ ಭಾಷೆ, ಧಾಟಿ, ಪದಪ್ರಯೋಗ ಜೊತೆಗೆ ಗಿಡ, ಮರ, ಹಕ್ಕಿ, ಪಕ್ಷಿ, ಪ್ರಾಣಿಗಳಲ್ಲಿಯೂ ಜೀವಚೈತನ್ಯ ಇದೆ ಎಂಬುದನ್ನು ಅದ್ಭುತವಾಗಿ ವಿವರಿಸುತ್ತಿದ್ದರು.

ಒಮ್ಮೆ ಸುತ್ತೂರು ಶ್ರೀಗಳು ನಾನು ಸೇರಿದಂತೆ ಕೆಲವರನ್ನು ಬಿಜಾಪುರದ ಜ್ಞಾನಯೋಗಾಶ್ರಮಕ್ಕೆ ಹಿರಿಯ ಗುರುಗಳ ಪುಣ್ಯಾರಾಧನೆ ಸಂದರ್ಭ ಕಳುಹಿಸಿಕೊಟ್ಟಿದ್ದರು. ಬೆಳಗ್ಗೆ 6:00ಕ್ಕೆ ಮೈಸೂರು ಬಿಟ್ಟ ನಾವು ಚಿತ್ರದುರ್ಗ ಮುಖಾಂತರ ರಾತ್ರಿ 9.15ಕ್ಕೆ ಬಿಜಾಪುರ ತಲುಪಿದೆವು. ಅಲ್ಲಿ ನಮಗಾಗಿ ವ್ಯವಸ್ಥೆಗೊಳಿಸಿದ್ದ ವಸತಿಗೃಹ ತಲುಪಿದೆವು. 9.30ಕ್ಕೆ ಆಶ್ರಮದಿಂದ ಭಕ್ತರೊಬ್ಬರು ಬಂದು ನೀವೆಲ್ಲ ಈಗ ಪ್ರಸಾದ ಸೇವಿಸಿ ಮಲಗಿಕೊಳ್ಳಿ. ಬೆಳಗ್ಗೆ 3.45ಕ್ಕೆ ಸರಿಯಾಗಿ ಎಲ್ಲರೂ ರೆಡಿಯಾಗಿರಿ, ನಾವು ಬಂದು ನಿಮ್ಮನ್ನು ಆಶ್ರಮಕ್ಕೆ ಕರೆದುಕೊಂಡು ಹೋಗುತ್ತೇವೆ ಎಂದು ತಿಳಿಸಿ, ಹೊರಟುಹೋದರು. ನಮಗೆ ಆಗ ಅದು ತಮಾಷೆಯೆನಿಸಿದರೂ, ಅವರು ಹೇಳಿದ ಸಮಯಕ್ಕೆ ಸರಿಯಾಗಿ ರೆಡಿಯಾಗಿದ್ದೆವು. ಅವರ ಜೊತೆ ಹೊರಟು 4ಕ್ಕೆ ಆಶ್ರಮ ತಲುಪಿದೆವು. ಅಲ್ಲಿ ನಮಗೆ ಆಶ್ರಮದ ಒಳಹೋಗಲು ಸ್ಥಳವೇ ಇರಲಿಲ್ಲ. ಎಲ್ಲಿ ನೋಡಿದರೂ ಭಕ್ತಸಮೂಹ. ಆದರೂ ಕಷ್ಟಪಟ್ಟು ಅವರ ಮಧ್ಯದಲ್ಲಿಯೇ ದಾರಿ ಮಾಡಿಕೊಂಡು ನಮಗೆ ವ್ಯವಸ್ಥೆ ಮಾಡಿದ ಸ್ಥಳಕ್ಕೆ ಹೋಗಿ ಕುಳಿತುಕೊಂಡೆವು.


ಐದು ಗಂಟೆಗೆ ಸರಿಯಾಗಿ ಪ್ರಾರ್ಥನೆ ಪ್ರಾರಂಭವಾಗುತ್ತದೆ. ಶ್ರೀಗಳು ಸರಿಯಾಗಿ 5.30ಕ್ಕೆ ಆಗಮಿಸಿದರು. ಪ್ರಾರ್ಥನೆ, ನಂತರ ಪ್ರವಚನ ಪ್ರಾರಂಭಿಸಿದರು. ಆಶ್ರಮದ ಹೊರಭಾಗದಲ್ಲಿ ಜಾಗವಿದ್ದ ಕಡೆಯಲ್ಲೆಲ್ಲ ಕುಳಿತಿದ್ದ ಸಾವಿರಾರು ಭಕ್ತರು ತದೇಕಚಿತ್ತದಿಂದ ಸ್ವಾಮೀಜಿಯ ಪ್ರವಚನ ಆಲಿಸುತ್ತಿದ್ದುದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಸರಿಯಾಗಿ 6.30ಕ್ಕೆ ಪ್ರವಚನ ಮುಗಿಸಿದ ಶ್ರೀಗಳು ಕೊನೆಯಲ್ಲಿ ಇದು ನಿಮ್ಮ ಆಶ್ರಮ, ನೀವು ಬರುತ್ತೀರಿ, ಹೋಗುತ್ತೀರಿ. ನಾವು ಆಹ್ವಾನ ಪತ್ರವನ್ನು ಮಾಡಿಸುವುದಿಲ್ಲ. ಹೀಗೆಯೇ ನೀವೆಲ್ಲ ಬನ್ನಿ, ಹೋಗಿ ಎಂದು ಹೇಳಿ ಎಲ್ಲರಿಗೂ ವಂದಿಸಿದ ಆ ಸಂದರ್ಭ ಇನ್ನೂ ನನ್ನ ಕಣ್ಣ ಮುಂದೆ ಹಸಿರಾಗಿ ಉಳಿದಿದೆ. ಅನಂತರ ನಮ್ಮನ್ನು ಶ್ರೀಮಠದ ಭಕ್ತರ ಮನೆಗೆ ಪ್ರಸಾದ ಮಾಡಲು ಕಳುಹಿಸಿ ಕೊಟ್ಟರು. ನಾವು ಅವರ ಮನೆಗೆ ಹೋದ ಸಂದರ್ಭದಲ್ಲಿ ಶ್ರೀಗಳೇ ಅವರ ಮನೆಗೆ ಬಂದರೆ ಹೇಗೆ ಭಕ್ತಿ ಭಾವದಿಂದ ಪ್ರಸಾದ ಉಣಬಡಿಸುವರೋ ಹಾಗೇ ನಮ್ಮನ್ನೆಲ್ಲ ಸತ್ಕರಿಸಿದ್ದು ನಮಗೆ ಆಶ್ಚರ್ಯವುಂಟು ಮಾಡಿತು.

ತಮ್ಮ ಗುರುಗಳು ಸ್ಥಾಪಿಸಿದ ನೂರಾರು ವಿದ್ಯಾಸಂಸ್ಥೆಗಳನ್ನು ಸಿದ್ಧೇಶ್ವರ ಶ್ರೀಗಳು ಮುಂದುವರಿಸಿಕೊಂಡು ಹೋಗುತ್ತಿದ್ದರೂ ಯಾವ ಸಂಸ್ಥೆಗಳಿಗೂ ಆಶ್ರಮದ ಹೆಸರಾಗಲೀ, ಶ್ರೀಗಳ ಹೆಸರಾಗಲೀ ಇಲ್ಲ ಎಂದರೆ ಆಶ್ಚರ್ಯವಲ್ಲವೇ? ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬ ದಾಸರವಾಣಿಯಂತೆ ನನ್ನದೇನಿದೆ, ಎಲ್ಲವೂ ಭಗವಂತನದು. ಇಲ್ಲಿರುವ ಪ್ರತಿಯೊಬ್ಬರಲ್ಲೂ ದೇವರನ್ನು ಕಾಣಬೇಕು. ನಾನು, ನನ್ನದೆಂಬ ಮಮಕಾರ ಸಲ್ಲದು. ಇಹಪರ ಎರಡೂ ಒಂದೇ ಎಂದು ಸಾರುತ್ತ ಅದರಂತೆ ನಡೆಯುತ್ತ 21ನೇ ಶತಮಾನದ ಅಪರೂಪದ ಯೋಗಿಗಳು ಶ್ರೀ ಸಿದ್ಧೇಶ್ವರರು.

ಸಿದ್ಧೇಶ್ವರ ಶ್ರೀಗಳು, ಸುತ್ತೂರು ಶ್ರೀಗಳ ಜೊತೆಯಲ್ಲಿ ದೇಶ ವಿದೇಶಗಳಲ್ಲಿ ಪ್ರವಾಸ ಮಾಡಿ ಅಲ್ಲಿನ ಭಕ್ತರಿಗೂ ಪ್ರವಚನ ನೀಡಿ ಬಂದ ಮಹಾಜ್ಞಾನಿಗಳು, ಇಲ್ಲಿಯ ಹಾಗೆ ಅಲ್ಲಿಯೂ ಅವರ ವೇಷಭೂಷಣಗಳು ಇರುತ್ತಿದ್ದುದು ವಿಶೇಷ. ಪ್ರಧಾನ ಮಂತ್ರಿ ನರೇಂದ್ರ ಮೋದಿ, ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಮುಂತಾದವರ ಸನಿಹದಲ್ಲಿ ಇದ್ದರೂ ಸರಳತೆಯ ಪ್ರತೀಕದಂತೆ ಇದ್ದಂತಹ ಶ್ರೀಗಳನ್ನು ಜಗತ್ತಿನಲ್ಲಿ ಎಲ್ಲಿಯಾದರೂ ಕಾಣಲು ಸಾಧ್ಯವೇ?

ಸಿದ್ದೇಶ್ವರ ಶ್ರೀಗಳ ಪ್ರವಚನದ ಕೊನೆಯ ದಿನದ ಉಪನ್ಯಾಸದ ವಿಷಯ 'ಮರೆತು ಬಿಡಿ', ಸಾಮಾನ್ಯವಾಗಿ ಅವರ ಪ್ರವಚನಗಳಲ್ಲಿ ಬದುಕಿನಲ್ಲಿ ಕೊಡುವುದು, ತೆಗೆದುಕೊಳ್ಳುವುದು, ಗಳಿಸುವುದು, ಬಳಸುವುದು ಅನಿವಾರ್ಯ! ಆದರೆ ಅವೆಲ್ಲ ಚಟುವಟಿಕೆಗಳೂ ಅಷ್ಟಕಷ್ಟೇ ಇರಬೇಕು. ವ್ಯಕ್ತಿತ್ವವನ್ನೇ ವ್ಯಾಪಿಸುವಂತಿರಬಾರದು. ಜೀವನದ ಕೊನೆಯ ಕ್ಷಣದವರೆಗೂ ಅದು ಉಳಿಯಬಾರದು ಅಲ್ಲವೇ? ಇದೆ ನಿರಾಭಾರಿ ಜೀವನ, ನಿಶ್ಚಿಂತ ಬದುಕು. ಜಾತಿ–ಮತ ನನ್ನದು ತನ್ನದು ಎಂಬುದನ್ನೆಲ್ಲ ಮರೆತು ಇವ ನಮ್ಮವ, ಇವ ನಮ್ಮವ ಎಂಬಂತೆ ಬಾಳುವ ಮೂಲಕ ಜೀವಿಗಳಿಗೆ ಲೇಸನೇ ಬಯಸುವ ಮಾನವರಾಗೋಣ ಎನ್ನುವುದೇ ಅವರ ಪ್ರವಚನಗಳ ಮುಖ್ಯ ಸಾರಾಂಶ. ಹಾಗೆಯೇ ಅವರು ಜೀವನದುದ್ದಕ್ಕೂ ನುಡಿದಂತೆ ನಡೆದುಕೊಂಡು ಬಂದು, ಲಕ್ಷಾಂತರ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದು, ಅವರೂ ಅಮರರಾದರು.

**ಎಸ್.ಎಂ.ಜಂಬುಕೇಶ್ವರ, ಛಾಯಾಗ್ರಾಹಕ ಪತ್ರಕರ್ತ.**



### ಇಂದು ಸಿದ್ದೇಶ್ವರ ಶ್ರೀಗಳಿಗೆ ನುಡಿನಮನ

ಮೈಸೂರಿನ ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು, ಹೆಚ್.ವಿ. ರಾಜೀವ್ ಸ್ನೇಹ ಬಳಗ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಶ್ರೀ ಸಿದ್ದೇಶ್ವರ ಸ್ವಾಮಿಗಳವರ ಭಕ್ತ ವೃಂದದ ಸಂಯುಕ್ತಾಶ್ರಯದಲ್ಲಿ ವಿಜಯ ಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮಿಗಳ ನುಡಿನಮನ ಕಾರ್ಯಕ್ರಮವನ್ನು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವ ಭವನದಲ್ಲಿ ನಾಳೆ (ಜ.15) ಬೆಳಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶ್ರೀ ಜ್ಞಾನಯೋಗಾಶ್ರಮದ ಅಧ್ಯಕ್ಷ ಶ್ರೀ ಬಸವಲಿಂಗ ಸ್ವಾಮಿಗಳು ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ವಹಿಸುವರು. ಕಾರ್ಯಕ್ರಮದಲ್ಲಿ ಶ್ರೀ ಮಲ್ಲಯ್ಯ ಸ್ವಾಮಿಗಳು, ಸಾಹಿತಿ ಕೆ.ಸಿ.ಶಿವಪ್ಪ, ಸಿ.ಪಿ.ರಾಮಶೇಷ್ ಉಪಸ್ಥಿತರಿರುವರು.

## ಚಾಮುಂಡಿಬೆಟ್ಟದ ತಪ್ಪಲಿನ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಮಕರ ಸಂಕ್ರಾಂತಿಯ 'ಲಕ್ಷ ದೀಪೋತ್ಸವ'

### ಅಪಾರ ಭಕ್ತರ ಸಮ್ಮುಖದಲ್ಲಿ ಭಕ್ತಿಯ ಬೆಳಕಿನ ಉತ್ಸವ



ಮೈಸೂರು,ಜ.14(ಎಂಕೆ)–ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಮಕರ ಸಂಕ್ರಾಂತ್ರಿ ಹಬ್ಬದ ಅಂಗವಾಗಿ ಶ್ರದ್ಧಾ–ಭಕ್ತಿಯಿಂದ 'ಲಕ್ಷ ದೀಪೋತ್ಸವ' ಆಚರಿಸಲಾಯಿತು. ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಕರಸ್ಪಾಂಡೆಂಟ್ ಶ್ರೀ ಶಿವಕಂಠಾನಂದ ಸ್ವಾಮೀಜಿ, ಅಯ್ಯಪ್ಪ ಸ್ವಾಮಿ ಸನ್ನಿಧಿಯಲ್ಲಿ ದೀಪ ಬೆಳಗಿಸುವ 'ಲಕ್ಷ ದೀಪೋತ್ಸವ'ಕ್ಕೆ ಚಾಲನೆ ನೀಡಿದ ಕೂಡಲೇ ಕೈಯ್ಯಲ್ಲಿ ಎಣ್ಣೆ ಬತ್ತಿ ಹಿಡಿದು ನಿಂತಿದ್ದ ಸಾವಿರಾರು ಮಂದಿ ಭಕ್ತರು ಲಕ್ಷ ದೀಪಗಳನ್ನು ಬೆಳಗಿಸಿ ಪ್ರಾರ್ಥನೆ ಸಲ್ಲಿಸಿದರು.

ದೇವಸ್ಥಾನದ ಸುತ್ತಲೂ ವ್ಯವಸ್ಥೆಗೊಳಿಸಿದ್ದ ಲಕ್ಷ ದೀಪಗಳು ಬೆಳಗುತ್ತಿದ್ದಂತೆ ಎಲ್ಲೆಡೆ ಪ್ರಖರ ಬೆಳಕು ಹೊಮ್ಮಿತು. ಮತ್ತೊಂದೆಡೆ ಸರತಿ ಸಾಲಿನಲ್ಲಿ ಸಾಗಿದ ಭಕ್ತರು ಶ್ರೀ ಅಯ್ಯಪ್ಪಸ್ವಾಮಿ ದರ್ಶನ ಪಡೆದು, ಪರಸ್ಪರ ಸಂಕ್ರಾಂತಿ ಶುಭಾಶಯ ಕೋರಿದರು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಭಕ್ತರನ್ನುದ್ದೇಶಿಸಿ ಮಾತನಾಡಿದ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಕರೆಸ್ಪಾಂಡೆಂಟ್ ಶ್ರೀ ಶಿವಕಂಠಾನಂದ ಸ್ವಾಮೀಜಿ, ಭಗವಂತನ ಲೀಲೆ ಅಪಾರ. ಸಿಂಹಾಸನ ತ್ಯಜಿಸಿದ ಮಹಾ ತ್ಯಾಗಿ ಅಯ್ಯಪ್ಪ ಸ್ವಾಮಿಯ ಪೂಜೆ ಮತ್ತು ಸ್ಮರಣೆ ಎಲ್ಲೆಡೆ ನಡೆಯುತ್ತದೆ ಎಂದರು.

ಮಕರ ಜ್ಯೋತಿ ದಿವ್ಯ ದರ್ಶನ ಪಡೆಯುವ ಸಂದರ್ಭದಲ್ಲಿ ಮೈಸೂರಿನಲ್ಲಿರುವ ಅಯ್ಯಪ್ಪ ಸ್ವಾಮಿ ಸನ್ನಿಧಿಯಲ್ಲಿ ಲಕ್ಷ ದೀಪೋತ್ಸವ ಆಚರಿಸುತ್ತಿರುವುದು ವಿಶೇಷ. ಶಬರಿಮಲೆಗೆ ಹೋಗಲು ಸಾಧ್ಯವಾಗದವರು ಇಲ್ಲಿ ದೀಪ ಬೆಳಗಿಸಿ, ಅಯ್ಯಪ್ಪಸ್ವಾಮಿಯ ದರ್ಶನ ಪಡೆಯಲು ಅವಕಾಶ ಕಲ್ಪಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಕ್ತರ ಜೊತೆಗೆ ಲಕ್ಷ ದೀಪೋತ್ಸವದಲ್ಲಿ ಭಾಗವಹಿಸಿದ ಮೇಯರ್ ಶಿವಕುಮಾರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಸಂಕ್ರಾಂತಿ ಶುಭ ಕೋರಿದರು. ಶಬರಿಮಲೈ ಶ್ರೀ ಅಯ್ಯಪ್ಪ ಪೂಜಾ ಸಮಿತಿ ಅಧ್ಯಕ್ಷ ಎಲ್.ಶಶಿಧರ್, ಉಪಾಧ್ಯಕ್ಷ ಜಿ.ಶ್ರೀನಿವಾಸ್, ಕಾರ್ಯದರ್ಶಿ ಹರಿದಾಸ್, ಖಜಾಂಚಿ ಇ.ಎನ್.ಸುರೇಂದ್ರನ್ ಇದ್ದರು.

## 'ಸಿದ್ದು ನಿಜಕನಸುಗಳು' ಪುಸ್ತಕ ಮುಟ್ಟುಗೋಲಿಗೆ ಆಗ್ರಹ



ಬಿ.ಎಂ.ರಾಮು

ಮೈಸೂರು, ಜ.14(ಆರ್‌ಕೆಬಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ಕಪೋಲಕಲ್ಪಿತ, ಅವಹೇಳನಕಾರಿ ಹಾಗೂ ಪ್ರಚೋದನಕಾರಿ ಬರಹವುಳ್ಳ 'ಸಿದ್ದು ನಿಜಕನಸುಗಳು' ಪುಸ್ತಕವನ್ನು ಸರ್ಕಾರ ಕೂಡಲೇ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಆಗ್ರಹಿಸಿದ್ದಾರೆ.

ರಾಜ್ಯದ ಕಾನೂನು–ಸುವ್ಯವಸ್ಥೆ ದೃಷ್ಟಿಯಿಂದ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ಬಿಜೆಪಿ ಸರ್ಕಾರ ಪಿತೂರಿ ನಡೆಸುತ್ತಿದ್ದು, ಇದಕ್ಕೆ ಅವಕಾಶ ಕೊಡಬಾರದು ಎಂದು ಒತ್ತಾಯಿಸಿದ್ದಾರೆ.

ಆರ್‌ಎಸ್‌ಎಸ್ ಹಾಗೂ ಬಿಜೆಪಿ ಕುಮ್ಮಕ್ಕಿನಿಂದ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರ ಪ್ರಚೋದನೆಯಿಂದ ಡಾ.ಚಂದ್ರಶೇಖರ ಕಂಬಾರರ 'ಸಾಂಬಶಿವ ಪ್ರಹಸನ' ನಾಟಕವನ್ನು ತಿರುಚಿ ಅನಗತ್ಯವಾಗಿ ಸಿದ್ದರಾಮಯ್ಯ ಹೆಸರಿಗೆ ಧಕ್ಕೆ ತರುವ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವರ್ಚಸ್ಸಿಗೆ ಕಳಂಕ ತರುವ ಕೆಲಸವನ್ನು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮಾಡುತ್ತಿದೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರಿಗೆ ನಾವೆಲ್ಲರೂ ಒಂದು ಎಂಬ ಪರಿಕಲ್ಪನೆ ಇದ್ದರೆ ಉಡುಪಿ ಹಾಗೂ ಮಂತ್ರಾಲಯದಲ್ಲಿ ಸಹಪಂಕ್ತಿ ಭೋಜನಕ್ಕೆ ಅವಕಾಶ ಮಾಡಿಕೊಡಬೇಕು. ಬ್ರಾಹ್ಮಣೇತರರಿಗೆ ಬೇರೆ ಊಟದ ವ್ಯವಸ್ಥೆ ಇರುವುದು ಖಂಡನೀಯ. ಹಿಂದೂ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ಆರ್ಯ–ವೈಶ್ಯ, ಶೂದ್ರ ಎಂದು ಒಡೆದು ಆಳುತ್ತಿರುವುದು ಖಂಡನೀಯ ಎಂದು ಅವರು ತಿಳಿಸಿದ್ದಾರೆ.

### ಇಂದು ಎಳ್ಳು–ಬೆಲ್ಲ ವಿತರಣಾ ಕಾರ್ಯಕ್ರಮ

ಮೈಸೂರು,ಜ.14–ವಸ್ತುಪ್ರದರ್ಶನದ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ ನೇತೃತ್ವದಲ್ಲಿ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ 10 ಸಾವಿರ ಮನೆಗಳಿಗೆ ಎಳ್ಳು–ಬೆಲ್ಲ ಹಾಗೂ 20 ಲೀಟರ್‌ನ ವಾಟರ್ ಕ್ಯಾನ್‌ಗಳ ವಿತರಣೆ ಕಾರ್ಯಕ್ರಮವನ್ನು ನಾಳೆ(ಜ.15) ಹಮ್ಮಿಕೊಳ್ಳಲಾಗಿದೆ.

## ಹಳೇ ಬಿಷಪ್ ಹೌಸ್ ಮಾರ್ಪಾಡು ಕಾಮಗಾರಿಗೆ ಕೋರ್ಟ್‌ನಿಂದ ತಾತ್ಕಾಲಿಕ ತಡೆ

ಮೈಸೂರು, ಜ.14(ಪಿಎಂ)– ಮೈಸೂರಿನ ಬಿಷಪ್ ಹೌಸ್ (ಹಳೇ ಬಿಷಪ್ ಹೌಸ್)ನಲ್ಲಿ ಯಾವುದೇ ಮಾರ್ಪಾಡು ಮಾಡದೇ ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದು ಮೈಸೂರಿನ 3ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮುಂದಿನ ವಿಚಾರಣೆವರೆಗೆ ಮಧ್ಯಂತರ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮೈಸೂರು ಡಿವಿಜನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ಅಧ್ಯಕ್ಷ ಜೆ.ಸ್ಟೀಫನ್ ಸುಜಿತ್ ಈ ವಿಷಯ ತಿಳಿಸಿದರು.

ಹಳೆ ಬಿಷಪ್ ಹೌಸ್ ಅನ್ನು ವಸತಿ ಉದ್ದೇಶದಿಂದ ವಾಣಿಜ್ಯ ಉದ್ದೇಶಕ್ಕೆ ಮಾರ್ಪಾಡು ಮಾಡಲು ಮೈಸೂರು ಡಯಾಸಿಸ್ ಸೊಸೈಟಿ ಮುಂದಾಗಿತ್ತು ಆದರೆ ಯಥಾಸ್ಥಿತಿಯಲ್ಲಿ ಸದರಿ ಕಟ್ಟಡ ಉಳಿಸಿಕೊಳ್ಳಬೇಕು ಎಂದು ನಮ್ಮ ಅಸೋಸಿಯೇಷನ್‌ನಿಂದ ಕೋರ್ಟ್‌ನಲ್ಲಿ ದಾವೆ ಹೂಡಲಾಗಿತ್ತು. ಮುಂದಿನ ವಿಚಾರಣೆಯನ್ನು ಮಾ.27ಕ್ಕೆ ನಿಗದಿಗೊಳಿಸಿ, ಅಲ್ಲಿವರೆಗೆ ಕಟ್ಟಡ ಯಥಾಸ್ಥಿತಿಯಲ್ಲಿ ಇರುವಂತೆ ಕೋರ್ಟ್ ತಡೆಯಾಜ್ಞೆ ನೀಡಿದೆ ಎಂದರು.



75 ವರ್ಷಗಳ ಹಿಂದೆ ಸದರಿ ಹಳೇ ಬಿಷಪ್ ಹೌಸ್ ಕಟ್ಟಡವಿರುವ ಜಾಗವನ್ನು ಮೈಸೂರು ಮಹಾರಾಜರು, ಅಂದಿನ ಬಿಷಪ್ ಅವರಿಗೆ ನೀಡಿದ್ದರು. 6 ಬಿಷಪ್‌ಗಳು ಈ ಹೌಸ್‌ನಲ್ಲಿ ವಾಸ ಮಾಡಿದ್ದಾರೆ. ಹಾಗಾಗಿ ಇದೊಂದು ಪಾರಂಪರಿಕ ಕಟ್ಟಡವಾಗಿದ್ದು, ಇದೇ ಹೌಸ್ ಆವರಣದಲ್ಲಿ ಕ್ರೈಸ್ತರ ಪವಿತ್ರ ಪ್ರಾರ್ಥನಾ ಮಂದಿರವೂ ಇದೆ. 2017ರಲ್ಲಿ ಬಿಷಪ್ ಆಗಿ ಬಂದ ಡಾ.ಕೆ.ಎ. ವಿಲಿಯಂ ಅವರು 2021ರಲ್ಲಿ ಬನ್ನಿಮಂಟಪದಲ್ಲಿ ನೂತನ ಬಿಷಪ್ ಹೌಸ್‌ನ ಕಟ್ಟಡ ನಿರ್ಮಿಸಿದ್ದು, ಇದೀಗ ಅಲ್ಲಿಗೆ ಬಿಷಪ್ ಹೌಸ್ ಸ್ಥಳಾಂತರಗೊಂಡಿದೆ ಎಂದರು.

ಇದೀಗ ಹಳೇ ಬಿಷಪ್ ಹೌಸ್ ಅನ್ನು ವಾಣಿಜ್ಯ ವಹಿವಾಟಿಗಾಗಿ ಮಾರ್ಪಾಡು ಮಾಡುವ ಸಲುವಾಗಿ ಕೊಠಡಿಗಳನ್ನು ನಿರ್ಮಿಸಲು ಜ.4ರಂದು ಕಾಮಗಾರಿ ಆರಂಭಿಸಲಾಗಿತ್ತು. ನಮ್ಮ ಅಸೋಸಿಯೇಷನ್‌ಗೆ ಸ್ಥಳೀಯ ಹಿರಿಯ ನಾಗರಿಕರೊಬ್ಬರಿಂದ ಮಾಹಿತಿ ಲಭ್ಯವಾಯಿತು. ತದನಂತರ ನಾವು ಸ್ಥಳಕ್ಕೆ ಭೇಟಿ ನೀಡಿ, ಕಾಮಗಾರಿ ವಿರುದ್ಧ ದಾವೆ ಹೂಡಿದ್ದೆವು. ಸದರಿ ಕಟ್ಟಡವನ್ನು ಯಥಾಸ್ಥಿತಿಯಲ್ಲಿ ಸಂರಕ್ಷಣೆ ಮಾಡಬೇಕೆಂದು ಮನವಿ ಮಾಡಿದ್ದೆವು. ಈ ಸಂಬಂಧ ಜ.12ರಂದು ಕೋರ್ಟ್ ಕಾಮಗಾರಿಗೆ ಮಧ್ಯಂತರ ತಡೆಯಾಜ್ಞೆ ನೀಡಿದೆ ಎಂದು ವಿವರಿಸಿದರು.

ಹಳೇ ಬಿಷಪ್ ಹೌಸ್ ಕಟ್ಟಡದ ಮಾರ್ಪಾಡು ಕಾಮಗಾರಿ ನಡೆಸಲು ಮುಂದಾಗಿದ್ದರ ಬಗ್ಗೆ ಆಕ್ಷೇಪಿಸಿ, ಬಾಂಬೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಎಫ್.ಸಲ್ಡಾನ್ಹಾ ಅವರು, ಡಿಜಿಪಿ, ಗೃಹ ಕಾರ್ಯದರ್ಶಿಗಳು ಮತ್ತು ನಗರ ಪೊಲೀಸ್ ಆಯುಕ್ತರಿಗೆ ಇ–ಮೇಲ್ ಮೂಲಕ ದೂರು ನೀಡಿದ್ದಾರೆ ಎಂದು ತಿಳಿಸಿದರು.

ಶೇ.20ರಷ್ಟು ಕಟ್ಟಡ ಧ್ವಂಸವಾಗಿದೆ. ಇದಕ್ಕೆ ಹಾನಿಯಾದರೆ ಕ್ರೈಸ್ತರ ಧಾರ್ಮಿಕ ಭಾವನೆಗೆ ಧಕ್ಕೆಯಾಗಲಿದೆ. ಹಾಗಾಗಿ ತಡೆಯಾಜ್ಞೆ ತಂದಿದ್ದೇವೆ. ಮಾ.27ರವರೆಗೆ ಯಥಾಸ್ಥಿತಿಯಲ್ಲಿ ಕಟ್ಟಡ ಇರಬೇಕೆಂದು ಕೋರ್ಟ್ ಆದೇಶ ಮಾಡಿದೆ. ಹಳೇ ಬಿಷಪ್ ಹೌಸ್ ಒಡೆಯುವುದಕ್ಕೆ ನಮ್ಮ ಧರ್ಮಕ್ಷೇತ್ರದ ಸುಮಾರು 25 ಫಾದರ್‌ಗಳ ವಿರೋಧವಿದೆ. ಕಟ್ಟಡವನ್ನು ಯಥಾಸ್ಥಿತಿಯಲ್ಲಿ ಇಟ್ಟು ಪರಂಪರೆ ಉಳಿಸಬೇಕು ಎಂಬುದು ನಮ್ಮ ಉದ್ದೇಶವಾಗಿದೆ ಎಂದು ಹೇಳಿದರು.

ಕೆ.ಎ.ವಿಲಿಯಂ ಅವರ ವಿರುದ್ಧದ ಅನೇಕ ಆರೋಪಗಳಿರುವ ಸಂಬಂಧ ಮೂವರು ಬಿಷಪ್‌ಗಳು ಒಳಗೊಂಡ ಕಮಿಟಿ ಮೈಸೂರಿಗೆ ಎರಡು ಬಾರಿ ಭೇಟಿ ನೀಡಿತ್ತು. ಸದರಿ ಕಮಿಟಿ ವಿಚಾರಣೆ ನಡೆಸಿದ್ದು, ವರದಿ ಕೂಡ ಸಿದ್ಧಪಡಿಸಿಕೊಂಡಿದೆ. ವಿಚಾರಣೆಯಲ್ಲಿ ನಾನೂ ಭಾಗಿಯಾಗಿದ್ದೆ. ಸದ್ಯ ಈಗ ಡಾ.ವಿಲಿಯಂ ಅವರು ರಜೆಯಲ್ಲಿದ್ದಾರೆ ಎಂದರು. ಅಸೋಸಿಯೇಷನ್ ಉಪಾಧ್ಯಕ್ಷ ಎಲ್ವಿನ್, ಕಾರ್ಯದರ್ಶಿ ಅಂಬ್ರೋಸ್ ಜಾರ್ಜ್, ಖಜಾಂಚಿ ಜಾನ್‌ಫರ್ನಾಂಡಿಸ್, ಕಾನೂನು ಸಲಹೆಗಾರ ಎಂ.ಶಿವಕುಮಾರ್ ಮತ್ತಿತರರು ಗೋಷ್ಠಿಯಲ್ಲಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*


ನಾಡಿನ ಸಮಸ್ತ ಜನತೆಗೆ ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು
16 ಜನವರಿ 2023ರಂದು
ಬೆಂಗಳೂರಿನ ಅರಮನೆ ಮೈದಾನದಲ್ಲಿ
ನಡೆಯಲಿರುವ ನಾ ನಾಯಕಿ ಸಮಾವೇಶದಲ್ಲಿ
ಪಾಲ್ಗೊಳ್ಳಲು ಕರ್ನಾಟಕಕ್ಕೆ ಆಗಮಿಸುತ್ತಿರುವ
ಶ್ರೀಮತಿ ಪ್ರಿಯಾಂಕಾ ಗಾಂಧಿರವರಿಗೆ
ಆತ್ಮೀಯ ಸುಸ್ವಾಗತ
2023ರ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್. ಕ್ಷೇತ್ರದ ಬಂಧು ಮಿತ್ರರು ಆಶೀರ್ವಾದ,
ಸಹಕಾರ ಹಾಗೂ ಬೆಂಬಲವನ್ನು ವಿನಯ ಪೂರ್ವಕವಾಗಿ ಕೋರುವ
ಗುರುಪಾದಸ್ವಾಮಿ ಕಾರ್ಯದರ್ಶಿಗಳು ಕೆ.ಪಿ.ಸಿ.ಸಿ.,
ಕೆ.ಆರ್. ವಿಧಾನಸಭಾ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿ
ಮೊ : 9448293548
ಜಿ. ಸೋಮಶೇಖರ್ ಅಧ್ಯಕ್ಷರು
ಕೆ.ಆರ್. ಬ್ಲಾಕ್ ಕಾಂಗ್ರೆಸ್ ಸಮಿತಿ
ಶ್ರೀಧರ್ ಅಧ್ಯಕ್ಷರು
ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ
ಪ್ರಕಟಣೆ : ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಸಮಿತಿ
ಅಧ್ಯಕ್ಷರುಗಳು, ಕಾಂಗ್ರೆಸ್‌ನ ಎಲ್ಲಾ ಮುಖಂಡರುಗಳು, ಕಾರ್ಯಕರ್ತರು,
ಮೈಸೂರು ನಗರ ಪಾಲಿಕೆ ಹಾಲಿ ಮತ್ತು ಮಾಜಿ ಸದಸ್ಯರು, ಡಿ.ಸಿ.ಸಿ. ಮತ್ತು
ಎಲ್ಲಾ ವಿವಿಧ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು

# ಪೊನ್ನಂಪೇಟೆ ಬಳಿ ಪ್ಯಾರಾ ಗ್ಲೈಡರ್ ರಸ್ತೆಯಲ್ಲಿ ತುರ್ತು ಭೂ ಸ್ಪರ್ಶ

● ಪೈಲಟ್ ಸೇರಿ ಇಬ್ಬರಿಗೆ ಸಣ್ಣ–ಪುಟ್ಟ ಗಾಯ ● ಕಾರಿಗೆ ಅಪ್ಪಳಿಸುವುರಲ್ಲಿ ಸ್ವಲ್ಪದರಲ್ಲಿ ಪಾರು ● ಮೈನವಿರೇಳಿಸುವ ಘಟನೆ ಚಿತ್ರಣ ಸಿಸಿ ಕ್ಯಾಮರಾದಲ್ಲಿ ಸೆರೆ







ಮಡಿಕೇರಿ, ಜ.14– ಪ್ಯಾರಾ ಗ್ಲೈಡರ್, ತಾಂತ್ರಿಕ ದೋಷದಿಂದ ತುರ್ತು ಭೂ ಸ್ಪರ್ಶಗೊಂಡ ಘಟನೆ ಪೊನ್ನಂಪೇಟೆ ಸಮೀಪ ಶನಿವಾರ ಸಂಜೆ ಸಂಭವಿಸಿದೆ.

ನಿಟ್ಟೂರು ಗ್ರಾಮದ ನಿವಾಸಿ ಎಂ.ಮುತ್ತಣ್ಣ ಎಂಬವರು ತಮ್ಮ ಖಾಸಗಿ ಸ್ಥಳದಲ್ಲಿ ಕಳೆದ ಕೆಲವು ದಿನದಿಂದ ರನ್ ವೇ ಸಹಿತ 2 ಸೀಟಿನ ಪ್ಯಾರಾ ಗ್ಲೈಡಿಂಗ್ ನಡೆಸುತ್ತಿದ್ದರು. ಇಂದಿನ ಘಟನೆಯಿಂದ ಮುತ್ತಣ್ಣ ಮತ್ತು ಅವರ ಜೊತೆಯಲ್ಲಿದ್ದವರು ಸಣ್ಣ–ಪುಟ್ಟ ಗಾಯಗಳಿಂದ ಅಚ್ಚರಿ ರೀತಿ ಪಾರಾಗಿದ್ದಾರೆ.

ಎಂದಿನಂತೆ ಶನಿವಾರ ಸಂಜೆ 4.45 ರಲ್ಲಿ ಪ್ಯಾರಾ ಗ್ಲೈಡಿಂಗ್ ಹಾರಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಇಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ನಿಯಂತ್ರಣ ಕಳೆದುಕೊಂಡು ನೇರವಾಗಿ ನಿಟ್ಟೂರು ಲಕ್ಷ್ಮಣ ತೀರ್ಥ ನದಿಯ ಸೇತುವೆ ಪಕ್ಕದ ಕಾಂಕ್ರೀಟ್ ರಸ್ತೆಯಲ್ಲಿ ತುರ್ತು ಭೂ ಸ್ಪರ್ಶ ಮಾಡಿದೆ.

ಈ ಸಂದರ್ಭದಲ್ಲಿ ಕೊಟ್ಟಗೇರಿ ಕಡೆಗೆ ಕಾರ್ಮಿಕರನ್ನು ಕರೆತರಲು ತೆರಳುತ್ತಿದ್ದ ಇಕೋ ಕಾರ್ ಒಂದಕ್ಕೆ ಗ್ಲೈಡರ್ ಡಿಕ್ಕಿಯಾಗುವುದರಲ್ಲಿತ್ತು ಆದರೆ ಕಾರು ಚಾಲಕನ ಸಮಯಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದಂತಾಗಿದೆ. ತುರ್ತು ಭೂ ಸ್ಪರ್ಶದ ಪರಿಣಾಮ ಪ್ಯಾರಾ ಗ್ಲೈಡರ್‌ನ ಮುಂಭಾಗ ಜಖಂಗೊಂಡಿದ್ದು, ಚಕ್ರ ಸಹಿತ ಕೆಲವು ಭಾಗಗಳಿಗೆ ಹಾನಿಯಾಗಿದೆ. ಗ್ಲೈಡರ್‌ನ ಪೈಲಟ್ ಹಾಗೂ ಹಿಂಬದಿ ಸವಾರನಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದು, ಈ ಎಲ್ಲಾ ದೃಶ್ಯಗಳು ಅಲ್ಲಿ ಅಳವಡಿಸಲಾಗಿರುವ ಸಿ.ಸಿ. ಕ್ಯಾಮರಾದಲ್ಲಿ ಸೆರೆಯಾಗಿದೆ.

ಈ ಘಟನೆ ಕುರಿತು ಪೊನ್ನಂಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರು ಸ್ಥಳದಲ್ಲಿ ಜಮಾಯಿಸಿದ್ದರು. ಭೂ ಸ್ಪರ್ಶದಿಂದ ಹಾನಿಗೀಡಾದ ಗ್ಲೈಡರ್ ಅನ್ನು ತದನಂತರ ಟ್ರ್ಯಾಕ್ಟರ್ ಟ್ರೇಲರ್‌ನಲ್ಲಿ ಸ್ಥಳದಿಂದ ಸಾಗಿಸಲಾಯಿತು. ಗ್ಲೈಡರ್ ಹಾರಾಟ ಮತ್ತು ಅದು ಹೊರ ಸೂಸುವ ಶಬ್ದದ ಕುರಿತು ಈ ಹಿಂದೆ ಪರ ವಿರೋಧ ಚರ್ಚೆಗಳು ಕೂಡ ನಡೆದಿತ್ತು. ಕೆಲ ವರ್ಷಗಳ ಹಿಂದೆ ಬೇಗೂರು ಕೊಲ್ಲಿಯಲ್ಲಿ ಇದೇ ರೀತಿಯ ಗ್ಲೈಡರ್ ಹಾರಾಟದ ಸಂದರ್ಭ ಅಪಘಾತ ಸಂಭವಿಸಿ ಒಬ್ಬರು ಮೃತಪಟ್ಟಿದ್ದು, ಮತ್ತೊಬ್ಬರಿಗೆ ಗಾಯಗಳಾಗಿತ್ತು.

## ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ತಂಬಂಡ ಡಾ.ವಿಜಯ್ ಪೂಣಚ್ಚ ಆಯ್ಕೆ



ಮಡಿಕೇರಿ,ಜ.14– ಬೆಟ್ಟಗೇರಿಯ ಉದಯ ವಿದ್ಯಾಸಂಸ್ಥೆಯಲ್ಲಿ ಜ.28ರಂದು ನಡೆಯುವ 11ನೇ ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕ ತಂಬಂಡ ಡಾ.ವಿಜಯ್ ಪೂಣಚ್ಚ ಅವರು ಆಯ್ಕೆಯಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಮಡಿಕೇರಿ ತಾಲೂಕು ಅಧ್ಯಕ್ಷ ಅಂಬೆಕಲ್ಲು ನವೀನ್ ಅವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾಧ್ಯಕ್ಷ ಕೇಶವ ಕಾಮತ್ ಅವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ಡಾ.ವಿಜಯ್ ಪೂಣಚ್ಚ ಅವರನ್ನು ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಕಸಾಪ ಗೌರವ ಕಾರ್ಯದರ್ಶಿಗಳಾದ ಮುನೀರ್ ಅಹಮ್ಮದ್, ಪುದಿಯನೆರವನ ರೇವತಿ ರಮೇಶ್, ಪುದಿಯನೆರವನ ರಿಶಿತ್ ಮಾದಯ್ಯ, ಮಡಿಕೇರಿ ತಾಲೂಕು ಗೌರವ ಕಾರ್ಯದರ್ಶಿ ಕೆ.ಯು.ರಂಜಿತ್, ತುಳಸಿ ಮೋಹನ್, ಸಂಘಟನಾ ಕಾರ್ಯದರ್ಶಿ ತಳೂರು ದಿನೇಶ್, ಸಮ್ಮೇಳನದ ಮೇಲುಸ್ತುವಾರಿ ಸದಸ್ಯ ಚಂದ್ರಶೇಖರ್, ನಿರ್ದೇಶಕರಾದ ಶ್ರೀಧರ್, ಹರೀಶ್ ಸರಳಾಯ, ಮಂಜುನಾಥ್, ಅಬ್ದುಲ್ಲ, ಪ್ರಕಾಶ್ ಆಚಾರ್ಯ ಮತ್ತಿತರಿದ್ದರು.

## ಬೀಚ್‌ನಲ್ಲಿ ಮುಳುಗಿ ಯುವಕ ಸಾವು



**ಶಬರಿಮಲೆಯಿಂದ ಹಿಂತಿರುಗುತ್ತಿದ್ದಾಗ ದುರಂತ**

ಮಡಿಕೇರಿ,ಜ.14– ಶಬರಿಮಲೆಯಿಂದ ಹಿಂತಿರುಗುತ್ತಿದ್ದ ಯುವಕ ನೋರ್ವ ಕಣ್ಣೂರು ಬೀಚ್‌ನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆಯೊಂದು ಸಂಭವಿಸಿದೆ. ನಗರದ ಜಲಾಶಯ ಬಡಾವಣೆ ನಿವಾಸಿ ಲೋಕೇಶ್ ಎಂಬವರ ಪುತ್ರ ಶಶಾಂಕ್(25) ಮೃತ ದುರ್ದೈವಿ. ಶಬರಿಮಲೆ ಯಾತ್ರೆ ಮುಗಿಸಿ ಬರುವ ಸಂದರ್ಭ 3 ಮಂದಿ ಯುವಕರ ತಂಡ ಕಣ್ಣೂರು ಬೀಚ್‌ಗೆ ತೆರಳಿತ್ತು. ಈ ವೇಳೆ ಸಮುದ್ರದ ಅಲೆಗೆ ಸಿಲುಕಿದ್ದ 3 ಮಂದಿ ಯುವಕರ ಪೈಕಿ ಇಬ್ಬರನ್ನು ಸ್ಥಳೀಯರು ರಕ್ಷಿಸಿದ್ದಾರೆ. ಆದರೆ ಅಲೆಗಳ ರಭಸಕ್ಕೆ ಸಿಲುಕಿದ ಶಶಾಂಕ್ ಸಮುದ್ರದಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಸ್ಥಳೀಯರ ಸಹಕಾರದಿಂದ ಮೃತದೇಹವನ್ನು ಹೊರ ತೆಗೆದು ಕಣ್ಣೂರು ಸರಕಾರಿ ಆಸ್ಪತ್ರೆಗೆ ಸ್ಥಳಾಂತರಿಸಿ, ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಮೃತ ಯುವಕ ತಂದೆ, ತಾಯಿ, ಸಹೋದರಿಯನ್ನು ಅಗಲಿದ್ದಾರೆ.

## ಡಯಾಲಿಸಿಸ್ ಸೇವೆ ಲಭ್ಯ

ಮಡಿಕೇರಿ, ಜ.14– ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಅಧೀನ ಬೋಧಕ ಆಸ್ಪತ್ರೆ ಮಡಿಕೇರಿಯಲ್ಲಿ ಸರ್ಕಾರಿ ಸ್ವಾಮ್ಯದ 4 ಡಯಾಲಿಸಿಸ್ ಉಪಕರಣಗಳು ಮತ್ತು ಖಾಸಗಿ ಸಹಭಾಗಿತ್ವದಲ್ಲಿ 7 ಉಪಕರಣಗಳು ಒಟ್ಟು 11 ಡಯಾಲಿಸಿಸ್ ಉಪಕರಣಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಖಾಸಗಿ ಸಹಭಾಗಿತ್ವದ 4 ಉಪಕರಣಗಳು ದುರಸ್ತಿಯಾಗಿವೆ.

### ಇಂದಿರಾ ಅಯ್ಯನ ನಿಧನ



ನಾಪೋಕ್ಲು, ಜ.14– ನಾಪೋಕ್ಲು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕ್ರೀಡಾ ಅಕಾಡೆಮಿ ಅಧ್ಯಕ್ಷ ಸ್ಥಳೀಯ ನಿವಾಸಿ ಕಲಿಯಂಡ ಸಾಬು ಅಯ್ಯಣ್ಣ ಧರ್ಮಪತ್ನಿ ನಿವೃತ್ತ ಶಿಕ್ಷಕಿ ಇಂದಿರಾ ಅಯ್ಯನ(65) ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶುಕ್ರವಾರ ನೆರವೇರಿತು. ಶ್ರೀಯುತರು ಪತಿ, ಮಗ ಆಶಿಕ್ ಸೋಮಯ್ಯ, ಮಗಳು ಶೀಮ ಕಾವೇರಮ್ಮ ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

### ದಯಾ



ನಾಪೋಕ್ಲು, ಜ.14– ಇಲ್ಲಿಗೆ ಸಮೀಪದ ಕೊಕೇರಿ ಗ್ರಾಮದ ಅಂಬಡಿಪೈಸರಿ ನಿವಾಸಿ ದಿವಂಗತ ಬೊಳ್ಳು ಮಾಸ್ಟರ್ ಅವರ ಮಗ ದಯಾ(49) ಶುಕ್ರವಾರ ರಾತ್ರಿ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ಸ್ವಗೃಹ ಕೊಕೇರಿಯಲ್ಲಿ ನೆರವೇರಿತು. ಮೃತರು ಪತ್ನಿ ಗಂಗೆ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

## ಕೊಡವ ಟಗ್ ಆಫ್ ವಾರ್ ಅಕಾಡೆಮಿ ಸ್ಥಾಪನೆ

ಗೋಣಿಕೊಪ್ಪ,ಜ.14– ಕೊಡವ ಕುಟುಂಬಗಳಲ್ಲಿ ಹಗ್ಗಜಗ್ಗಾಟ ಕ್ರೀಡೆಗೆ ಪ್ರೋತ್ಸಾಹ ನೀಡಲು ಕೊಡವ ಟಗ್ ಆಫ್ ವಾರ್ ಅಕಾಡೆಮಿ ಅಸ್ತಿತ್ವಕ್ಕೆ ತರಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಪೊನ್ನೋಲತಂಡ ಕಿರಣ್ ಪೊನ್ನಪ್ಪ ತಿಳಿಸಿದರು.

ಗೋಣಿಕೊಪ್ಪ ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ಶನಿವಾರ ಕೊಡವ ಟಗ್ ಆಫ್ ವಾರ್ ಅಕಾಡೆಮಿ ಲಾಂಛನ ಅನಾವರಣಗೊಳಿಸಿ ಮಾತನಾಡಿ, ಕೊಡವ ಕುಟುಂಬಗಳ ನಡುವೆ ಪ್ರಥಮವಾಗಿ ಕಳೆದ ವರ್ಷ ಪೊನ್ನೋಲತಂಡ ಕುಟುಂಬ ಹಗ್ಗಜಗ್ಗಾಟ ಕ್ರೀಡೆಯನ್ನು ಕಕ್ಕಬೆಯಲ್ಲಿ ನಡೆಸಿದ್ದ ಸಂದರ್ಭ 42 ಕುಟುಂಬಗಳು ಭಾಗವಹಿಸಿದ್ದವು. ಇದರಂತೆ ಮುಂದಿನ ವರ್ಷಗಳಲ್ಲಿ ನಿರಂತರವಾಗಿ ವರ್ಷಕ್ಕೆ ಒಂದು ಕುಟುಂಬ ಟೂರ್ನಿ ಆಯೋಜಿಸಲು ಅನುಕೂಲವಾಗುವಂತೆ ಅಕಾಡೆಮಿ ಸ್ಥಾಪಿಸಲಾಗಿದೆ ಎಂದರು.

ಈಗಾಗಲೇ ಹತ್ತು ಸದಸ್ಯರ ಆಡಳಿತ ಮಂಡಳಿ ರಚಿಸಿಕೊಂಡು ಮುನ್ನಡೆಸಲಾಗುತ್ತಿದೆ. ಟೂರ್ನಿ ಆಯೋಜಿಸುವ ಕುಟುಂಬದ ಒಬ್ಬ ಸದಸ್ಯರನ್ನು ಅಕಾಡೆಮಿಗೆ ಸೇರಿಸಿಕೊಂಡು ಮುಂದುವರಿಸಲಾಗುವುದು. ಈ ವರ್ಷ ಏಪ್ರಿಲ್ ತಿಂಗಳಲ್ಲಿ ಚೆಟ್ಟಂಗಡ ಕುಟುಂಬವು ಟಿ. ಶೆಟ್ಟಿಗೇರಿ ಗ್ರಾಮದಲ್ಲಿ ಟೂರ್ನಿ ಆಯೋಜಿಸುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭ ಅಕಾಡೆಮಿಯ ಪ್ರಮುಖರಾದ ಉಳುವಂಗಡ ಲೋಹಿತ್ ಭೀಮಯ್ಯ, ಪೊನ್ನೋಲತಂಡ ಹರೀಶ್ ನಾಚಪ್ಪ, ಲಕ್ಷ್ಮಿ ನಾಚಪ್ಪ, ಪ್ರತಿನ್ ಮುತ್ತಣ್ಣ ಇದ್ದರು.

# ಜನಪ್ರತಿನಿಧಿಗಳು ಅಭಿವೃದ್ಧಿಗೆ ಒತ್ತು ನೀಡಿ: ಪ್ರೊ.ಜೆಪಿ ಕರೆ

ಮಂಡ್ಯ, ಜ.14– ಜನಪ್ರತಿನಿಧಿಗಳು ಹಣಕ್ಕೆ ಮಾರು ಹೋಗದೇ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ ಕರೆ ನೀಡಿದರು.

ನಗರದ ಕರ್ನಾಟಕ ಸಂಘದ ಆವರಣದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಶನಿವಾರ ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ ಸಂಯುಕ್ತಾಶ್ರಯದಲ್ಲಿ ಸಂಕ್ರಾಂತಿ ಸಂಭ್ರಮ ಅಂಗವಾಗಿ ಹಮ್ಮಿಕೊಂಡಿದ್ದ ಕನ್ನಡ ಅಕ್ಷರ ಜಾತ್ರೆ, ಅಭಿನಂದನೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರೊ.ಜೀಶಂಪ ಹೆಸರಿನಲ್ಲಿ ಕವಿಕಾವ್ಯ ಮೇಳ ಹಾಗೂ ಅಕ್ಷರ ಜಾತ್ರೆ ನಡೆಯುತ್ತಿರುವುದು ನಿಜಕ್ಕೂ ಶ್ಲಾಘನೀಯ. ಏಕೆಂದರೆ ಪ್ರಸ್ತುತ ಸಾಹಿತಿ ಹಾಗೂ ಕವಿಗಳಿಗೆ ಡಾ. ಜೀಶಂಪ ಅವರ ಪರಿಚಯವೇ ಇಲ್ಲ. ಜಾನಪದ ಕ್ಷೇತ್ರದ ವಿಶ್ವಮಾನವರಾದ ಡಾ.ಜೀ.ಶಂ. ಪರಮಶಿವಯ್ಯ ಅವರು ಜಾನಪದ ಕ್ಷೇತ್ರದ ವಿಶ್ವಮಾನವ ಜಾನಪದ ತಜ್ಞನಾಗಿ, ಪ್ರಾಧ್ಯಾಪಕನಾಗಿ, ಸಾಹಿತಿಯಾಗಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮನೆ ಮಾತಾಗಿದ್ದರು ಎಂದು ಬಣ್ಣಿಸಿದರು.

ಬೆಂಗಳೂರಿನ ಗೋಸಂಪತ್ತು ಸಂರಕ್ಷಕ ಮಹೇಂದ್ರ ಮನೋತ್ ಮಾತನಾಡಿ, ಕನ್ನಡ ಪ್ರಾಚೀನ ಭಾಷೆ. ರಾಮಾಯಣ ಹಾಗೂ ಮಹಾಭಾರತ ಕಾಲದಿಂದಲೂ ಕನ್ನಡಕ್ಕೆ ಅಸ್ತಿತ್ವವಿದೆ. ಕನ್ನಡ ಸಾಂಸ್ಕೃತಿಕ ಭಾಷೆಯಾಗಿದ್ದು, ದೇಶದಲ್ಲೇ ಕನ್ನಡ ಭಾಷೆಗೆ ವಿಶೇಷ ಸ್ಥಾನಮಾನವಿದೆ. ಕನ್ನಡ ಹಿಂದೂ ಧರ್ಮದ ಹೆಮ್ಮೆಯ ಭಾಷೆ ಸಹ ಆಗಿದ್ದು, ದೇಶದಲ್ಲಿ ಕನ್ನಡ ಭಾಷೆ, ಹಿಂದೂ ಧರ್ಮ, ಸನಾತನ ಪದ್ಧತಿ, ಗೋ ಸಂರಕ್ಷಣೆಗೆ ತನ್ನದೇ ಆದ ವೈಶಿಷ್ಟ್ಯವಿದೆ ಎಂದು ಬಣ್ಣಿಸಿದರು.

ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಈ.ಸಿ.



ನಿಂಗರಾಜ್‌ಗೌಡ ಮಾತನಾಡಿ, ಸಮಾಜದಲ್ಲಿ ನಾವು ಮೌಲ್ಯಾಧಾರಿತವಾಗಿ ಬದುಕಲು ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಬಹಳ ಮುಖ್ಯ. ಕನ್ನಡ ಭಾಷೆ ಉಳಿಸಿ ಬೆಳೆಸಬೇಕೆಂದರೆ ನಾವು ನಮ್ಮ ಸಂಸ್ಕೃತಿಗೆ ಹೆಚ್ಚಿನ ಒತ್ತು ಕೊಡಬೇಕು. ಕನ್ನಡ ಭಾಷೆಯನ್ನು ಪರಭಾಷಾ ಹಾವಳಿ ನಡುವೆ ಕೆಚ್ಚೆದೆಯಿಂದ ಉಳಿಸಿ ಬೆಳೆಸಬೇಕು. ರಾಜ್ಯದ ಅದೆಷ್ಟೋ ಜಿಲ್ಲೆಗಳಲ್ಲಿ ಕನ್ನಡ ಭಾಷೆ ಮಾತನಾಡುವವರ ಸಂಖ್ಯೆ ಕಡಿಮೆಯಾಗಿದೆ. ಆದರೆ ನಮ್ಮ ಮಂಡ್ಯ ಜಿಲ್ಲೆ ಸೇರಿದಂತೆ ಹಳೇ ಮೈಸೂರು ಭಾಗದಲ್ಲಿ ಕನ್ನಡ ಇನ್ನೂ ಸಹ ತನ್ನ ಬೇರನ್ನು ಹಾಗೆಯೇ ಉಳಿಸಿಕೊಂಡಿದ್ದು, ಕನ್ನಡ ಭಾಷೆ ಕರುನಾಡ ಸಾರಸ್ವತ ಲೋಕದಲ್ಲಿ ಇನ್ನೂ ಎತ್ತರಕ್ಕೆ ಬೆಳೆಯಬೇಕೆಂದು ಕರೆ ನೀಡಿದರು.

ಖ್ಯಾತ ವೈದ್ಯ ಡಾ.ಕೃಷ್ಣ ಮಾತನಾಡಿದರು. ಈ ವೇಳೆ ಸರ್ಕಾರಿ ಔಷಧ ಮಹಾವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಸಾಹಿತಿ ಡಾ.ಕೆ.ಸಿ.ಚಲುವರಾಜು ಸಮ್ಮೇಳನಾಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ರಾಜ್ಯ ಸಂಪಾದಕರ ಸಂಘದ ಅಧ್ಯಕ್ಷ ಮತ್ತೀಕೆರೆ ಜಯರಾಂ, ಡಾ.ಜೀ.ಶಂ.ಪ. ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ, ಕಾರ್ಯದರ್ಶಿ ಮಂಗಲ ಶಿವಣ್ಣ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಬನ್ನಂಗಾಡಿ ಸಿದ್ದಲಿಂಗಯ್ಯ, ಸಾಹಿತಿ ಡಾ.ಶಿವಕುಮಾರ್ ಮಗದ, ಪತ್ರಕರ್ತ ರಾಗಿಮುದ್ದನಹಳ್ಳಿ ನಾಗೇಶ್ ಸೇರಿದಂತೆ ಇತರರಿದ್ದರು.

> ಮಂಡ್ಯದಲ್ಲಿ ಒಂದು ಸುಸಜ್ಜಿತ ರಂಗಮಂದಿರವಿಲ್ಲ. ಪ್ರಸ್ತುತ ಕಲಾ ಮಂದಿರದ ಗತಿ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತು. ಸುಸಜ್ಜಿತವಾಗಿ ಅಂಬೇಡ್ಕರ್ ಭವನ ಇದೆಯಾದರೂ ಅದರ ಬಾಡಿಗೆ 35 ಸಾವಿರ ಇದೆ. ರಿಯಾಯಿತಿ ದರದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಸಮರ್ಪಕ ರಂಗಮಂದಿರ ಇಲ್ಲದಿರುವುದು ಶೋಚನೀಯ. ಪ್ರಸ್ತುತ ಘೋಷಣೆಯಾಗಿರುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ನೆನಪಿನಾರ್ಥ ಒಂದು ಸುಸಜ್ಜಿತ ರಂಗಮಂದಿರ ನಿರ್ಮಾಣವಾಗಲೇಬೇಕು. ಕಲೆ, ಸಂಸ್ಕೃತಿಗೆ ಇಲ್ಲಿನ ಜನಪ್ರತಿನಿಧಿಗಳು ಆದ್ಯತೆ ನೀಡಲೇಬೇಕು.
>
> – ಪ್ರೊ.ಬಿ.ಜಯಪ್ರಕಾಶ್‌ಗೌಡ, ಕರ್ನಾಟಕ ಸಂಘದ ಅಧ್ಯಕ್ಷ.

## ಇಂದು ಮಂಡ್ಯದಲ್ಲಿ ಯೋಗಥಾನ್

ಮಂಡ್ಯ, ಜ.14– ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಆಯುಷ್ ಇಲಾಖೆ, ನೆಹರು ಯುವ ಕೇಂದ್ರ, ಎನ್‌ಎಸ್‌ಎಸ್ ಘಟಕದ ಸಹಯೋಗದೊಂದಿಗೆ ಯೋಗಥಾನ್ 2022–23ರ ಗಿನ್ನಿಸ್ ವಿಶ್ವ ದಾಖಲೆ ಕಾರ್ಯಕ್ರಮ ಜ.15 ರಂದು ಬೆಳಗ್ಗೆ 7 ಗಂಟೆಗೆ ನಗರದ ಪಿಇಟಿ ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸಲಿದ್ದಾರೆ. ರೇಷ್ಮೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ ಉಪಸ್ಥಿತರಿದ್ದು, ಶಾಸಕ ಎಂ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಆದಿಚುಂಚನಗಿರಿ ಮಠದ ಡಾ.ನಿರ್ಮಲನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಶಾಸಕರಾದ ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಮ ರಾಯಪುರ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗ ಹಾಗೂ ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತ ಕೆ.ನಾಗಣ್ಣಗೌಡ, ನಗರಸಭೆ ಉಪಾಧ್ಯಕ್ಷೆ ಇಷ್ರಾತ್ ಫಾತೀಮಾ, ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ, ಆರಕ್ಷಕ ಅಧೀಕ್ಷಕರು ಎನ್.ಯತೀಶ್, ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಓಂಪ್ರಕಾಶ್.ಜಿ, ಜಿಲ್ಲಾ ಆಯುಷ್ ವೈದ್ಯಾಧಿಕಾರಿ ಡಾ.ಬಿ.ಎಸ್ ಸೀತಾಲಕ್ಷ್ಮಿ ಸೇರಿದಂತೆ ಇನ್ನಿತರರಿದ್ದರು.

# ಒಕ್ಕಲಿಗರ ಒಕ್ಕೂಟದ ಮಹಿಳಾ ಘಟಕಕ್ಕೆ ಪ್ರೇಮ ಅಧ್ಯಕ್ಷೆ

ಕೆ.ಆರ್.ಪೇಟೆ, ಜ.14–ತಾಲೂಕು ಒಕ್ಕಲಿಗರ ಒಕ್ಕೂಟದ ಮಹಿಳಾ ಘಟಕದ ನೂತನ ಅಧ್ಯಕ್ಷೆಯಾಗಿ ಪ್ರೇಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಯಮುನಾ ಅವರು ನಿಧನರಾದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಪ್ರೇಮ ಅವರನ್ನು ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕು ಪದಾಧಿಕಾರಿಗಳ ಸಭೆಯಲ್ಲಿ ಒಮ್ಮತದಿಂದ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷೆ ಪ್ರೇಮ ಮಾತನಾಡಿ, ತಾಲೂಕು ಒಕ್ಕಲಿಗರ ಒಕ್ಕೂಟದ ಮಹಿಳಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಆಯ್ಕೆ ಮಾಡಿದ ಎಲ್ಲಾ ಪದಾಧಿಕಾರಿಗಳಿಗೂ ಧನ್ಯವಾದ ತಿಳಿಸುತ್ತೇನೆ. ತಾಲೂಕಿನ ಒಕ್ಕಲಿಗರ



ಹಿತರಕ್ಷಣೆಗೆ ಎಲ್ಲರೊಂದಿಗೆ ಸೇರಿ ಕೆಲಸ ಮಾಡುತ್ತೇನೆ. ಪ್ರಮುಖವಾಗಿ ಮಹಿಳೆಯರನ್ನು ಸಂಘಟಿಸಿ ಸಮುದಾಯದ ಏಳಿಗೆಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಗೌರವಾಧ್ಯಕ್ಷರಾಗಿ ರಮಾಮಣಿ, ಉಪಾಧ್ಯಕ್ಷರಾಗಿ ರೇಣುಕಾ, ಪ್ರಮೀಳಾ, ಪಾರ್ವತಮ್ಮ, ಕಾರ್ಯದರ್ಶಿಯಾಗಿ ಅಶ್ವಿನ್ ಲಕ್ಷ್ಮಿ, ಖಜಾಂಚಿಯಾಗಿ ಐಶ್ವರ್ಯ, ಸಹ ಕೋಶಾಧ್ಯಕ್ಷರಾಗಿ ನೇತ್ರ, ಸಂಘಟನಾ ಕಾರ್ಯದರ್ಶಿಯಾಗಿ ಶಿವಮ್ಮ, ಮಾಧ್ಯಮ ಕಾರ್ಯದರ್ಶಿಯಾಗಿ ಮಧು, ಕಾನೂನು ಸಲಹೆಗಾರರಾಗಿ ಕೆ.ಎಲ್. ರಾಣಿ, ಸಂಚಾಲಕರಾಗಿ ಮಂಜುಳಾ, ಪದಾಧಿಕಾರಿಗಳಾಗಿ ಐಶ್ವರ್ಯ, ರೇಣುಕಾ, ಪಾರ್ವತಮ್ಮ, ನೇತ್ರಾವತಿ, ರಾಣಿ ವಿಮಲಾ, ಕವಿತಾ, ಜ್ಯೋತಿ, ಲಲಿತಾ, ಕಿರಣ್ ಕುಮಾರ್, ರಮೇಶ್, ಗಂಗಾಧರ್, ಮಧು ಇತರರಿದ್ದರು.

## ಶ್ರೀಧರ್ಮಸ್ಥಳ ಸಂಸ್ಥೆಯಿಂದ ದೇವಸ್ಥಾನ ಜೀರ್ಣೋದ್ಧಾರಕ್ಕೆ ಚೆಕ್ ವಿತರಣೆ



ನಾಗಮಂಗಲ, ಜ.14– ತಾಲೂಕಿನ ಬೆಳ್ಳೂರು ವಲಯದಲ್ಲಿ ನಿರ್ಮಾಣವಾಗುತ್ತಿರುವ ಶ್ರೀಕಾಳಿಕಾಂಬ ಕಮಟೇಶ್ವರ ಗಣಪತಿ ದೇವಸ್ಥಾನದ ಅಭಿವೃದ್ಧಿಗೆ ಧರ್ಮಸ್ಥಳ ಟ್ರಸ್ಟ್‌ನಿಂದ 1 ಲಕ್ಷ ರೂ.ಗಳ ಸಹಾಯಧನದ ಚೆಕ್ ವಿತರಿಸಲಾಯಿತು.

ನಂತರ ಮಾತನಾಡಿದ ಯೋಜನಾಧಿಕಾರಿ ದಿವಾಕರ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅನೇಕ ಜನ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತನ್ನ ಸಂಘಗಳ ಮೂಲಕ ಮದ್ಯವರ್ಜನ, ದೇವಾಲಯಗಳ ಜೀರ್ಣೋದ್ಧಾರ, ಹಾಲಿನ ಡೈರಿ ನಿರ್ಮಾಣಕ್ಕೆ ಸಹಾಯಧನ, ಖುಷಿ ಮೇಳ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಮುಂತಾದ ಹಲವಾರು ಕಾರ್ಯಕ್ರಮಗಳ ಮೂಲಕ ಗ್ರಾಮಗಳ ಅಭಿವೃದ್ಧಿಗೆ ಮುಂದಾಗಿದೆ. ದೇವಾಲಯಕ್ಕೆ ನೀಡಿರುವ ಸಹಾಯಧನವನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದರು.

ವಲಯದ ಮೇಲ್ವಿಚಾರಕ ಕಾರ್ತಿಕ್, ಸೇವಾ ಪ್ರತಿನಿಧಿ ಜಯಂತಿ, ಟ್ರಸ್ಟ್ ಅಧ್ಯಕ್ಷ ದಿವಾಕರ್ ಮೂರ್ತಿ, ಕಾರ್ಯದರ್ಶಿ ಕೆ.ಪ್ರಕಾಶ್, ಖಜಾಂಚಿ ಎಸ್.ಕುಮಾರ್, ಪದಾಧಿಕಾರಿಗಳು ಇದ್ದರು.

## ಜ.17ರಂದು ನಗರಸಭೆ ವಿಶೇಷ ಸಭೆ

ಮಂಡ್ಯ, ಜ.14– ನಗರಸಭೆಯ ಧರಣಪ್ಪ ಸಭಾಂಗಣದಲ್ಲಿ ಜ.17ರಂದು ಬೆಳಗ್ಗೆ 11 ಗಂಟೆಗೆ ನಗರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ನಡೆಯಲಿದೆ.

ಮಂಡ್ಯ ನಗರಕ್ಕೆ ಸಂಬಂಧಿಸಿದಂತೆ ಜಿಲ್ಲಾ ಆಸ್ಪತ್ರೆ, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಗೃಹ ಮಂಡಳಿ ಮತ್ತು ಅರಣ್ಯ ಇಲಾಖೆಗಳಿಂದ ಕೈಗೊಳ್ಳಬೇಕಾದ ಕೆಲಸ ಕಾರ್ಯಗಳ ಕುರಿತು ಚರ್ಚಿಸಲು ವಿಶೇಷ ಸಭೆ ಕರೆಯಲಾಗಿದೆ ಎಂದು ನಗರಸಭೆ ಪೌರಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲೆಯಲ್ಲಿ ಸುಗ್ಗಿ ಹಬ್ಬ ಸಂಕ್ರಾಂತಿ ಸಂಭ್ರಮ

## ಬೆಲೆ ಏರಿಕೆ ಮಧ್ಯೆಯೇ ಖರೀದಿ ಭರಾಟೆ ಜೋರು

ಚಾಮರಾಜನಗರ, ಜ.14– ಸುಗ್ಗಿ ಹಬ್ಬ ಸಂಕ್ರಾಂತಿ ಆಚರಣೆಗೆ ಜಿಲ್ಲೆಯಾದ್ಯಂತ ಸಡಗರ, ಸಂಭ್ರಮದ ಸಿದ್ಧತೆ ನಡೆಯುತ್ತಿದ್ದು, ಬೆಲೆ ಏರಿಕೆ ಮಧ್ಯೆಯೇ ಮಾರುಕಟ್ಟೆಯಲ್ಲಿ ಖರೀದಿ ಜನರ ಭರಾಟೆ ಜೋರಾಗಿದೆ.

ಹಿಂದೂಗಳ ಪವಿತ್ರ ಹಬ್ಬ ಮಕರ ಸಂಕ್ರಾಂತಿ. ಸೂರ್ಯನು ತನ್ನ ಪಥವನ್ನು ಬದಲಿಸುವ ಈ ದಿನವನ್ನು ದೇಶದಾದ್ಯಂತ ವಿವಿಧ ಹೆಸರು, ಆಚರಣೆ, ಸಂಪ್ರದಾಯಗಳಲ್ಲಿ ಆಚರಿಸಲಾಗುತ್ತದೆ.

ಹಬ್ಬದ ಮುನ್ನಾ ದಿನವಾದ ಶನಿವಾರ ಹಬ್ಬಕ್ಕೆ ಅಗತ್ಯವಾದ ವಸ್ತುಗಳ ಖರೀದಿಯಲ್ಲಿ ಜಿಲ್ಲೆಯ ಜನರು ಉತ್ಸಾಹದಿಂದ ತೊಡಗಿದ್ದರು. ನಗರದ ಚಿಕ್ಕ ಅಂಗಡಿ, ದೊಡ್ಡ ಅಂಗಡಿ ಬೀದಿಯಲ್ಲಿ ಎಳ್ಳು, ಬೆಲ್ಲ, ಕಬ್ಬಿನ ಜಲ್ಲೆ, ಸಕ್ಕರೆ ಅಚ್ಚು ಮಾರಾಟ ನಡೆಯುತ್ತಿದೆ. ತಳ್ಳುಗಾಡಿಗಳಲ್ಲೂ ವ್ಯಾಪಾರಿಗಳು ಸಂಕ್ರಾಂತಿ ಹಬ್ಬಕ್ಕೆ ಅಗತ್ಯವಿರುವ ಸಾಮಗ್ರಿ ಮಾರಾಟ ಮಾಡುತ್ತಿದ್ದಾರೆ. ಅಂಗಡಿಯಲ್ಲಿನ ಬೆಲೆ ಹಾಗೂ ತಳ್ಳುಗಾಡಿ ವ್ಯಾಪಾರಕ್ಕೆ ಅಷ್ಟೇನು ವ್ಯತ್ಯಾಸವಿಲ್ಲ.

ಕಳೆದೆರಡು ವರ್ಷ ಕೊರೊನಾ ಹಾವಳಿ ಇತ್ತು ಈ ಬಾರಿ ಬೆಲೆ ಹೆಚ್ಚಿದ್ದರಿಂದ ನಾಗರಿಕರು ಹಬ್ಬದ ವಸ್ತುಗಳನ್ನು ಖರೀದಿಸಲು ಹೆಚ್ಚು ಉತ್ಸಾಹ ತೋರುತ್ತಿಲ್ಲ. ಸಕ್ಕರೆ ಅಚ್ಚು, ಎಳ್ಳು, ಕಡಲೆ ಹಾಗೂ ಅಚ್ಚು ಬೆಲ್ಲದ ಧಾರಣೆ ಕಳೆದ ವರ್ಷದಷ್ಟೇ ಇದ್ದರೂ ವ್ಯಾಪಾರ ಮಾತ್ರ ಬಹುಪಾಲು ಕಡಿಮೆಯಾಗಿದೆ ಎಂದು ವ್ಯಾಪಾರಿ ಬಸವಣ್ಣ ಬೇಸರ ವ್ಯಕ್ತಪಡಿಸಿದರು.

ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ಸಕ್ಕರೆ ಅಚ್ಚಿಗೆ 100 ರಿಂದ 150 ರೂ., ಒಂದು ಕೆ.ಜಿ. ಪ್ಯಾಕೆಟ್ ಎಳ್ಳಿಗೆ 160 ರಿಂದ 200



ರೂ., ಕಡಲೆ ಕೆ.ಜಿ.ಗೆ 100 ರೂ., ಎಳ್ಳು–ಬೆಲ್ಲ ಮಿಶ್ರಣದ ಕೆ.ಜಿ. ಪ್ಯಾಕೆಟ್‌ಗೆ 120 ರಿಂದ 150 ರೂ., ಪೆಪ್ಪರ್‌ಮೆಂಟ್‌ಗೆ 100 ರೂ., ಅಚ್ಚುಬೆಲ್ಲ 5ರಿಂದ 10 ರೂ.ವರೆಗೂ ಮಾರಾಟವಾಗುತ್ತಿದೆ.

ಜಿಲ್ಲೆಯಲ್ಲಿ ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾದ ಪರಿಣಾಮ ಹಲವೆಡೆ ಪ್ರವಾಹ ಪರಿಸ್ಥಿತಿ ಉಂಟಾಗಿ ಬೆಳೆ ನಾಶ ಹಾಗೂ ಕಬ್ಬಿಗೆ ಸಮರ್ಪಕ ಬೆಲೆ ದೊರೆಯದ ಹಿನ್ನೆಲೆಯಲ್ಲಿ ಕಬ್ಬು ಬೆಳೆಯಲು ರೈತರು ಹಿಂದೇಟು ಹಾಕಿದರ ಪರಿಣಾಮ ಕಬ್ಬಿನ ಇಳುವರಿ ಕುಸಿತವಾಗಿದೆ. ಹೀಗಾಗಿ ಆಲೆಮನೆಯಲ್ಲಿ ಬೆಲ್ಲದ ಉತ್ಪಾದನೆಯೂ ಕುಂಠಿತಗೊಂಡಿದೆ. ಸಹಜವಾಗಿ ಅಚ್ಚುಬೆಲ್ಲ ದುಬಾರಿಯಾಗಿದೆ ಎನ್ನುತ್ತಾರೆ ವ್ಯಾಪಾರಿಗಳು.

ಸಂಕ್ರಾಂತಿಯಲ್ಲಿ ಕರಿಕಬ್ಬಿಗೆ ಹೆಚ್ಚಿನ ಬೇಡಿಕೆಯಿದೆ. ಜಿಲ್ಲೆಯಲ್ಲಿ ಈ ಕಬ್ಬು ಬೆಳೆಯುವ ಪ್ರಮಾಣ ಕಡಿಮೆ. ಹೀಗಾಗಿ, ವ್ಯಾಪಾರಿಗಳು ತಮಿಳುನಾಡಿನಿಂದ ಕರಿಕಬ್ಬು ತರಿಸಿಕೊಂಡು ಮಾರಾಟ ಮಾಡುತ್ತಿದ್ದಾರೆ. ಈ ಕಬ್ಬಿನ ಒಂದು ಜಲ್ಲೆಗೆ 30ರಿಂದ 40ರೂ. ಧಾರಣೆಯಿದೆ. ಸ್ಥಳೀಯವಾಗಿ ಬೆಳೆದಿರುವ ಕಬ್ಬಿಗೆ 20ರಿಂದ 25 ಬೆಲೆ ಇದೆ.

**ಹೂ–ಹಣ್ಣು ದುಬಾರಿ:** ಹಬ್ಬದ ಪರಿಣಾಮ ಹೂವು, ಹಣ್ಣುಗಳ ಬೆಲೆ ಏರಿಕೆಯಾಗಿದೆ. ಜಿಲ್ಲಾ ಕೇಂದ್ರಕ್ಕೆ ತಮಿಳುನಾಡು ಹಾಗೂ ಮೈಸೂರಿನಿಂದ ಹೂವು ಪೂರೈಕೆಯಾಗುತ್ತದೆ. ಆದರೆ, ಕಳೆದ ವಾರದಿಂದ ಹೂವಿನ ಪೂರೈಕೆ ಕಡಿಮೆಯಾಗಿದೆ. ಜಿಲ್ಲೆಯಲ್ಲಿ ಸ್ಥಳೀಯವಾಗಿ ಹೂವು ಬೆಳೆಯುವ ರೈತರು ಹೊರ ಜಿಲ್ಲೆ ಹಾಗೂ ರಾಜ್ಯಕ್ಕೆ ಮಾರಾಟ ಮಾಡುವುದರಿಂದ ಹಬ್ಬದ ವೇಳೆ ಬೆಲೆ ಏರಿಕೆಯಾಗಿದೆ ಎಂದು ಹೂವಿನ ವ್ಯಾಪಾರಿ ಮಂಜು ತಿಳಿಸಿದರು.

ಪ್ರಸ್ತುತ ಮಾರುಕಟ್ಟೆಯಲ್ಲಿ ಚೆಂಡು ಹೂವು 10 ರೂ., ಕಾಕಡ 50 ರೂ., ಕನಕಾಂಬರ 50ರಿಂದ 60 ರೂ., ಗುಲಾಬಿ ಒಂದಕ್ಕೆ 5ರಿಂದ 10 ರೂ. ಹಾಗೂ ಹೂವಿನ ಹಾರ 50ರಿಂದ 300 ರೂ.ವರೆಗೂ ಮಾರಾಟವಾಗುತ್ತಿದೆ. ಏಲಕ್ಕಿ ಬಾಳೆಹಣ್ಣಿನ ಬೆಲೆ ಕೆ.ಜಿ.ಗೆ 60ರಿಂದ 80 ರೂ., ಪಚ್ಚಬಾಳೆ ಹಣ್ಣಿಗೆ 30ರಿಂದ 40 ರೂ. ಧಾರಣೆ ಇದೆ.

ಈ ಬಾರಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಹಬ್ಬದ ಸಂಭ್ರಮಕ್ಕೆ ಕೊಂಚ ಅಡ್ಡಿಯುಂಟಾಗಿದೆ. ಅದರ ನಡುವೆಯೂ ನಾಗರಿಕರು ಹಬ್ಬದ ಸಾಮಗ್ರಿಗಳನ್ನು ಕೊಳ್ಳುವ ಮೂಲಕ ಸುಗ್ಗಿ ಹಬ್ಬವನ್ನು ಸ್ವಾಗತಿಸುವ ಸಂಭ್ರಮಕ್ಕೆ ಅಣಿಯಾಗುತ್ತಿರುವುದು ಕಂಡು ಬಂದಿದೆ.

# ವಿಶೇಷಚೇತನ ಫಲಾನುಭವಿಗಳಿಗೆ ಉಚಿತ ಸಾಧನ, ಸಲಕರಣೆ ವಿತರಣೆ

## ಅಂಗವಿಕಲರಿಗೆ ಆಸರೆಯಾಗಿ ನಿಲ್ಲುವ ಸದುದ್ದೇಶದಿಂದ ಸಲಕರಣೆಗಳ ಕೊಡುಗೆ: ಶ್ರೀನಿವಾಸಪ್ರಸಾದ್

ಚಾಮರಾಜನಗರ, ಜ.14– ಲೋಕಸಭಾ ಸದಸ್ಯ ವಿ.ಶ್ರೀನಿವಾಸಪ್ರಸಾದ್ ಅವರು ಕೇಂದ್ರ ಸರ್ಕಾರದ ವಿಶೇಷ ಆಡಿಪ್ ಯೋಜನೆಯಡಿ ಜಿಲ್ಲೆಯ ಬಾಕಿ ವಿಶೇಷಚೇತನ ಫಲಾನುಭವಿಗಳಿಗೆ ಉಚಿತ ಸಾಧನ, ಸಲಕರಣೆಗಳನ್ನು ನಗರದಲ್ಲಿಂದು ವಿತರಣೆ ಮಾಡಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ವಿಕಲಾಂಗ ವ್ಯಕ್ತಿಗಳ ಸಬಲೀಕರಣ (ದಿವ್ಯಾಂಗಜನ್) ಇಲಾಖೆ, ಆರ್ಟಿಫಿಷಿಯಲ್ ಲಿಂಬ್ಸ್ ಮ್ಯಾನುಫ್ಯಾಕ್ಚರಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ (ಅಲಿಂಕೋ), ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ನಡೆದ ಸಮಾರಂಭದಲ್ಲಿ ಈ ಸಾಧನ ಸಲಕರಣೆಗಳನ್ನು ವಿತರಿಸಿದರು.

ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ 2022ರ ಜುಲೈ ಮಾಹೆಯಲ್ಲಿ ವೈದ್ಯಕೀಯ ತಪಾಸಣಾ ಶಿಬಿರ ನಡೆಸಿ ಗುರುತಿಸಲಾಗಿದ್ದ 1693 ವಿಶೇಷಚೇತನ ಫಲಾನುಭವಿಗಳಿಗೆ 1 ಕೋಟಿ 20 ಲಕ್ಷಕ್ಕೂ ಹೆಚ್ಚಿನ ಮೊತ್ತದ ಸಾಧನ, ಸಲಕರಣೆಗಳನ್ನು ಡಿಸೆಂಬರ್‌ನಲ್ಲಿ ಉಚಿತವಾಗಿ ವಿತರಿಸಲಾಗಿತ್ತು. 2ನೇ ಹಂತದ 'ಸಾಮಾಜಿಕ ಅಧಿಕಾರಿತಾ ಶಿಬಿರ'ದಲ್ಲಿ ಶ್ರೀನಿವಾಸಪ್ರಸಾದ್ ಕಾರ್ಯಕ್ರಮ ಉದ್ಘಾಟಿಸಿ, ಬಾಕಿ ಉಳಿದ ದಿವ್ಯಾಂಗರಿಗೆ ಅಗತ್ಯವುಳ್ಳ ಸಾಧನ, ಸಲಕರಣೆಗಳನ್ನು ಸಾಂಕೇತಿಕವಾಗಿ ವಿತರಿಸಿದರು.

ಬಳಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿ ಅಂಗವಿಕಲತೆಯಿಂದ ಬಳಲುತ್ತಿರುವವರಿಗೆ ಮಾನವೀಯ



ನೆಲೆಗಟ್ಟಿನಲ್ಲಿ ಸೇವೆ ನೀಡುವ ಉದ್ದೇಶದಿಂದ ಈ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂಗವಿಕಲರಿಗೆ ಅನುಕಂಪ ನೀಡಿದರೆ ಸಾಲದು, ಆಸರೆಯಾಗಿ ನಿಲ್ಲುವ ಸದುದ್ದೇಶದಿಂದ ಕೇಂದ್ರ ಸರ್ಕಾರ ದೇಶದ 67 ಲೋಕಸಭಾ ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ವರ್ಚುಯಲ್ ಮೂಲಕ ಕಾರ್ಯಕ್ರಮ ಆಯೋಜಿಸಿದೆ ಎಂದರು.

ವಿಕಲಚೇತನರಲ್ಲಿ ಸಾಕಷ್ಟು ಮಂದಿ ಬಡವರಾಗಿದ್ದಾರೆ. ಅಗತ್ಯ ಸಾಧನ, ಸಲಕರಣೆಗಳನ್ನು ಕೊಳ್ಳುವ ಶಕ್ತಿ ಅವರಲ್ಲಿಲ್ಲ. ಅಂತಹವರನ್ನು ಗುರುತಿಸಿ ಉಚಿತವಾಗಿ ವಿತರಿಸುತ್ತಿರುವುದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಮಿತಿ ಸದಸ್ಯನಾದ ನನ್ನಲ್ಲಿ ಧನ್ಯತಾಭಾವ ಉಂಟಾಗಿದೆ ಎಂದ ಅವರು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ, ಶಿಸ್ತುಬದ್ಧವಾಗಿ ಆಯೋಜಿಸಿದ ಜಿಲ್ಲಾಡಳಿತ, ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು.

ವಿಶೇಷ ಆಹ್ವಾನಿತರಾಗಿ ಭಾಗವಹಿಸಿ ಮಾತನಾಡಿದ ಶಾಸಕ ಎನ್.ಮಹೇಶ್, ಸಮಾಜದಲ್ಲಿ ವಿಕಲಚೇತನರು ಇತರರಂತೆ ಗೌರವಯುತವಾಗಿ ಬದುಕಲು ಅವಕಾಶ ಮಾಡಿಕೊಡಬೇಕು. ಮಾನವೀಯ ಅಂತಃಕರಣವನ್ನು ವಿಕಲಚೇತನರಿಗೂ ನೀಡಬೇಕು. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬದ್ಧವಾಗಿವೆ ಎಂದರು.

ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ. ನಿಜಗುಣರಾಜು ಮಾತನಾಡಿದರು.

ಆರಂಭದಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು, ಜಿಲ್ಲೆಯ ವಿಕಲಚೇತನರಿಗೆ ಸಾಧನ, ಸಲಕರಣೆಗಳನ್ನು ವಿತರಿಸಲು ನಡೆದ ಮೊದಲ ಕಾರ್ಯಕ್ರಮದಲ್ಲಿ 1500 ಮಂದಿಗೆ ವಿತರಿಸಿ ಶೇ.92ರಷ್ಟು ಪ್ರಗತಿ ಸಾಧಿಸಿದ್ದು, ಬಾಕಿ ಉಳಿದ ವಿಕಲಚೇತನರಿಗೆ ಇಂದು ವಿತರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಯಾವುದೇ ವಿಶೇಷಚೇತನರು ಸಾಧನ, ಸಲಕರಣೆಯಿಂದ ವಂಚಿತರಾಗಿದ್ದರೆ, ಅವರನ್ನು ನೋಂದಾವಣೆ ಮಾಡಿಸಿ ವೈದ್ಯಕೀಯ ತಪಾಸಣೆ ನಡೆಸಿ ಅವಶ್ಯ ಸಲಕರಣೆಗಳನ್ನು ಅವರವರ ಮನೆಗಳಿಗೆ ತಲುಪಿಸಲಾಗುವುದು ಎಂದರು.

ನಗರಸಭಾ ಅಧ್ಯಕ್ಷೆ ಸಿ.ಎಂ. ಆಶಾ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಉಪವಿಭಾಗಾಧಿಕಾರಿ ಗೀತಾ ಹುಡೇದ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಗೀತಾಲಕ್ಷ್ಮೀ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಎಂ. ವಿಶ್ವೇಶ್ವರಯ್ಯ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ದೀಪಾ, ಡಿ.ವೈ.ಎಸ್.ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಅಲಿಂಕೋ ಸಂಸ್ಥೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

### ಸೈಯದ್ ಖಲೀಲ್ ನಿಧನ



ಚಾಮರಾಜನಗರ, ಜ.14– ಚಾಮರಾಜನಗರದ ರಹಮತ್ ನಗರದಲ್ಲಿ ವಾಸವಾಗಿದ್ದ ತಲಕಾಡಿನ ವಾಸಿ ಸೈಯದ್ ಖಲೀಲ್(65) ಅವರು, ಅನಾರೋಗ್ಯದಿಂದ ಶನಿವಾರ ಬೆಳಗ್ಗೆ 6.30ಕ್ಕೆ ಚಾಮರಾಜನಗರದ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಹಾಗೂ ಮೂವರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

ಚಾಮರಾಜನಗರ ಜಿಲ್ಲೆಯ ಪತ್ರಕರ್ತ ಅಸ್ಲಾಂಪಾಷ ಸೈಯದ್ ಖಲೀಲ್ ಅವರ ಮಗನಾಗಿದ್ದು, ತಲಕಾಡಿನ ಅಕ್ರಂಪಾಷ ಹಾಗೂ ಟಿ.ಎ.ಸಾಧಿಕ್ ಪಾಷ ಅವರಿಗೆ ಮೃತರು ಚಿಕ್ಕಪ್ಪನಾಗಬೇಕು. ಮೃತರ ಅಂತ್ಯಕ್ರಿಯೆ ಚಾಮರಾಜನಗರ ನಗರ ಗುಂಡ್ಲುಪೇಟೆ ರಸ್ತೆ ಬಳಿಯ ಖಬರಸ್ಥಾನದಲ್ಲಿ ಶನಿವಾರ ಸಂಜೆ ನೆರವೇರಿತು. ಮೃತರ ಅಂತಿಮ ದರ್ಶನದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಪಾಲ್ಗೊಂಡಿದ್ದರು.

**ಮೈಸೂರು ಮಿತ್ರ**

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ಮೊದಲನೇ ಪುಟದಿಂದ

## ಬಿಜೆಪಿ ಬರಲ್ಲ

ಆದರೂ ಎಷ್ಟು ಸೀಟು ಬಂದವು. ಕಾಂಗ್ರೆಸ್ ಶಕ್ತಿ 60–70 ಸೀಟು ಮಾತ್ರ. ನಾನು ಈಗ ನಿತ್ಯ ಹಳ್ಳಿಗಳ ಮೇಲೆ ಹೋಗುತ್ತಿದ್ದೇನೆ. 116 ಕ್ಷೇತ್ರಗಳನ್ನು ಮಾರ್ಚ್ ವೇಳೆಗೆ ಪೂರ್ಣಗೊಳಿಸುತ್ತೇನೆ. ಉತ್ತರ ಕರ್ನಾಟಕಕ್ಕೆ ಹೋಗೋದೆ ಇಲ್ಲ ಅಂದ್ರು. ಇಂದು ಹೋಗಿ ಬಂದಿದ್ದೇನೆ ಎಷ್ಟು ಜನ ಸೇರಿದ್ದಾರೆ ನೋಡಿ ಎಂದು ವಿವರಿಸಿದರು.

ಇನ್ನು ರೈತರ ಬದುಕು ಕೇಳಲೇ ಬೇಡಿ. ರೈತರ ಆದಾಯವನ್ನು ದ್ವಿಗುಣ ಮಾಡ್ತೀವಿ ಅಂತ ಕೇಂದ್ರ ಹೇಳಿತ್ತು. ಆದರೆ ರೈತರ ಖರ್ಚು ದ್ವಿಗುಣ ಆಗಿದೆ ಅಷ್ಟೆ. ಕಲಬುರಗಿ, ಬೀದರ್ ಮತ್ತಿತರ ಜಿಲ್ಲೆಗಳಲ್ಲಿ ತೊಗರಿ ಬೆಳೆ ಬೆಳೆಯುತ್ತಾರೆ. ಅದಕ್ಕೆ ರೋಗ ಹೆಚ್ಚಾಗಿ ಅವರು ಬೆಳೆದ ಬೆಳೆ ಸರಿಯಾಗಿ ಕೈ ಸೇರುತ್ತಿಲ್ಲ. ರೈತರು ಮತ್ತೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. 2006ರಲ್ಲಿ ಸಾಲ ಮನ್ನಾ ಮಾಡಿದ್ದೆ, ಕಳೆದ ಬಾರಿಯೂ ಸಾಲ ಮನ್ನಾ ಮಾಡಿದ್ದೆ. ಹೀಗಾಗಿ ಸಾಲ ಮನ್ನಾ ಮಾಡಿದರೆ ಮತ್ತೆ ರೈತ ಸಾಲ ಮಾಡುತ್ತಾನೆ. ಅದಕ್ಕಾಗಿಯೇ ನಾನು ರೈತರಿಗೆ ಒಂದು ಶಾಶ್ವತ ಯೋಜನೆ ನೀಡಲು ಚಿಂತಿಸಿದ್ದೇನೆ ಎಂದು ಹೇಳಿದರು.

ಮನೆ ಕಟ್ಟಿ ಕೊಡುತ್ತೇವೆ ಎಂದು ಹೇಳಿದ ಸರ್ಕಾರ ಕಟ್ಟಿಕೊಡಲಿಲ್ಲ. ಸಿದ್ದರಾಮಯ್ಯ ಸಿಎಂ ಆದಾಗ ಮನೆ ಕಟ್ಟಿ ಕೊಡ್ತೀವಿ ಅಂದ್ರು, ಅದು ಆಗಲಿಲ್ಲ. ಬಿಜೆಪಿ ಸರ್ಕಾರ ಬಂದಾಗ ಬಿದ್ದೋದ ಮನೆಗೆ ಹಣ ಕೊಡ್ತೀವಿ ಅಂದರು ಎಲ್ಲಿ ಕೊಟ್ಟರು. ನಾನು ಸಿಎಂ ಆಗಿದ್ದಾಗ ಮನೆ ಕಟ್ಟಿ ಕೊಟ್ಟೆ, ಕಟ್ಟುವವರಿಗೆ ಸಹಾಯ ಮಾಡಿದೆ. ಮನೆಯ ಅವಶ್ಯಕತೆ ಹಲವಾರು ಜನರಿಗೆ ಇದೆ. ಇದೆಲ್ಲವನ್ನೂ ನೋಡಿಯೇ ಪಂಚರತ್ನ ಯೋಜನೆ ಶುರು ಮಾಡಿರುವುದು. ಪ್ರಾರಂಭದಲ್ಲಿ ಇದರ ಬಗ್ಗೆ ಲಘುವಾಗಿ ಮಾತನಾಡಿದರು. ರೈತರ ಸಾಲ ಮನ್ನಾದ ವ್ಯಾಲ್ಯೂ ಏನು ಅಂತ ಈಗ ಹೇಳ್ತಾ ಇದ್ದಾರೆ. ಹಾಗಾಗಿ ಈ ಬಾರಿ ನಾವು ಕೈ ಹಿಡಿತೀವಿ ಅಂತಿದ್ದಾರೆ ಎಂದು ನುಡಿದರು. ನನ್ನ ಕಾರ್ಯಕ್ರಮ ಸರ್ಕಾರದ ಆಸ್ತಿ ಮೌಲ್ಯ ಹೆಚ್ಚಾಗುವಂತದ್ದು. ಉಚಿತ ಕಾರ್ಯಕ್ರಮ ನಿಲ್ಲಿಸಬೇಕೆಂದು ಒಂದು ಕಡೆ ಮೋದಿಯವರು ಹೇಳ್ತಾರೆ. ಜನರ ದುಡ್ಡು ಸುಮ್ಮನೆ ನಷ್ಟ ಆಗಬಾರದು. ಇದರಿಂದ ಸರ್ಕಾರಕ್ಕೆ ಯಾವುದೇ ಗೇಳಿಕೆ ಇಲ್ಲ. ಕುಶಲಕರ್ಮಿಗಳಿಗೆ ಏನೋ 10 ಪರ್ಸೆಂಟ್ ಸಬ್ಸಿಡಿ ಕೊಡ್ತೀವಿ ಅಂತ ಬಜೆಟ್‌ನಲ್ಲಿ ಘೋಷಣೆ ಮಾಡಿ ಕೊಟ್ಟಿದ್ದಾರೆ. ಕುಶಲಕರ್ಮಿಗಳಿಗೆ ಅಷ್ಟೊಂದು ಹಣ ಎಲ್ಲಿಂದ ಬರಬೇಕು. ಅದಕ್ಕಾಗಿಯೇ ಜನರ ಮುಂದೆ ಕೇಳ್ತಾ ಇದ್ದೀನಿ. ನಮಗೆ ಒಂದು ಬಾರಿ ಸ್ಪಷ್ಟ ಬಹುಮತದ ಅಧಿಕಾರ ಕೊಡಿ.

ನಾನು ಐದು ವರ್ಷದಲ್ಲಿ ಈ ಯೋಜನೆ ಕೊಡದೆ ಇದ್ದರೆ ಪಕ್ಷ ವಿಸರ್ಜನೆ ಮಾಡುವುದಾಗಿ ಈಗಾಗಲೇ ಘೋಷಣೆ ಮಾಡಿದ್ದೇನೆ. ನನ್ನ ದೃಷ್ಟಿ ಕೇವಲ ಕಟ್ಟಡ, ಜಲಾಶಯ, ರಸ್ತೆ ಮಾಡುವುದಲ್ಲ. ಯಾವ ಸರ್ಕಾರ ಬಂದರೂ ಇದನ್ನು ಮಾಡುತ್ತೆ. ಮೀಸಲಾತಿಯಿಂದ ಎಷ್ಟು ಕುಟುಂಬ ನೆಮ್ಮದಿಯಿಂದ ಬದುಕುತ್ತಿವೆ. ಬಡತನದಿಂದ ಇನ್ನು ಎಷ್ಟು ಜನ ಇದ್ದಾರೆ. ನನ್ನ ಗುರಿ ಎಲ್ಲರಿಗೂ ಸರಿಸಮಾನದ ಬದುಕು ಕೊಡುವುದು. 75 ವರ್ಷವಾದರೂ ಸರಿಯಾದ ಬದುಕು ಮಾಡಿಕೊಳ್ಳೋದಕ್ಕೆ ಆಗಲಿಲ್ಲ ಎಂದು ಹೇಳಿದರು. ಪಂಚರತ್ನ ರಥಯಾತ್ರೆ ಮಾಡಿದ 45 ಕ್ಷೇತ್ರಗಳ ಪೈಕಿ 40 ಕ್ಷೇತ್ರಗಳಲ್ಲಿ ಗೆಲ್ಲುವ ಭರವಸೆ ಇದೆ. ನಾನು ಭೇಟಿ ಕೊಟ್ಟ ಕ್ಷೇತ್ರದಲ್ಲಿ ಜನರ ಶ್ರೀರಕ್ಷೆ ಇದೆ. ನಾಳೆ ಚುನಾವಣೆ ಆದರೂ ಗೆಲ್ಲುವ ಎಲ್ಲಾ ವಾತಾವರಣ ಇದೆ ಎಂದರು.

## ಇಂದು ಎಂಆರ್‌ಸಿ ಮೈದಾನದಲ್ಲಿ ಯೋಗಥಾನ್

ಚಾಮುಂಡಿಬೆಟ್ಟದ ತಪ್ಪಲಿನ ಎಂಆರ್‌ಸಿ ಮೈದಾನದಲ್ಲಿ ಸರ್ವ ರೀತಿಯ ಸಿದ್ಧತೆ ಮಾಡಲಾಗಿದೆ. ಗಣ್ಯರಿಗಾಗಿ ವೇದಿಕೆ, ಯೋಗ ಪ್ರದರ್ಶನ ಮಾರ್ಕಿಂಗ್, ಪ್ರವೇಶ–ನಿರ್ಗಮನ ಸ್ಥಳ, ವಾಹನ ನಿಲುಗಡೆಗೆ ವ್ಯವಸ್ಥೆ, ಶೌಚಾಲಯ, ಪಾಲ್ಗೊಳ್ಳುವ ಯೋಗಾಸಕ್ತರಿಗೆ ಬಿಸ್ಕೆಟ್, ನೀರಿನ ಬಾಟಲಿ ವಿತರಣೆ ಸೇರಿದಂತೆ ಕಾರ್ಯಕ್ರಮಕ್ಕೆ ಸಕಲ ರೀತಿಯ ಸಿದ್ಧತೆ ಮಾಡಲಾಗಿದೆ. ಶಾಲಾ–ಕಾಲೇಜುಗಳು, ಯೋಗ ತರಬೇತಿ ಸಂಸ್ಥೆಗಳು, ವಿವಿಧ ಇಲಾಖೆ ಸಿಬ್ಬಂದಿ, ಹಲವು ಸಂಘ–ಸಂಸ್ಥೆಗಳ ಸದಸ್ಯರು, ಯೋಗಾ ಸಕ್ತರು, ಸಾರ್ವಜನಿಕರು ಸೇರಿ ಈವರೆಗೆ 40,000 ಮಂದಿ ಯೋಗಥಾನ್‌ನಲ್ಲಿ ಭಾಗವಹಿಸಲು ಹೆಸರು ನೋಂದಾಯಿಸಿಕೊಂಡಿದ್ದು, ಭಾನುವಾರ ಬೆಳಗ್ಗೆ 7.30ರಿಂದ 9 ಗಂಟೆವರೆಗೆ ಯೋಗ ಪ್ರದರ್ಶನ ನಡೆಯಲಿದೆ. 80,000 ಮಂದಿ ಸೇರಿಸಿ, ಬೃಹತ್ ಸಾಮೂಹಿಕ ಯೋಗ ಪ್ರದರ್ಶನ ಏರ್ಪಡಿಸುವ ಗುರಿ ಹೊಂದಲಾಗಿತ್ತಾದರೂ, ಸಮಯಾಭಾವ ದಿಂದಾಗಿ ಹೆಚ್ಚು ಪ್ರಚಾರ ನೀಡಲು ಸಾಧ್ಯವಾಗಿಲ್ಲ. 40ರಿಂದ 50 ಸಾವಿರ ಮಂದಿ ಭಾಗವಹಿಸುವರೆಂದು ನಿರೀಕ್ಷಿಸಲಾಗಿದೆ. ಈ ಬಾರಿ ಯೋಗಥಾನ್ ತಾಲೀ ಮನ್ನು ಮಾಡಲು ಸಾಧ್ಯವಾಗಿಲ್ಲ ಎಂದು ಜಿಲ್ಲಾಡಳಿತ ಮೂಲಗಳು ತಿಳಿಸಿವೆ. ಕಾರ್ಯಕ್ರಮಕ್ಕೆ ಕೆ.ಆರ್. ಉಪ ವಿಭಾಗದ ಎಸಿಪಿ ಗಂಗಾಧರಸ್ವಾಮಿ ಅವರ ನೇತೃತ್ವದಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿ ಭಾರೀ ಬಿಗಿ ಬಂದೋಬಸ್ತ್, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ನೇತೃತ್ವದಲ್ಲಿ ಸುಗಮ ಸಂಚಾರ, ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

## ಖುದ್ದು ಸ್ಯಾಂಟ್ರೋ ರವಿ ವಿಚಾರಣೆ

ಸಮಂಜಸ ಮಾಹಿತಿ ನೀಡಲಿಲ್ಲ. ಲ್ಯಾಪ್‌ಟಾಪ್, ಮೊಬೈಲ್ ಸಿಮ್‌ಕಾರ್ಡ್ ಬಗ್ಗೆಯೂ ನನಗೇನೂ ಗೊತ್ತಿಲ್ಲ, ಎಲ್ಲಿಟ್ಟಿದ್ದೇನೆ ಎಂಬುದು ತಕ್ಷಣಕ್ಕೆ ನೆನಪಾಗುತ್ತಿಲ್ಲ ಎಂದಷ್ಟೇ ಹೇಳಿದನೇ ಹೊರತು, ನಿಖರ ಸುಳಿವು ನೀಡಿಲ್ಲ ಎಂದು ವಿಚಾರಣೆ ಬಳಿಕ ಬಿ.ರಮೇಶ್ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು. ಈ ನಡುವೆ ಮೈಸೂರಿನಲ್ಲೇ ಬೀಡು ಬಿಟ್ಟಿರುವ ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್, ಬೆಳಗ್ಗೆ ಸುಮಾರು 11.30 ಗಂಟೆ ವೇಳೆಗೆ ವಿಜಯನಗರ ಠಾಣೆಗೆ ತೆರಳಿ ವಿಚಾರಣೆ ನಡೆಸಿದರು. ಠಾಣೆಯ ಮೊದಲನೇ ಮಹಡಿಯ ಕೊಠಡಿಯೊಂದರಲ್ಲಿ ಸುಮಾರು ಒಂದೂವರೆ ತಾಸು ವಿಚಾರಣೆ ನಡೆಸಿದ ಅವರು, ವಿಜಯನಗರ ಪೊಲೀಸ್ ಠಾಣೆಯಲ್ಲಿ ಆತನ ಪತ್ನಿ ಎನ್ನಲಾದ ಸಂತ್ರಸ್ತೆ ನೀಡಿರುವ ದೂರಿನ ಮೇರೆಗೆ ದಾಖಲಾಗಿರುವ ಲೈಂಗಿಕ ದೌರ್ಜನ್ಯ, ಬಲವಂತ ವಿವಾಹ ಹಾಗೂ ಎಸ್‌ಸಿ–ಎಸ್‌ಟಿ ದೌರ್ಜನ್ಯ ಪ್ರಕರಣ ಕುರಿತಂತೆ ಮಾತ್ರ ಸ್ಯಾಂಟ್ರೋ ರವಿಯಿಂದ ಹೇಳಿಕೆ ದಾಖಲಿಸಿಕೊಂಡರು.

ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಎಂ. ಮುತ್ತುರಾಜ್, ಎಂ.ಎಸ್. ಗೀತಾ ಪ್ರಸನ್ನ, ಪ್ರಕರಣದ ತನಿಖಾಧಿಕಾರಿಯಾದ ಎನ್‌ಆರ್ ಉಪವಿಭಾಗದ ಎಸಿಪಿ ಎಂ. ಶಿವಶಂಕರ್ ಹಾಗೂ ಇತರ ಅಧಿಕಾರಿಗಳೊಂದಿಗೆ ಸ್ಯಾಂಟ್ರೋ ರವಿಯನ್ನು ವಿಚಾರಣೆ ನಡೆಸಿದ ಅಲೋಕ್‌ಕುಮಾರ್, ಠಾಣೆಯಿಂದ ಹೊರಬಂದ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು. ವಿಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳ ಬಗ್ಗೆ ಮಾತ್ರ ವಿಚಾರಣೆ ನಡೆಸಲಾಗುತ್ತಿದೆ. ಬೇರೆ ಯಾವುದೇ ವಿಚಾರಗಳ ಬಗ್ಗೆಯೂ ಆರೋಪಿಯನ್ನು ನಾವು ಪ್ರಶ್ನಿಸಿಲ್ಲ. ಪೊಲೀಸ್ ಕಸ್ಟಡಿಗೆ ಪಡೆದ ನಂತರವಷ್ಟೇ ಹೆಚ್ಚಿನ ವಿಚಾರಣೆ ನಡೆಸಲಾಗುವುದು ಎಂದು ಅವರು ತಿಳಿಸಿದರು. ಸ್ಯಾಂಟ್ರೋ ರವಿ ಮೈಸೂರಿನಿಂದ ತಲೆಮರೆಸಿಕೊಂಡು 11 ದಿನಗಳ ಕಾಲ ಎಲ್ಲೆಲ್ಲಿ ಓಡಾಡಿಕೊಂಡಿದ್ದ, ಆತನಿಗೆ ಯಾರ್‍ಯಾರು ಸಹಾಯ ಮಾಡಿದ್ದರು, ಆಶ್ರಯ ನೀಡಿದ್ದರು ಎಂಬುದರ ಬಗ್ಗೆ ಮಾಹಿತಿ ಪಡೆಯುತ್ತಿದ್ದೇವೆ. ಅದಕ್ಕೆಲ್ಲಾ ಆರೋಪಿ ಸ್ಪಂದಿಸುತ್ತಿದ್ದಾನೆ. ಆತ ಡಯಾಬಿಟಿಸ್‌ನಿಂದ ಬಳಲುತ್ತಿರುವುದರಿಂದ ಆಗಿಂದಾಗ್ಗೆ ಇನ್ಸುಲಿನ್ ಕೊಡುವಂತೆ ಸೂಚಿಸಿದ್ದೇನೆ ಎಂದ ಅಲೋಕ್‌ಕುಮಾರ್, ಆತನಿಗೆ ಡಯಾಬಿಟಿಸ್ ಬಿಟ್ಟರೆ ಬೇರೆ ಆರೋಗ್ಯ ಸಮಸ್ಯೆ ಇದ್ದಂತೆ ಕಾಣುತ್ತಿಲ್ಲ. ಆದರೂ ವೈದ್ಯಕೀಯ ಪರೀಕ್ಷೆ ಮಾಡಿಸುತ್ತೇವೆ ಎಂದರು. ಸ್ಯಾಂಟ್ರೋ ರವಿ ಸೇರಿ ನಾಲ್ವರನ್ನು ವಿಚಾರಣೆ ಮಾಡಲಾಗುತ್ತಿದೆ. ನ್ಯಾಯಾ ಧೀಶರ ಮುಂದೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆ, ಸ್ಥಳ ಮಹಜರು ಮತ್ತು ಕೆಲ ವಸ್ತುಗಳನ್ನು ವಶಪಡಿಸಿಕೊಳ್ಳಬೇಕಿರುವು ದರಿಂದ ಕನಿಷ್ಠ ಒಂದು ವಾರ ಪೊಲೀಸ್ ಕಸ್ಟಡಿಗೆ ಕೊಡುವಂತೆ ಅಲೋಕ್‌ಕುಮಾರ್ ತಿಳಿಸಿದರು. ಇಂದು ಬೆಳಗ್ಗೆ ಸ್ಯಾಂಟ್ರೋ ರವಿಗೆ ಉಪಹಾರವಾಗಿ ಇಡ್ಲಿ ಕೊಡಲಾಯಿತು. ಮಧ್ಯಾಹ್ನ ಮೊಸರನ್ನ ಸೇವಿಸಿ ದ್ದಾನೆ ಎನ್ನಲಾಗಿದೆ. ಪ್ರತೀ ಗಂಟೆಗೊಮ್ಮೆ ಇನ್ಸುಲಿನ್ ತೆಗೆದುಕೊಳ್ಳುತ್ತಿರುವ ಆತನಲ್ಲಿ ಬಂಧಿತನಾಗಿದ್ದೇನೆಂಬ ಭಯವಾಗಲೀ, ಆತಂಕವಾಗಲೀ ಕಾಣುತ್ತಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಸ್ಯಾಂಟ್ರೋ ರವಿ ನ್ಯಾಯಾಂಗ ಬಂಧನ

ಆದೇಶಿಸಿದರು. ಈ ವೇಳೆ ಹೆಚ್ಚಿನ ವಿಚಾರಣೆಗಾಗಿ ಆರೋಪಿಗಳನ್ನು ಪೊಲೀಸ್ ವಶಕ್ಕೆ ಒಪ್ಪಿಸುವಂತೆ ತನಿಖಾಧಿಕಾರಿ ಎಂ.ಶಿವಶಂಕರ್ ಮನವಿ ಮಾಡಿದರಾದರೂ, ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವಂತೆ ಸೂಚಿಸಿದ ನ್ಯಾಯಾಧೀಶರು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಆದೇಶಿಸಿದರು. ಗುಜರಾತಿನಿಂದ ಮೈಸೂರಿಗೆ ಕರೆತಂದ ಸ್ಯಾಂಟ್ರೋ ರವಿ ಸೇರಿದಂತೆ ಮೂವರು ಆರೋಪಿಗಳನ್ನು ನಂತರ ಸುದೀರ್ಘ ವಿಚಾರಣೆ ನಡೆಸಿದ ಪೊಲೀಸ್ ಅಧಿಕಾರಿಗಳು ಭಾರೀ ಪೊಲೀಸ್ ಬಂದೋಬಸ್ತ್‌ನಲ್ಲಿ ಮೂವರು ಆರೋಪಿಗಳನ್ನು 6.30ಕ್ಕೆ ನ್ಯಾಯಾಧೀಶರ ನಿವಾಸಕ್ಕೆ ಕರೆತಂದು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. 45 ನಿಮಿಷದ ನಂತರ ಸ್ಯಾಂಟ್ರೋ ರವಿ ಇದ್ದ ಪೊಲೀಸ್ ವಾಹನ ನೇರವಾಗಿ ಅಶೋಕ ರಸ್ತೆಯಲ್ಲಿರುವ ಕೇಂದ್ರ ಕಾರಾಗೃಹಕ್ಕೆ ತೆರಳಿತು. ರಾತ್ರಿ 7.40ರಲ್ಲಿ ಪೊಲೀಸರು ಕಾರಾಗೃಹಕ್ಕೆ ಆತನ ಒಪ್ಪಿಸಿದರು. ಸೋಮವಾರ(ಜ.16) ಪ್ರಕರಣದ ತನಿಖಾಧಿಕಾರಿಗಳು ಮೈಸೂರಿನ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಆರೋಪಿಗಳನ್ನು ವಶಕ್ಕೆ ಒಪ್ಪಿಸುವಂತೆ ಕೋರಿ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ನ್ಯಾಯಾಧೀಶರ ಮುಂದೆ ಹಾಜರುಪಡಿಸುವ ಮುನ್ನ ಆರೋಪಿಗಳನ್ನು ಕೆ.ಆರ್.ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೊಳಪಡಿಸಲಾಯಿತು. ಡಿಸಿಪಿ ಎಂ.ಮುತ್ತುರಾಜ್, ಎಸಿಪಿಗಳಾದ ಎಂ.ಶಿವಶಂಕರ್, ಸಿ.ಕೆ. ಅಶ್ವತ್ಥನಾರಾಯಣ, ಇನ್ಸ್‌ಪೆಕ್ಟರ್‌ಗಳಾದ ರವಿಶಂಕರ್, ಎ.ಮಲ್ಲೇಶ್, ರಾಜು, ಶೇಖರ್, ದಿವಾಕರ್ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಈ ಸಂದರ್ಭ ಹಾಜರಿದ್ದರು.



# ಸಂಕ್ರಾಂತಿ ಸಂಭ್ರಮ: ಮೈಸೂರಲ್ಲಿ ಎಳ್ಳು–ಬೆಲ್ಲ ಖರೀದಿ ಬಲು ಜೋರು





ಮೈಸೂರು, ಜ.14(ಆರ್‌ಕೆಬಿ)– ಹೊಸ ವರ್ಷದ ಮೊದಲ ಹಬ್ಬ ಸಂಕ್ರಾಂತಿ ಬಂದಿದೆ ಎಳ್ಳು–ಬೆಲ್ಲ, ಕೊಬ್ಬರಿ, ಕಬ್ಬು, ಹೂವು ಖರೀದಿಗಾಗಿ ಜನರು ಅಂಗಡಿಗಳಿಗೆ ಮುಗಿಬಿದ್ದಿದ್ದಾರೆ. ಹೀಗಾಗಿ ಹಬ್ಬದ ಹಿಂದಿನ ದಿನವಾದ ಶನಿವಾರ ಮೈಸೂರಿನ ಮಾರುಕಟ್ಟೆ ಪ್ರದೇಶಗಳಲ್ಲಿ ಜನಜಂಗುಳಿ ಜಾಸ್ತಿ ಇತ್ತು. ಅದರಲ್ಲೂ ಮಹಿಳೆಯರು ಗುಂಪುಗುಂಪಾಗಿ ಬಂದು ಖರೀದಿಯಲ್ಲಿ ತೊಡಗಿದ್ದರು.

ಮೈಸೂರಿನ ದೇವರಾಜ ಮಾರುಕಟ್ಟೆ ಮಂಡಿ ಮಾರುಕಟ್ಟೆ, ವಾಣಿ ವಿಲಾಸ ಮಾರುಕಟ್ಟೆ, ಚಿಕ್ಕ ಗಡಿಯಾರ ಸೇರಿದಂತೆ ಮೈಸೂರಿನ ಪ್ರಮುಖ ವೃತ್ತಗಳಲ್ಲಿ ಎಳ್ಳು–ಬೆಲ್ಲ, ಕಬ್ಬಿನ ಜಲ್ಲೆ ಹೂವು ಖರೀದಿ ಜೋರಾಗಿಯೇ ನಡೆಯಿತು.

ಮೈಸೂರಿನ ಅಗ್ರಹಾರ, ದೇವರಾಜ ಮಾರುಕಟ್ಟೆ, ಚಿಕ್ಕ ಗಡಿಯಾರ ಸುತ್ತಮುತ್ತ ತಳ್ಳು ಗಾಡಿಗಳಲ್ಲಿ ಎಳ್ಳು ಬೆಲ್ಲ, ಕಬ್ಬಿನ ಜಲ್ಲೆ ಮಾರಾಟ ನಡೆದಿದ್ದರೆ, ಚಿಕ್ಕ ಗಡಿಯಾರ ವೃತ್ತದಲ್ಲಿ ಭಾರೀ ಜನಜಂಗುಳಿ ಕಂಡು ಬಂದಿತು.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಎಳ್ಳು–ಬೆಲ್ಲ, ಕೊಬ್ಬರಿ ಬೆಲೆ ಸ್ವಲ್ಪ ಜಾಸ್ತಿಯೇ ಇತ್ತು. ಹಬ್ಬಕ್ಕೆ ಬೇಕಾದ ಸಣ್ಣದಾಗಿ ಕತ್ತರಿಸಿದ ಕೊಬ್ಬರಿ, ಕಡಲೆಕಾಯಿ ಬೀಜ, ಕಡಲೆ ಸಹಿತ ಮಿಕ್ಸ್ ಮಾಡಿದ ಎಳ್ಳು–ಬೆಲ್ಲದ ಬೆಲೆ ಕಾಲು ಕೆಜಿ ಪ್ಯಾಕೆಟ್‌ಗೆ 30 ರೂ.ನಿಂದ 40 ರೂ, ಅರ್ಧ ಕೆಜಿ ಪ್ಯಾಕೆಟ್‌ಗೆ 60ರಿಂದ 70, ಕೆಜಿಗೆ120ರಿಂದ150 ರೂ.ಗಳಿಗೆ ಮಾರಾಟವಾಯಿತು.

ಸಣ್ಣದಾಗಿ ಕತ್ತರಿಸಿದ ಕೊಬ್ಬರಿ ಬೆಲೆ ಕೆಜಿಗೆ ರೂ. 400, ಬಿಳಿ ಎಳ್ಳು– ಕೆಜಿಗೆ ರೂ. 200, ಕಡಲೆ ಬೀಜ ಉತ್ತಮವಾದದ್ದು ರೂ.160, ಹುರಿಗಡಲೆ ಉತ್ತಮವಾದದ್ದು 100ರಿಂದ 120, ಸಕ್ಕರೆ ಅಚ್ಚು ಕೆಜಿಗೆ 130ರಿಂದ 150, ಕಬ್ಬಿನ ಜಲ್ಲೆ ಜೋಡಿಗೆ 30ರಿಂದ 60, ವಿವಿಧ ಸೊಪ್ಪುಗಳು– ಪ್ರತಿ ಕಟ್ಟಿಗೆ 5ರಿಂದ 10 ರೂ. ಅವರೇಕಾಯಿ– ಕೆಜಿಗೆ 50ರಿಂದ 60 ರೂ.ಗಳಿಗೆ ಮಾರಾಟವಾಯಿತು.

ಸೀರೆ, ಕುರ್ತಾ, ವಿವಿಧ ಡ್ರೆಸ್‌ಗಳ ಮಾರಾಟದ ಅಂಗಡಿಗಳಿಗೂ ಮಹಿಳೆಯರು ಲಗ್ಗೆ ಇಟ್ಟಿದ್ದು ಬಟ್ಟೆ ಅಂಗಡಿಗಳಿಗೆ ಉತ್ತಮ ವ್ಯಾಪಾರವೂ ನಡೆಯಿತು. ಒಟ್ಟಾರೆ, ಮಹಿಳೆಯರ ಪ್ರಮುಖ ಹಬ್ಬಗಳಲ್ಲಿ ಒಂದಾದ ಸಂಕ್ರಾಂತಿ ಈ ಬಾರಿ ಹೆಚ್ಚು ಸಂಭ್ರಮದಿಂದ ಆಚರಿಸಲಾಗುತ್ತಿದೆ.

# ಸ್ಯಾಂಟ್ರೋ ರವಿ ಬಂಧನ: ನಿಮಿಷಾಂಬೆಗೆ ಹರಕೆ ತೀರಿಸಿದ ಎಡಿಜಿಪಿ ಅಲೋಕ್‌ಕುಮಾರ್



ಶ್ರೀರಂಗಪಟ್ಟಣ, ಜ.14– ಸ್ಯಾಂಟ್ರೋ ರವಿ ಬಂಧನದ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಎಡಿಜಿಪಿ ಅಲೋಕ್‌ಕುಮಾರ್, ಶ್ರೀರಂಗಪಟ್ಟಣದ ಗಂಜಾಂನಲ್ಲಿರುವ ಪ್ರಸಿದ್ಧ ನಿಮಿಷಾಂಬ ದೇವಾಲಯದಲ್ಲಿ ಹರಕೆ ತೀರಿಸಿದ್ದಾರೆ. ಕಳೆದ 4 ದಿನಗಳ ಹಿಂದೆ ಮೈಸೂರಿಗೆ ಹೋಗುವ ಮಾರ್ಗ ಮಧ್ಯೆ ದೇವಸ್ಥಾನಕ್ಕೆ ಆಗಮಿಸಿದ್ದ ಅಲೋಕ್ ಕುಮಾರ್, ನಿಮಿಷಾಂಬ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ್ದರು. ಅಲ್ಲದೇ ಸ್ಯಾಂಟ್ರೋ ರವಿ ಬಂಧನವಾದರೆ ಮತ್ತೆ ಬಂದು ದರ್ಶನ ಮಾಡುವುದಾಗಿ ಹರಕೆ ಹೊತ್ತಿದ್ದರು. ಇದರ ಬೆನ್ನಲ್ಲೇ ಪೊಲೀಸರು ಸ್ಯಾಂಟ್ರೋ ರವಿಯನ್ನು ಗುಜರಾತ್‌ನಲ್ಲಿ ಬಂಧಿಸಿ, ಕರೆ ತಂದು ವಿಚಾರಣೆಗೆ ಒಳಪಡಿಸಿದ್ದಾರೆ.

**ದೇವರು ಮತ್ತು ಕೆಲಸದ ಮೇಲೆ ನಂಬಿಕೆ:** ದೇವರ ದರ್ಶನದ ಬಳಿಕ ಮಾತನಾಡಿದ ಎಡಿಜಿಪಿ ಅಲೋಕ್ ಕುಮಾರ್, ಕಳೆದ 12 ವರ್ಷಗಳಿಂದ ನಾನು ಈ ದೇವಾಲಯಕ್ಕೆ ಆಗಮಿಸುತ್ತಿದ್ದು, ನಾನು ಮಾಡುವ ಕೆಲಸ ಹಾಗೂ ದೇವಿ ಮೇಲೆ ನನಗೆ ನಂಬಿಕೆ ಇದೆ. 2011ರಲ್ಲಿ ಮೈಸೂರಿನಲ್ಲಿ ಡಬಲ್ ಮರ್ಡರ್ ಕೇಸ್ ಆಗಿತ್ತು. ಆಗಲೂ ಬಂದು ನಾನು ದೇವಿಗೆ ಹರಕೆ ಹೊತ್ತಿದ್ದೆ. ಹಾಗೆ ಹರಕೆ ಹೊತ್ತು ಪೂಜೆ ಸಲ್ಲಿಸಿ ನಾವು ಮೈಸೂರಿಗೆ ಹೋಗುವುದರೊಳಗಾಗಿ ಅಂದರೆ 5 ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿತ್ತು ಈಗಲೂ ಹತ್ತನೇ ತಾರೀಕಿನಂದು ನಾನು ಇಲ್ಲಿಗೆ ಬಂದು ಪೂಜೆ ಸಲ್ಲಿಸಿ ಸ್ಯಾಂಟ್ರೋ ರವಿ ಬಂಧನ ವಿಷಯದಲ್ಲಿ ಹರಕೆ ಹೊತ್ತಿದ್ದೆ. ಹರಕೆ ಹೊತ್ತ 22 ಗಂಟೆಗಳಲ್ಲೇ ಆರೋಪಿ ಸಿಕ್ಕಿದ್ದಾನೆ. ಹಾಗಾಗಿ ದೇವಿಗೆ ಪೂಜೆ ಸಲ್ಲಿಸಿ ಹರಕೆ ತೀರಿಸಿದ್ದೇನೆ. ದೇವಿ ಮೇಲೆ ಅಪಾರ ನಂಬಿಕೆ ಇದೆ ಎಂದರು.

ಆತನಿಂದಾಗಿ ಸರ್ಕಾರಕ್ಕೆ, ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ಬರುತ್ತಿತ್ತು. ಹಾಗಾಗಿ ಆತ ನಮಗೆ ಬೇಗ ಸಿಗಲಿ ಎಂದು ಹರಕೆ ಹೊತ್ತಿದ್ದೆ. ಆತ ಈಗ ನಮ್ಮ ಕಸ್ಟಡಿಯಲ್ಲಿದ್ದಾನೆ. ಆತನ ಹೇಳಿಕೆ ದಾಖಲಿಸಲಾಗುತ್ತಿದೆ. ಮೊದಲು ಆತನ ವಿರುದ್ಧ ದಾಖಲಾಗಿರುವ ಕೇಸ್ ಬಗೆಗೆ ವಿಚಾರಣೆ ನಡೆಯುತ್ತದೆ. ನಂತರ ಆತ ತಲೆಮರೆಸಿಕೊಂಡು ಎಲ್ಲೆಲ್ಲಿ ಇದ್ದ ಆತನಿಗೆ ಯಾರೆಲ್ಲಾ ಸಹಾಯ ಮಾಡಿದರು ಎಂಬ ಬಗೆಗೆ ವಿಚಾರಣೆ ಮಾಡುತ್ತೇವೆ ಹಾಗೊಂದು ವೇಳೆ ಯಾರಾದರೂ ಸಹಾಯ ಮಾಡಿದ್ದರೆ ಅವರ ಮೇಲೂ ಕ್ರಮ ಕೈಗೊಳ್ಳುತ್ತೇವೆ ಎಂದರು. ಇದೇ ವೇಳೆ ದೇವಾಲಯದ ಅರ್ಚಕ ಸೂರ್ಯನಾರಾಯಣ ಭಟ್ ನೇತೃತ್ವದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಎಡಿಜಿಪಿ ಅಲೋಕ್ ಕುಮಾರ್ ಅವರೊಂದಿಗೆ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರು ವಿಜಯನಗರ ಪೊಲೀಸ್ ಠಾಣೆಯಿಂದ ನ್ಯಾಯಾಧೀಶರ ಮುಂದೆ ಹಾಜರುಪಡಿಸಲು ಶನಿವಾರ ಸ್ಯಾಂಟ್ರೋ ರವಿಯನ್ನು ಪೊಲೀಸರು ಕರೆದೊಯ್ಯುತ್ತಿರುವುದು.

## ಮೊಬೈಲ್, ಲ್ಯಾಪ್‌ಟಾಪ್ ಬಗ್ಗೆ ಸುಳಿವು ಬಿಟ್ಟುಕೊಡದ ಸ್ಯಾಂಟ್ರೋ ರವಿ

ಮೈಸೂರು, ಜ.14(ಆರ್‌ಕೆ)–ವಿಚಾರಣೆ ವೇಳೆ ತನ್ನ ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್ ಎಲ್ಲಿವೆ ಎಂಬುದರ ಬಗ್ಗೆ ಸ್ಯಾಂಟ್ರೋ ರವಿ ಸುಳಿವು ನೀಡಿಲ್ಲ. ಇಂದು ಬೆಳಗ್ಗೆಯಿಂದ ಸಂಜೆವರೆಗೂ ಎಡಿಜಿಪಿ ಅಲೋಕ್‌ಕುಮಾರ್, ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿ ಎಂ.ಮುತ್ತುರಾಜ್, ಎಸಿಪಿ ಎಂ.ಶಿವಶಂಕರ್ ಅವರು ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕವಾಗಿ ವಿಚಾರಣೆ ನಡೆಸಿ, ಆತ ಬಳಸುತ್ತಿದ್ದ ಮೊಬೈಲ್‌ಗಳು ಹಾಗೂ ಹಲವು ಮಹತ್ವದ ಫೋಟೋ, ವೀಡಿಯೋ



ಹಾಗೂ ಆಡಿಯೋ ರೆಕಾರ್ಡ್‌ಗಳು, ಇನ್ನಿತರೆ ದಾಖಲೆಗಳು ಇದ್ದವು ಎನ್ನಲಾದ ಲ್ಯಾಪ್‌ಟಾಪ್ ಬಗ್ಗೆ ಸ್ಯಾಂಟ್ರೋ ರವಿ ಬಾಯಿ ಬಿಡಲಿಲ್ಲ ಎಂದು ಮೂಲಗಳು ತಿಳಿಸಿವೆ.

ಹೇಗೆ ಪ್ರಶ್ನೆ ಕೇಳಿದರೂ, 'ನನಗೆ ಅನಾರೋಗ್ಯದಿಂದ ಜ್ಞಾಪಕ ಇಲ್ಲ. ಮೊಬೈಲ್ ಮತ್ತು ಲ್ಯಾಪ್‌ಟಾಪ್ ಎಲ್ಲಿಟ್ಟಿದ್ದೇನೆ, ಏನಾದವು ಎಂಬುದು ನೆನಪಿಗೆ ಬರುತ್ತಿಲ್ಲ' ಎಂದು ಆತ ವಿಚಾರಣೆ ವೇಳೆ ಹೇಳಿಕೆ ನೀಡಿ ಪೊಲೀಸರನ್ನು ಯಾಮಾರಿಸಲೆತ್ನಿಸಿದ್ದಾನೆ ಎಂದು ಮೂಲಗಳು ತಿಳಿಸಿವೆ. ಸಂತ್ರಸ್ತೆ ನೀಡಿದ ದೂರಿನ ಅಂಶಗಳ ಬಗ್ಗೆ ಸುದೀರ್ಘ ವಿಚಾರಣೆ ನಡೆಸಿದಾಗ ಸುಮಾರು ಎರಡು ವರ್ಷಗಳಿಂದ ನಡೆದ ಘಟನಾವಳಿಗಳನ್ನೆಲ್ಲಾ ವಿವರಿಸಿರುವ ಆತ, ಪ್ರಕರಣಕ್ಕೆ ಪುಷ್ಠಿ ನೀಡಬಹುದಾದ ಕೆಲ ತಾಂತ್ರಿಕ ಸಾಕ್ಷ್ಯಾಧಾರಗಳ ವಿಷಯದಲ್ಲಿ ಬಹಳ ಚಾಲಾಕಿ ಉತ್ತರ ನೀಡಿದ್ದಾನೆ ಎಂದು ಹೇಳಲಾಗುತ್ತಿದೆ.

## ಬಂಧನದ ನಂತರ ಷುಗರ್ ಲೆವೆಲ್ ಏರಿಕೆ: ಸ್ಯಾಂಟ್ರೋ ರವಿಗೆ ಗಂಟೆಗೊಮ್ಮೆ ಇನ್ಸುಲಿನ್

ಮೈಸೂರು, ಜ.14(ಆರ್‌ಕೆ)–ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದರೂ ಬಿಂದಾಸ್ ಆಗಿ ಓಡಾಡಿಕೊಂಡಿದ್ದ ವೇಶ್ಯಾವಾಟಿಕೆ ದಂಧೆಯ ಕಿಂಗ್‌ಪಿನ್ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ, ಪೊಲೀಸರಿಗೆ ಸಿಕ್ಕಿಬಿದ್ದ ನಂತರ ಅವನ ಷುಗರ್ ಲೆವೆಲ್‌ನಲ್ಲಿ ಭಾರೀ ಏರಿಕೆಯಾಗಿದೆ ಎಂದು ತಿಳಿದು ಬಂದಿದೆ.

ಶುಕ್ರವಾರ ಬೆಳಗ್ಗೆ ಗುಜರಾತ್‌ನಲ್ಲಿ ಬಂಧನವಾಗುತ್ತಿದ್ದಂತೆಯೇ ತೀವ್ರ ಬೆವರಿ, ಬಾಯಾರಿಕೆಯಾಗುತ್ತಿದೆ ಎಂದು ಪರಿತಪಿಸುತ್ತಿದ್ದ ಆತನಿಗೆ ನೀರು ಕುಡಿಸಿದ ಬಳಿಕ ಅಲ್ಲಿಯ ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ಮಾಡಿಸಿದಾಗ ಷುಗರ್ ಲೆವೆಲ್ ಏರಿಕೆಯಾಗಿರುವುದು ತಿಳಿಯಿತು. ದಿನಕ್ಕೆ 3 ಬಾರಿ ಇನ್ಸುಲಿನ್ ತೆಗೆದುಕೊಳ್ಳುತ್ತಿದ್ದ ಸ್ಯಾಂಟ್ರೋ ರವಿಗೆ ಈಗ ಪ್ರತೀ ಗಂಟೆಗೊಮ್ಮೆ ಇನ್ಸುಲಿನ್ ಅಗತ್ಯವಿದೆ ಎಂದು ವೈದ್ಯರು ಸಲಹೆ ನೀಡಿದ್ದರು ಎಂದು ತನಿಖಾ ತಂಡದಲ್ಲಿದ್ದ ಪೊಲೀಸ್ ಅಧಿಕಾರಿ ಮೂಲಗಳು ತಿಳಿಸಿವೆ.

ಅದೇ ರೀತಿ ಅವನಿಗೆ ವೈದ್ಯರು ಯಾವ ಆಹಾರವನ್ನು ನೀಡಬೇಕೆಂದು ಹೇಳಿರುವಂತೆಯೇ ಪೊಲೀಸರು ಆರೋಪಿಗೆ ತಿಂಡಿ–ಊಟ–ಉಪಹಾರ ನೀಡುತ್ತಿದ್ದಾರೆ. ಇನ್ಸುಲಿನ್ ತರಿಸಿ ಗಂಟೆಗೊಮ್ಮೆ ಕೊಡಿಸುತ್ತಿದ್ದಾರೆ ಎನ್ನಲಾಗಿದೆ. ಈ ನಡುವೆ ಆತನ ರಕ್ತದೊತ್ತಡದಲ್ಲೂ ಏರುಪೇರಾಗಿದ್ದು, ಆತ ತೆಗೆದುಕೊಳ್ಳುತ್ತಿದ್ದ ಮಾತ್ರೆಯನ್ನೇ ಕೊಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ವಿಜಯನಗರದಲ್ಲಿ ಬೇರೆ ಬೇರೆ ಕೊಠಡಿಗಳಲ್ಲಿರಿಸಿ ಆರೋಪಿಗಳನ್ನು ವಿಚಾರಣೆ ನಡೆಸಿದ ಪೊಲೀಸರು ಹೇಳಿಕೆಗಳನ್ನು ದಾಖಲಿಸಿಕೊಳ್ಳುತ್ತಿದ್ದಾರೆ. ಇಂದು ಬೆಳಗ್ಗೆಯಿಂದಲೇ ಠಾಣೆ ಮುಂದೆ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಬೇರೆ ಯಾರೂ ಅತ್ತ ಸುಳಿಯದಂತೆ ಕಟ್ಟೆಚ್ಚರ ವಹಿಸಲಾಗಿದೆ. ಸ್ಯಾಂಟ್ರೋ ರವಿಯನ್ನು ಕರೆತರಲಾಗಿದೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಸಾರ್ವಜನಿಕರು ವಿಜಯನಗರ ಠಾಣೆ ಬಳಿ ಜಮಾಯಿಸತೊಡಗಿದಾಗ ಪೊಲೀಸರು ಯಾರೂ ಠಾಣೆ ಬಳಿ ಬರದಂತೆ ತಿಳಿಹೇಳಿ ಕಳುಹಿಸುತ್ತಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

15.1.2023 ಭಾನುವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಚಿತ್ತ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜೆ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಕಲಾಸುರುಚಿ :** ರವಿ ಕಾಣದ್ದನ್ನು ಕವಿ ಕಂಡ ಕನ್ನಡ ಕವಿತೆಗಳ ಓದು – ಯತೀಶ್ ಎನ್. ಕೊಳ್ಳೇಗಾಲ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಓಕಿನವ ಶೋರಿನ್ ರಿಯೋ ಕರಾಟೆ ಡು ಆಫ್ ಇಂಡಿಯಾ :** 29ನೇ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್‌ಶಿಪ್, ಉದ್ಘಾಟನೆ : ಮೇಯರ್ ಶಿವಕುಮಾರ್, ಮುಖ್ಯ ಅತಿಥಿಗಳು : ರೆ. ಫಾ. ವಿಜಯ್‌ಕುಮಾರ್, ಮೈಸೂರು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಪಿ. ಕೃಷ್ಣಯ್ಯ, ಕರ್ನಾಟಕ ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ, ಡಾ. ಎಂ. ಪುಟ್ಟಸ್ವಾಮಿ, ಗೌರವ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಕೆ. ದೀಪಕ್, ಮಧು ವಿಶ್ವನಾಥ್, ಸುರೇಶ್ ಕೆನಿಚಿರಾ, ಎನ್. ಶಂಕರ, ಸೋಸಲೆ ಸಿದ್ದರಾಜು, ಸ್ಥಳ: ಯೂನಿವರ್ಸಿಟಿ ಜಿಮ್ನಾಸಿಯಂ ಹಾಲ್, ಬೆಳಗ್ಗೆ 11ಕ್ಕೆ.

■ **ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು, ಹೆಚ್.ವಿ. ರಾಜೀವ್ ಸ್ನೇಹ ಬಳಗ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಶ್ರೀ ಸಿದ್ದೇಶ್ವರ ಸ್ವಾಮಿಗಳವರ ಭಕ್ತ ವೃಂದ :** ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳವರ ನುಡಿ ನಮನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಶ್ರೀ ಜ್ಞಾನಯೋಗಾಶ್ರಮದ ಅಧ್ಯಕ್ಷ ಶ್ರೀ ಬಸವಲಿಂಗ ಸ್ವಾಮಿಗಳು, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ನುಡಿ ನಮನ : ಶ್ರೀ ಮಲ್ಲಯ್ಯ ಸ್ವಾಮಿಗಳು, ಸಾಹಿತಿ ಕೆ.ಸಿ. ಶಿವಪ್ಪ, ಸಿ.ಪಿ. ರಾಮಶೇಷ್, ಸ್ಥಳ: ಸುವರ್ಣ ಮಹೋತ್ಸವ ಭವನ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** ಸಂಕ್ರಾಂತಿ ಹಬ್ಬದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಸಂಘದ ಆವರಣ, ಕುವೆಂಪುನಗರ, ಸಂಜೆ 4 ರಿಂದ.

■ **ಜನ ಚೈತನ್ಯ ಫೌಂಡೇಷನ್ :** ಸಂಕ್ರಾಂತಿ ಸಂಗೀತ ಸಂಭ್ರಮ, ಅಧ್ಯಕ್ಷತೆ : ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಿ. ಜಯರಾಂ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಎಸ್. ಆನಂದ, ಎಂ.ಜೆ. ಬಾಲಕೃಷ್ಣ, ಕೆ. ಪುಟ್ಟಮಾದು, ಎಂ. ಪುಟ್ಟಸ್ವಾಮಿ, ರುದ್ರಮೂರ್ತಿ, ಪ್ರಾಸ್ತಾವಿಕ ನುಡಿ : ವಕೀಲ ಆರ್. ಲಕ್ಷ್ಮಣ್, ಪಕ್ಕವಾದ್ಯದಲ್ಲ ಎನ್. ಲೋಕೇಶ್–ಕೀಬೋರ್ಡ್, ಶಿವಪ್ಪ (ಅಂಧ ಕಲಾವಿದರು)–ತಬಲ, ಪಿ. ಗುರುಸ್ವಾಮಿ –ಡೊಲಾಕ್, ಗಾಯಕರು : ರಾಮಣ್ಣ, ಶ್ರೀಮತಿ ಶಾಂತಮ್ಮ, ಲಕ್ಷ್ಮಣ, ಎನ್. ಲೋಕೇಶ್, ಮಹದೇವ್, ಎಂ. ಪುಟ್ಟಸ್ವಾಮಿ, ಎನ್. ಬಸವರಾಜು, ಆರ್.ದಾಸು, ವೆಂಕಟೇಶ್ ಶಾದನಹಳ್ಳಿ, ಸ್ಥಳ: ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ವೀವರ್ಸ್ ಕಾಲೋನಿ, ವಿಶ್ವೇಶ್ವರನಗರ 2ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6 ಗಂಟೆಗೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಪರೂರು ಪರಂಪರೆ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಆರ್.ಕೆ. ಪದ್ಮನಾಭ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಸಿ.ಎನ್. ಚಂದ್ರಶೇಖರ್–ಪಿಟೀಲು, ವಿದ್ವಾನ್ ಸಿ. ಚೆಲುವರಾಜು–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟಂ, ಸ್ಥಳ: ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್ ಅವರ ಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ನಟನ ವಾರಾಂತ್ಯ ರಂಗಶಾಲೆಯ ಮಕ್ಕಳಿಂದ ಶ್ರೀಮತಿ ವೈದೇಹಿ ಅವರ 'ನಾಯಿ ಮರಿ' ನಾಟಕ ಪ್ರದರ್ಶನ, ನಿರ್ದೇಶನ : ಹರಿಸಿಂಗ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

**ಮಹದೇಶ್ವರ ಯಾತ್ರಿ ಭವನ, ನಂಜನಗೂಡು**

■ **ಎಸ್.ಡಿ.ಆರ್. ಪ್ರೊಡಕ್ಷನ್ :** ಬರಿ 10 ಪರ್ಸೆಂಟ್ ಬಡ್ಡಿ ಚಲನಚಿತ್ರದ ಗೀತೆ ಬಿಡುಗಡೆ ಸಮಾರಂಭ ಉದ್ಘಾಟನೆ : ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್, ಅಧ್ಯಕ್ಷತೆ : ಶಾಸಕ ಯತೀಂದ್ರ ಸಿದ್ದರಾಮಯ್ಯ, ಚಿತ್ರದ ಹಾಡು ಬಿಡುಗಡೆ : ಶಾಸಕ ಅನಿಲ್ ಚಿಕ್ಕಮಾದು, ಮುಖ್ಯ ಅತಿಥಿಗಳು : ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ಬಿ.ಎಂ. ನಾಗೇಶ್‌ರಾಜ್, ಇಂಧನ್ ಬಾಬು, ಮಧ್ಯಾಹ್ನ 12ಕ್ಕೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ– ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ– ಸದಾಶಿವ ಪಾಟೀಲ್, ಜಿ. ಪುಷ್ಪಲತಾ, ವ್ಯಾಖ್ಯಾನ– ಡಾ. ಪ್ರದೀಪ್ ಕುಮಾರ್ ಹೆಬ್ರಿ, 7.25 ಭಾವಗೀತೆ, 8.30 ಸಂಕ್ರಾಂತಿಯ ಸಂದರ್ಭದಲ್ಲಿ ವಿಶೇಷ ರೂಪಕ, ಪ್ರಸ್ತುತಿ–ಮೈಸೂರಿನ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್‌ನ ಶ್ರೀದೇವಿ ನಚಿಕೇತ್ ಮತ್ತು ಸಂಗಡಿಗರು, 9.40 ನಮ್ಮ ಆರೋಗ್ಯ–ಉಪಶಮನ ಆರೈಕೆ ಅಂದರೆ ಪ್ಯಾಲಿಯೇಟಿವ್ ಕೇರ್ ಕುರಿತು ಡಾ. ವಿದ್ಯಾ ಎನ್. ಅವರೊಂದಿಗೆ ಮಾತುಕತೆ, 10.00ಕೇಳಿಗಿಳಿಗಳೇ–ಕೆ.ಎಂ.ಸಿ. ಇನ್ನೋವೇಟೀವ್ ಗ್ಲೋಬಲ್ ಶಾಲೆಯ ಪುಟಾಣಿಗಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ–ಡಾ. ಆರ್.ಎನ್. ಶ್ರೀಲತಾ, ಎಸ್. ಶಂಕರ್, 12.45 ಜನಪದ ಸಂಗೀತ–ಮಹದೇವಯ್ಯ ಮತ್ತು ತಂಡ, 1.20 ಸಂಕ್ರಾಂತಿ ಗೀತೆಗಳು, 3.00 ಸ್ವರಾಜ್–ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಚಕ್ರೇಶ್ವರ ಪರೀಕ್ಷಿತದ ಕಲಿ ಪ್ರವೇಶ, ಪ್ರಸ್ತುತಿ– ಉಡುಪಿ ಯಕ್ಷ ಸಂಗೀತ–ನಾದ ವೈಭವಂನ ಸದಸ್ಯರು, 6.50 ಕೃಷಿರಂಗ–ರೂಪಕ "ಸಂಭ್ರಮ ಸಂಕ್ರಾಂತಿ", 8.00 ಯುವವಾಣಿ–ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ ಮಾಲಿಕೆಯಲ್ಲಿ ಸಸ್ಯಾಹಾರದ ಪ್ರತಿಪಾದಕ ಉದ್ಯಮಿ ವಿಶ್ವ ಪ್ರಸಾದ್ ಆಳ್ವ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 9.15 ರಂಗಗೀತೆಗಳು– ಸದಾರಮೆ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ರಾಜೇಶ್ವರಿ ಪಾಠಕ್–ಲಘು ಶಾಸ್ತ್ರೀಯ ಸಂಗೀತ

# ಮೈಸೂರಿನ ಉದ್ಯಾನಗಳಲ್ಲಿ ಪುಂಡರ ಹಾವಳಿ

**● ಮಹಿಳೆಯರು, ಮಕ್ಕಳು ವಾಯುವಿಹಾರಕ್ಕೆ ಹೋಗುವುದೇ ಅಪಾಯ**
**● ಪೊಲೀಸ್ ಆಯುಕ್ತರಿಗೆ ನಾಗರಿಕ ಹಿತರಕ್ಷಣಾ ಸಮಿತಿ ಮನವಿ**



ಮೈಸೂರು, ಜ.14(ಎಸ್‌ಬಿಡಿ)– ಮೈಸೂರಿನ ಉದ್ಯಾನಗಳಲ್ಲಿ ಪುಂಡರ ಉಪಟಳವನ್ನು ಹತ್ತಿಕ್ಕುವಂತೆ ಕನ್ನಡ ಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ನಗರ ಪೊಲೀಸ್ ಆಯುಕ್ತರ ಕಚೇರಿಗೆ ಮನವಿ ಸಲ್ಲಿಸಲಾಗಿದೆ

ಆಕಾಶವಾಣಿ ಎದುರಿನ ಚೆಲುವಾಂಬ ಪಾರ್ಕ್, ಕಾಮಾಕ್ಷಿ ಆಸ್ಪತ್ರೆ ಸಮೀಪ, ಒಂಟಿಕೊಪ್ಪಲು ಶ್ರೀ ವೆಂಕಟರಮಣಸ್ವಾಮಿ ದೇವಾಲಯ ಹಿಂಭಾಗದ ಪಾರ್ಕ್, ಎನ್.ಆರ್.ಮೊಹಲ್ಲಾ, ಉದಯಗಿರಿ ಸೇರಿದಂತೆ ಹಲವು ಬಡಾವಣೆಗಳ ಉದ್ಯಾನಗಳಲ್ಲಿ ಹಗಲಲ್ಲೂ ಕುಡುಕರು, ಗಾಂಜಾ ಸೇವಿಸುವವರು, ಪುಂಡಪೋಕರಿಗಳ ಉಪಟಳ ವಿಪರೀತವಾಗಿದೆ ಎಂದು ವೇದಿಕೆ ಪದಾಧಿಕಾರಿಗಳು ದೂರಿದ್ದಾರೆ.

ಪರಿಣಾಮ ಮಹಿಳೆಯರು, ಮಕ್ಕಳು ವಾಯು ವಿಹಾರಕ್ಕೂ ಭಯಪಡುವಂತಾಗಿದೆ. ಮಹಿಳೆಯರು, ಯುವತಿಯರನ್ನು ಅವಾಚ್ಯ ಶಬ್ದಗಳಿಂದ ರೇಗಿಸುವುದು, ಯುವಕ–ಯುವತಿ ಕುಳಿತಿದ್ದರೆ ಅವರನ್ನು ಬೆದರಿಸಿ ಹಣ ವಸೂಲಿ ಮಾಡುವ ದುಷ್ಕೃತ್ಯ ನಡೆಸುತ್ತಿದ್ದಾರೆ. ಈ ಬಗ್ಗೆ ಪ್ರಶ್ನಿಸಿದವರಿಗೂ ಧಮ್ಕಿ ಹಾಕುತ್ತಾರೆ. ಆ ಭಾಗದಲ್ಲಿ ಪೊಲೀಸ್ ವಾಹನ ಗಸ್ತಿನಲ್ಲಿರುವಾಗ ಮಾತ್ರ ಸುಮ್ಮನಿದ್ದು, ಪೊಲೀಸರು ತೆರಳಿದ ಬಳಿಕ ಮತ್ತೆ ಅದೇ ಚಾಳಿ ಮುಂದುವರೆಸುತ್ತಾರೆ. ಇಂತಹ ಕಿಡಿಗೇಡಿಗಳಿಂದ ಹಲವರು ನೊಂದಿದ್ದರೂ ಭಯದಿಂದ ಪೊಲೀಸರಿಗೆ ದೂರು ನೀಡಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿ ಉದ್ಯಾನಗಳಲ್ಲಿ ಸುರಕ್ಷತೆ ವಾತಾವರಣ ನಿರ್ಮಾಣಕ್ಕೆ ನೆರವಾಗಬೇಕೆಂದು ಮನವಿ ಮಾಡಿದ್ದಾರೆ.

**ಮಂಗಳಮುಖಿಯರ ಹಾವಳಿ:** ಹಾಗೆಂಯೇ ಸಿಗ್ನಲ್‌ಗಳಲ್ಲಿ ಕೆಲ ಮಂಗಳಮುಖಿಯರು ವಾಹನ ಸವಾರರಿಗೆ ತೊಂದರೆ ಕೊಡುವುದನ್ನು ಗಮನಿಸಿದ್ದೇವೆ. ಸಿಗ್ನಲ್‌ನಲ್ಲಿ ನಿಂತಿರುವ ದ್ವಿಚಕ್ರ ಹಾಗೂ ಕಾರು ಪ್ರಯಾಣಿಕರ ಬಳಿ ಹೋಗಿ ಹಣ ಕೇಳುತ್ತಾರೆ. ಇಲ್ಲ ಎಂದರೆ ಕೆಲವರು ಕೆಟ್ಟ ಪದಗಳಿಂದ ನಿಂದಿಸುತ್ತಾರೆ. ವಾಹನಗಳ ನಡುವೆ ನುಸುಳುವುದು ಅವರಿಗೂ ಅಪಾಯ. ಸಿಗ್ನಲ್ ಸಿಕ್ಕಾಗ ವಾಹನಗಳು ವೇಗವಾಗಿ ಸಂಚರಿಸುತ್ತವೆ. ಆ ಸಂದರ್ಭದಲ್ಲಿ ಅಪಘಾತವಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಸಿಗ್ನಲ್‌ಗಳ ಬಳಿ ಹಣ ಬೇಡದಂತೆ ಅವರಿಗೆ ತಿಳಿಹೇಳಬೇಕೆಂದು ಕೋರಿದ್ದಾರೆ.








IN THE COURT OF THE CIVIL JUDGE AND JMFC AT KUSHALNAGARA
CRMC : 82/2022
Petitioner : Jayamma
V/s
Respondent : Thashildar & others

**COURT NOTICE**

The Petitioner in the above case Jayamma W/o Late Rakesh, Age 37 years R/a Kudluru Village, Kushalnagara, Kodagu District. Has filed a petition against Respondents namely Birth and Death Registrar Tahashildar of Somwarpet and others for seeking a death certificate of Grand Father of my Husband Mr. Doddegowda who has died on 01-01-1975 at Kudluru Village, Kushalnagara, Kodagu District.

Hence anyone who is having objection for issuance of Death certificate of Mr. Doddegowda is hereby called upon to appear in person or through a pleader in CRMC No. 82/2021 before the civil judge and JMFC Court at Kushalnagara Kodagu District on dated 10.02.2023 at 11 am without of failing which the above case shall be decided accordingly.

By the order of the Court
Sd/- Chief Ministrial Officer
Civil Judge and JMFC Court,
Kushalnagar

Advocate for Petitioner
Kushalnagara
Date: 02-01-2023



ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
15-1-2023



# ಸಂಭ್ರಮದ ಸಂಕ್ರಾಂತಿ



ಸಂಕ್ರಾಂತಿ ಕಾಲದಲ್ಲಿ ಸ್ನಾನ, ದಾನ, ತಪಸ್ಸು, ಹೋಮ, ಪಿತೃತರ್ಪಣ, ದೇವತಾಪೂಜೆ ಇವುಗಳನ್ನು ಆಚರಿಸಿದಲ್ಲಿ ಅದು ಪುಣ್ಯಕರವಾದುದು ಎಂದು ಬ್ರಹ್ಮ ಪುರಾಣದಲ್ಲಿ ಹೇಳಲಾಗಿದೆ. ಮಕರ ಸಂಕ್ರಮಣದಿಂದ ದೇವತೆಗಳಿಗೆ ಹಗಲು, ರಾಕ್ಷಸರಿಗೆ ರಾತ್ರಿ ಆಗುವುದೆಂದು ಪುರಾಣ ಪ್ರತೀತಿಯಿದೆ. ಮಕರ ಸಂಕ್ರಾಂತಿಯ ಆಚರಣೆಯಲ್ಲಿ ಪಾಪ ನಿವಾರಣೆಯ ಕಲ್ಪನೆಯ ಜೊತೆ-ಜೊತೆಗೆ ಭೌಗೋಳಿಕ ಮಹತ್ವವೂ ಇದೆ. ಮಕರ ಸಂಕ್ರಮಣದ ಕಾಲದಿಂದ ದಿನಮಾನ ದೊಡ್ಡದಾಗುವುದರ ಜೊತೆಗೆ ಸೃಷ್ಟಿಯಲ್ಲಿ ನವ ಚೇತನ ತುಂಬಿಕೊಳ್ಳುತ್ತದೆ. ಸೃಷ್ಟಿಯಲ್ಲಿ ಸೊಬಗು ಮೈದುಂಬಿಕೊಳ್ಳುತ್ತದೆ. ಭೂಮಿ, ದವಸ-ಧಾನ್ಯಗಳ ಪೂಜೆ, ರಥೋತ್ಸವಗಳ ಸಂಭ್ರಮದ ಆಚರಣೆ, ಎಳ್ಳು ಬೆಲ್ಲಗಳ ವಿನಿಮಯ, ಎಳ್ಳು ಬೆಲ್ಲ ಸ್ವೀಕರಿಸಿ ಒಳ್ಳೆ ಮಾತನಾಡಬೇಕೆಂಬ ಆಶಯದ ಮಾನವ ಕಲ್ಯಾಣ ಹಾರೈಸುವ ಹಿರಿಯ ಹಬ್ಬ ಸಂಕ್ರಾಂತಿ.

■ ಬನ್ನೂರು ಕೆ.ರಾಜು
ಮೊ.9481533167

ಸಂಕ್ರಾಂತಿ ಎಂದರೆ ಹಾಗೇನೆ, ಬದುಕೆಲ್ಲಾ ಹರ್ಷದ ಹಾಡಾಗುತ್ತದೆ. ಮನಸೆಲ್ಲಾ ಮಧುರ ಗೀತೆಯಾಗುತ್ತದೆ. ಹೃದಯವೆಲ್ಲಾ ಹಿಗ್ಗಿನ ಸುಗ್ಗಿಯಾಗುತ್ತದೆ. ನಾಡೆಲ್ಲಾ ನಲಿವ ನವಿಲಿನ ನರ್ತನವಾಗುತ್ತದೆ. ಸಂತಸದ ಕೋಗಿಲೆಯ ಗಾನ ತೇಲಿ-ತೇಲಿ ಬರುತ್ತದೆ. ಬತ್ತದ ಉತ್ಸಾಹದ ಬುಗ್ಗೆ ಚಿಮ್ಮಿ ಚೆಲುವಾಗುತ್ತದೆ. "ಸುಗ್ಗಿಯು ಬಂದಿತು ಹಿಗ್ಗನು ತಂದಿತು ನಮ್ಮಯ ನಾಡಿನ ಜನಕೆಲ್ಲ..." ಎಂಬ ಕವಿವಾಣಿಯನ್ನು ನಾಲಿಗೆಯು ತನ್ನಂತಾನೆ ಗುನುಗುತ್ತದೆ. ನಮ್ಮ ಭವ್ಯ ಭಾರತದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಹಬ್ಬಗಳು, ಹರಿದಿನಗಳು, ದಿನಾಚರಣೆಗಳು, ಜಯಂತಿಗಳು ಆಚರಣೆಯಲ್ಲಿವೆ. ಇವೆಲ್ಲವೂ ನಮ್ಮ ಸಂಸ್ಕೃತಿ-ಪರಂಪರೆಗಳ ಅವಿಭಾಜ್ಯ ಅಂಗವಾಗಿವೆ. ನಮ್ಮ ಹಬ್ಬಗಳ ಆಚರಣೆಗೆ ಹಿನ್ನೆಲೆಯಾಗಿ ಐತಿಹಾಸಿಕ, ಪೌರಾಣಿಕ ಹಾಗೂ ಧಾರ್ಮಿಕ ವಿಶ್ವಾಸದ ತಳಹದಿಯಿರುವುದನ್ನು ಮನಗಾಣಬಹುದು. ಹಬ್ಬಗಳು ನಮ್ಮ ಸಂಸ್ಕೃತಿಯ ದೀಪಮಾಲೆಗಳೂ ಹೌದು. ಹಬ್ಬಗಳ ಆಚರಣೆಯಲ್ಲಿ ಎಲ್ಲೆಲ್ಲೂ ಸಂತಸ, ಉಲ್ಲಾಸ, ಸಡಗರ, ಸಂಭ್ರಮ-ಇವು ನಾವು ಸಾಮಾನ್ಯವಾಗಿ ಕಾಣಬಹುದಾದ ದೃಶ್ಯ. ಹಬ್ಬಗಳು ಮಾನವನ ಬದುಕಿನ ಹರ್ಷೋಲ್ಲಾಸಗಳ ರಸಪೂರ್ಣ ಸಂದರ್ಭ. ಅದರಲ್ಲೂ ನೋವಿನಿಂದ ನಲುಗಿರುವ ನೊಂದ ಜೀವಿಗಳ ಪಾಲಿಗೆ ಬದುಕಿನ ನಲಿವಿನ ಕ್ಷಣಗಳನ್ನು ಕಿಂಚಿತ್ತಾದರೂ ಅನು ಭವಿಸುವ ಸುಸಂದರ್ಭ. ಸಂತಸ ಅರಳುವ ಸುಸಮಯ. ಹಬ್ಬಗಳು ನಮ್ಮ ದೇಹ, ಮನಸ್ಸುಗಳಿಗೆ ಪುನಶ್ಚೇತನ ನೀಡುವ 'ಸಂಜೀವಿನಿ' ಎಂದರೆ ತಪ್ಪಲ್ಲ. ಅಂತೆಯೇ ನಮ್ಮ ಸಾಮಾಜಿಕ ಬದುಕಿಗೆ ಹೊಸ ಆಯಾಮಗಳನ್ನು ತಂದುಕೊಡುವ ಚೇತೋಹಾರಿ ಸತ್ವ ಹಬ್ಬಗಳಲ್ಲಿದೆ. ಈ ದಿಸೆಯಲ್ಲಿ ಹಬ್ಬಗಳ ಆಚರಣೆಯ ಹಿನ್ನೆಲೆಯ ಒಳನೋಟ ಮನಗಂಡಿದ್ದೇ ಆದರೆ ಹಬ್ಬಗಳ ಆಚರಣೆ ಅರ್ಥಪೂರ್ಣವೆನಿಸುತ್ತದೆ.

ನಮ್ಮ ದಿವ್ಯ ಭಾರತದ ಹಬ್ಬಗಳ ಸಾಲಿನಲ್ಲಿ 'ಸಂಕ್ರಾಂತಿ' ಪ್ರಮುಖವಾದ ಹಬ್ಬಗಳಲ್ಲೊಂದು. ವಿಶೇಷವಾಗಿ ರೈತಾಪಿ ಬಂಧುಗಳಿಗೆ, ಕೃಷಿಕರಿಗೆ ಇದು ತುಂಬ ಮಹತ್ವದ ಹಬ್ಬ. ಹೊಲ-ಗದ್ದೆಗಳ ಬೆಳೆ ಫಸಲಾಗಿ, ದವಸ-ಧಾನ್ಯಗಳು ಮನೆ ಸೇರಿ ಸುಗ್ಗಿಯ ಸಡಗರದಲ್ಲಿ ಹರ್ಷೋಲ್ಲಾಸ ಗರಿಗೆದರಿ ನಲಿವೇರಿ ನರ್ತಿಸುವ ಸಂಭ್ರಮದ ಹಬ್ಬವೇ ಸಂಕ್ರಾಂತಿ. ನಮ್ಮ ನಾಡಿನ ಕವಿಗಳು ತಮ್ಮ ಕವಿತೆಗಳಲ್ಲಿ ಸಂಕ್ರಾಂತಿಗೆ ಸಂಭ್ರಮದ ಸ್ವಾಗತ ಕೋರಿ ಜನಮನವನ್ನು ಮುದಗೊಳಿಸಿದ್ದಾರೆ. ಸುಗ್ಗಿಯನ್ನು ಒಂದು ಚೇತನವಾಗಿ ಕಾಣುವ ಮಹಾಕವಿ ಕುವೆಂಪು ಅವರ 'ಸುಗ್ಗಿ ಬರುತಿದೆ' ಕವನ ಕಣ್ಣಿಗೆ ಕಟ್ಟುವ ಚಿತ್ರಗಳಿಂದ ಹೊಸ ಚೈತನ್ಯ ತರುವಂಥದು. ಕವಿ ಕುವೆಂಪು ಸುಗ್ಗಿಯನ್ನು ಕವಿತೆಯಲ್ಲೇ ಕುಣಿಸುತ್ತಾರೆ.

"ಅಡಿಯುಗೆಜ್ಜೆ ನಡುಗೆ ಹೆಜ್ಜೆಯಿಡುತ
ಸುಗ್ಗಿ ಬರುತಿದೆ!
ಸುಗ್ಗಿ ಬರೆ ಹಿಗ್ಗಿತಿರೆ ಸಗ್ಗ
ಸೊಗವ ತರುತಿದೆ!
ಕಣಿವೆಯಿಳಿದು ತೆಮರನೇರಿ
ತರುಗಳಲ್ಲಿ ತಳಿರ ಹೇರಿ
ಹೊಸತು ಜೀವ ಕಳೆಯ ಬೀರಿ
ಸುಗ್ಗಿ ಮೂಡುತಿರುವುದು
ಬನದ ಬಿನದದಿನಿದು ನಿನದು
ಮನದೊಳಾಡುತಿರುವುದು!"



ಮಕರ ಸಂಕ್ರಾಂತಿಯ ಆಚರಣೆಯ ಸುಸಂದರ್ಭದಲ್ಲಿ ಸಂಕ್ಷಿಪ್ತವಾಗಿ ಅದರ ಹಿನ್ನೆಲೆ ನೋಡೋಣ. 'ಶಬ್ದ ಕಲ್ಪದ್ರುಮ'ದಲ್ಲಿ ಹೇಳಲಾಗಿರುವಂತೆ ಗ್ರಹಗಳು ರಾಶಿಯಿಂದ ರಾಶಿಗೆ ಹೋಗಿ ಸೇರುವುದಕ್ಕೆ 'ಸಂಕ್ರಾಂತಿ' ಎಂದು ಹೆಸರು. ಹಾಗೆಯೇ ಸೂರ್ಯನು ಮೇಷ, ವೃಷಭ ಮುಂತಾದ ಹನ್ನೆರಡು ರಾಶಿಗಳಲ್ಲಿ ಸಂಚರಿಸುವ 12 ತಿಂಗಳುಗಳು ಸಂಕ್ರಾಂತಿಯೆನಿಸುತ್ತವೆ. ಸೂರ್ಯನು ಪ್ರತಿ ತಿಂಗಳೂ ಬೇರೆ ಬೇರೆ ರಾಶಿಯನ್ನು ಪ್ರವೇಶಿಸುವುದರಿಂದ ಆಯಾಯ ತಿಂಗಳನ್ನು ಸಂಕ್ರಾಂತಿ ಎಂದು ಕರೆಯುತ್ತಾರೆ. ಸೂರ್ಯನು ಬೇರೆ ರಾಶಿಯನ್ನು ಪ್ರವೇಶಿಸುವ ಕಾಲ ವನ್ನು 'ಸಂಕ್ರಮಣ ಕಾಲ' ಎಂದಿದ್ದಾರೆ. ಹನ್ನೆರಡು ಸಂಕ್ರ ಮಣಗಳು ವರ್ಷದಲ್ಲಿವೆ. ದಕ್ಷಿಣಾಯಣ, ಉತ್ತರಾಯಣಗಳಿಗೆ ಅನುಸಾರವಾಗಿ ಒಂದೊಂದು ಆಯನಕ್ಕೆ ಆರು ಸಂಕ್ರಮಣಗಳನ್ನು ಹಂಚಿದ್ದಾರೆ. ಹೀಗೆ ಮಕರದಿಂದ ಹಿಡಿದು ಮಿಥುನದವರೆಗಿನ ಆರು ಸಂಕ್ರಾಂತಿಗಳು ಉತ್ತರಾಯಣದಲ್ಲಿ ಬರುತ್ತವೆ. ಕಟಕದಿಂದ ಹಿಡಿದು ಧನಸ್ಸಿನವರೆಗೆ ಆರು ಸಂಕ್ರಾಂತಿಗಳು ದಕ್ಷಿಣಾಯಣದಲ್ಲಿ ಬರುತ್ತವೆ.

ಸೂರ್ಯನು ಬೇರೆ ರಾಶಿಯನ್ನು ಪ್ರವೇಶಿಸುವುದರ ಜೊತೆಗೆ ಅವನ ಗತಿಯೂ ಬದಲಾಗುವುದು ಮಕರ ಹಾಗೂ ಕಟಕ ರಾಶಿಗಳಲ್ಲಿ. ಕಟಕ ರಾಶಿ ಪ್ರವೇಶಿಸಿದಾಗ ಸೂರ್ಯನು ದಕ್ಷಿಣ ದಿಕ್ಕಿನಲ್ಲಿ ಸಂಚರಿಸಲು ಆರಂಭಿಸುತ್ತಾನೆ. ಅದೇ ಮಕರ ರಾಶಿ ಪ್ರವೇಶಿಸಿದಾಗ ಅವನ ಗತಿ ಉತ್ತರಕ್ಕೆ ಸಂಚರಿಸುವುದು. ಹೀಗಾಗಿ ಈ ಎರಡು ಕಾಲಗಳನ್ನು ಪುಣ್ಯಕಾಲಗಳೆಂದು ಕರೆಯುತ್ತಾರೆ. ಕಟಕದಿಂದ ಧನಸ್ಸಿನವರೆಗೆ ಸೂರ್ಯನು ದಕ್ಷಿಣ ದಿಕ್ಕಿಗೆ ಸಂಚರಿಸುವುದು ದಕ್ಷಿಣಾಯಣ. ಇದನ್ನು ಪಿತೃಯಾನ ಎನ್ನುತ್ತಾರೆ. ದಕ್ಷಿಣಾಯಣದಲ್ಲಿ ಪಿತೃಗಳಿಗೆ ಪ್ರಾಧಾನ್ಯತೆ. ಅದೇ ಸೂರ್ಯನು ಮಕರದಿಂದ ಮಿಥುನದವರೆಗೆ ಉತ್ತರ ದಿಕ್ಕಿಗೆ ಸಂಚರಿಸುವಾಗ ಉತ್ತರಾಯಣ. ಇದನ್ನು ದೇವಯಾನ ಎನ್ನುತ್ತಾರೆ. ಉತ್ತರಾಯಣದಲ್ಲಿ ದೇವತೆಗಳಿಗೆ ಪ್ರಾಧಾನ್ಯತೆ.

ಸಂಕ್ರಾಂತಿ ಕಾಲದಲ್ಲಿ ಸ್ನಾನ, ದಾನ, ತಪಸ್ಸು, ಹೋಮ, ಪಿತೃತರ್ಪಣ, ದೇವತಾಪೂಜೆ ಇವುಗಳನ್ನು ಆಚರಿಸಿದಲ್ಲಿ ಅದು ಪುಣ್ಯಕರವಾದುದು ಎಂದು ಬ್ರಹ್ಮ ಪುರಾಣದಲ್ಲಿ ಹೇಳಲಾಗಿದೆ. ಮಕರ ಸಂಕ್ರಮಣದಿಂದ ದೇವತೆಗಳಿಗೆ ಹಗಲು, ರಾಕ್ಷಸರಿಗೆ ರಾತ್ರಿ ಆಗುವುದೆಂದು ಪುರಾಣ ಪ್ರತೀತಿಯಿದೆ. ಮಕರ ಸಂಕ್ರಾಂತಿಯ ಆಚರಣೆಯಲ್ಲಿ ಪಾಪ ನಿವಾರಣೆಯ ಕಲ್ಪನೆಯ ಜೊತೆ-ಜೊತೆಗೆ ಭೌಗೋಳಿಕ ಮಹತ್ವವೂ ಇದೆ. ಮಕರ ಸಂಕ್ರಮಣದ ಕಾಲದಿಂದ ದಿನಮಾನ ದೊಡ್ಡದಾಗುವುದರ ಜೊತೆಗೆ ಸೃಷ್ಟಿಯಲ್ಲಿ ನವಚೇತನ ತುಂಬಿಕೊಳ್ಳುತ್ತದೆ. ಸೃಷ್ಟಿಯಲ್ಲಿ ಸೊಬಗು ಮೈದುಂಬಿಕೊಳ್ಳುತ್ತದೆ. ಭೂಮಿ, ದವಸ-ಧಾನ್ಯಗಳ ಪೂಜೆ, ರಥೋತ್ಸವಗಳ ಸಂಭ್ರಮದ ಆಚರಣೆ, ಎಳ್ಳು ಬೆಲ್ಲಗಳ ವಿನಿಮಯ, ಎಳ್ಳು ಬೆಲ್ಲ ಸ್ವೀಕರಿಸಿ ಒಳ್ಳೆ ಮಾತನಾಡಬೇಕೆಂಬ ಆಶಯದ ಮಾನವ ಕಲ್ಯಾಣ ಹಾರೈಸುವ ಹಿರಿಯ ಹಬ್ಬ ಸಂಕ್ರಾಂತಿ. ದನಕರುಗಳನ್ನು ಬಗೆ-ಬಗೆಯಾಗಿ ವರ್ಣ ರಂಜಿತವಾಗಿ ಸಿಂಗರಿಸಿ ಕಿಚ್ಚು ಹಾಯಿಸುವುದು ಸಂಕ್ರಾಂತಿಯ ವಿಶೇಷ. ನದಿಗಳ ಸಂಗಮ ಸ್ಥಳಗಳಿಗೆ ಭೇಟಿ ನೀಡಿ ಹರ್ಷೋಲ್ಲಾಸಗಳಿಂದ ಹಬ್ಬ ಆಚರಿಸುವುದು ಸಂಕ್ರಾಂತಿಯ ಮಹತ್ವಗಳಲ್ಲೊಂದಾಗಿದೆ.

ಸಂಭ್ರಮದ ಸಂಕೇತವಾಗಿರುವ ಮಕರ ಸಂಕ್ರಾಂತಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ. ಜೀವನ ಮೌಲ್ಯಗಳುಳ್ಳ ಪುಣ್ಯ ಕಾರ್ಯಗಳನ್ನೇ ಮಾಡೋಣ. ಪರಿಶುದ್ಧ ಬದುಕನ್ನು ಬಾಳೋಣ. ಲೋಕವನ್ನು ಬೆಳಕಿನೆಡೆಗೆ ನಡೆಸೋಣ. ಸಾರ್ಥಕ ಜೀವನ ನಡೆಸೋಣ, ಸಂಪದ್ಭರಿತ ಬದುಕನ್ನು ಕಟ್ಟೋಣ, ಸರ್ವರಲ್ಲೂ ಸಹಬಾಳ್ವೆಯನ್ನು ಮೆರೆಯೋಣ.



## ವಾರಭವಿಷ್ಯ

15.01.2023 ರಿಂದ 20.01.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ತುಲಾ, ವೃಶ್ಚಿಕ, ಧನುಸ್ಸು, ಕುಜ-ವೃಷಭ, ಬುಧ-ಧನುಸ್ಸು, ಗುರು-ಮೀನ, ಶುಕ್ರ-ಮಕರ, ಶನಿ-ಮಕರ, ರಾಹು-ಮೇಷ ಹಾಗೂ ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಆದಿಗೆ ಮನಸ್ಸಿಗೆ ಮುಜುಗರ ಆಗುವಂತಹ ಪ್ರಸಂಗಗಳು ಘಟಿಸಬಹುದು. ಯಾವುದೇ ವಿಚಾರದಲ್ಲಿ ಸತ್ಯವನ್ನು ಅರಿತು ವ್ಯವಹರಿಸಿ, ಅನ್ಯಥಾ ತೊಂದರೆಗೆ ಒಳಗಾಗುವಿರಿ. ಜನ್ಮಸ್ಥ ರಾಹುವಿನಿಂದ ಮನಸ್ಸಿಗೆ ಉಂಟಾಗುವ ದುಗುಡತೆ ನಿವಾರಣೆಗೆ ಅನುಭವಿಗಳ ಮಾರ್ಗದರ್ಶನ ಪಡೆಯಿರಿ. ವಾರಾಂತ್ಯಕ್ಕೆ ನಿರೀಕ್ಷಿಸಿದ್ದ ಹಣ ಕೈಗೆ ಬರುವುದು. ಮನೆ ಮಂದಿಯ ಜೊತೆ ಲಘು ಪ್ರವಾಸಗಳು.
ಶ್ರೀ ಸುಬ್ರಹ್ಮಣ್ಯ ದರ್ಶನ ಮಾಡಿ. ಶುಭ ಸಂಖ್ಯೆ-2.

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

'ಚಿತ್ರದಲ್ಲಿರುವ ಕುಂಬಳಕಾಯಿ ಪಲ್ಯಕ್ಕೆ ಬರದು'. ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಮನಸ್ಸಿಗೆ ಹುರುಪು. ದೇಹಕ್ಕೆ ಲವಲವಿಕೆಯನ್ನು ನೀಡಲಿದ್ದಾನೆ. ಹೆಂಗಳೆಯರ ಮನಸ್ಸನ್ನು ಗೆಲ್ಲುವಿರಿ. ದೈನಂದಿನ ಕೆಲಸ ಕಾರ್ಯಗಳು ತ್ವರಿತ ರೀತಿಯಲ್ಲಿ ಮುಂದೆ ಸಾಗುವುದು. ಮಕ್ಕಳು ನಿಮ್ಮ ಮಾತನ್ನು ಮೀರಿ ನಡೆಯುವರು. ರಾಹು-ಕೇತು ಅಶುಭರಿದ್ದು ಆನ್‌ಲೈನ್ ಮೋಸಕ್ಕೆ ಒಳಗಾಗುವಿರಿ.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-6.

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಶುಭ ಸಮಾಚಾರ ಬರುವುದರಿಂದ ವಾರಕ್ಕೆ ಸ್ವಾಗತ. ನಿರೀಕ್ಷಿತ ಹಣ ಕೈ ಸೇರುತ್ತದೆ. ಹಲವು ದಿನಗಳಿಂದ ನನೆಗುದಿಗೆ ಬಿದ್ದಿದ್ದ ವಿಷಯಕ್ಕೆ ಮರು ಚಾಲನೆ ದೊರೆಯುತ್ತದೆ. ವಾಹನ ಮಾರಾಟ ಹಾಗೂ ಹೊಸ ವಾಹನ ಮನೆಗೆ ತರಲು ಗ್ರಹಾನುಕೂಲವಿದೆ. ವಾರಮಧ್ಯೆ ಅನಿರೀಕ್ಷಿತ ಖರ್ಚುಗಳು ಎದುರಾಗಬಹುದು. ಸರ್ಕಾರಿ ನೌಕರರಿಗೆ ಲೋಕಾಯುಕ್ತ ಇತ್ಯಾದಿ ತನಿಖಾ ಸಂಸ್ಥೆಗಳಿಂದ ತೊಂದರೆ ಉಂಟಾಗುವುದು.
ಶ್ರೀ ಮಹಾಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-8.

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ವಾರದ ಆದಿಗೆ ಶುಭ ಫಲ ಹಾಗೂ ಶುಭ ವಾರ್ತೆಯನ್ನು ನಿರೀಕ್ಷಿಸಬಹುದು. ನಿಮ್ಮ ಬಹು ಕಾಲದ ಇಷ್ಟವು ಸಿದ್ಧಿಸಲು ಚಂದ್ರ-ಗುರು ಯೋಗವು ಸಿದ್ಧಿಯಾಗಿ ಮನಸ್ಸಿಗೆ ಹರ್ಷವಾಗುವುದು. ನೂತನ ಗೃಹ ಬಳಕೆ ವಸ್ತುಗಳ ಖರೀದಿ. ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣವನ್ನು ವ್ಯಯಿಸುವರು. ಪ್ರತಿಷ್ಠಿತ ವ್ಯಕ್ತಿಗಳ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಪಂಚಮ ಗುರು ಸದ್ಬುದ್ಧಿಯನ್ನು ನೀಡಲಿದ್ದಾನೆ.
ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-9.

### ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಉದ್ಯೋಗ ಹುಡುಕುತ್ತಿದ್ದರೆ ಸಫಲರಾಗುವಿರಿ. ಸಾರಿಗೆ ಉದ್ಯಮ ಆರಂಭಿಸಲು ಪ್ರಯತ್ನಪಡುವವರಿಗೆ ಗ್ರಹಗಳ ಸಹಕಾರವಿದೆ. ವಿದ್ವಜ್ಜನರ ಭೇಟಿಯಿಂದ ಗಹನ ಸಮಸ್ಯೆಗೆ ಪರಿಹಾರ ದೊರಕುವುದು. ಅಷ್ಟಮ ಶನಿದೇವನ ಕಾರಣ ಮಾನಸಿಕ ಅಸ್ಥಿರತೆ ಮತ್ತು ಋಣಾತ್ಮಕ ಚಿಂತನೆಗಳು ಕಾಡುತ್ತವೆ. ದಾರಿ ಕಾಣದಾದಾಗ ದೇವರ ಮೊರೆ ಹೋಗುವುದು ಸಹಜ. ತಾಳ್ಮೆಗೆಟ್ಟು ವಾಹನ ಚಲಿಸಿದರೆ ಬಾಳ್ಮೆಗೆಟ್ಟು ಹೋಗುವುದು.
ಶ್ರೀರಾಮ ರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

'ಮಿತವಾಗಿದ್ದರೆ ಹಿತವಾದದ್ದು ಫಲಿಸುತ್ತೆ' ಎಂಬಂತೆ ನಿಮ್ಮ ರಾಶ್ಯಾಧಿಪನ ಪ್ರಭಾವದಿಂದ ವ್ಯಾಪಾರ ವ್ಯವಹಾರಗಳು ಉತ್ತಮವಾಗಿ ನಡೆಯುವುದು. ಆದರೆ ಅತೀ ಲಾಭದ ಆಸೆ ವ್ಯಸನಕ್ಕೆ ಕಾರಣವಾಗುವುದು. ಕೋರ್ಟು, ಕಚೇರಿಗಳು ಕುಂಟುತ್ತಾ ಸಾಗುತ್ತವೆ. ಫೈನಾನ್ಸ್ ವ್ಯವಹಾರ ಮಾಡುವವರು ಎಚ್ಚರವಾಗಿರಬೇಕು. ಸಣ್ಣ ಪುಟ್ಟ ಚುನಾವಣೆಗಳಲ್ಲಿ ವಿಜಯ ಮಾತೆ ಒಲಿಯುವುದು. ವಾರದಲ್ಲಿ ವೈದ್ಯರ ಭೇಟಿ ಅನಿವಾರ್ಯವೆನಿಸುವುದು.
ಶ್ರೀ ಸತ್ಯನಾರಾಯಣ ದರ್ಶನ. ಶುಭ ಸಂಖ್ಯೆ-1.

### ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ವಾರ ಭಾಗ್ಯಸ್ಥಾನ ಸ್ಥಿತ ಗುರುದೇವನಿಂದ ಹಣಕಾಸಿನ ಪರಿಸ್ಥಿತಿ ಸಮಾಧಾನಕರವಾಗಿರುವುದು. ನಿಮ್ಮ ಮನೋಕಾಮನೆಗಳು ಈಡೇರಲು ಕಾಲ ಪಕ್ವವಾಗಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿದೆ. ನಿಮ್ಮ ಸ್ಥಾನಮಾನಗಳಲ್ಲೂ ವೃದ್ಧಿಯಾಗುವುದು. ಸರ್ಕಾರಿ ನೌಕರರಿಗೆ ಬೇಡವಾದ ಜಾಗಕ್ಕೆ ಸ್ಥಾನ ಪಲ್ಲಟವಾಗುವ ಸಾಧ್ಯತೆ ಇದೆ. ರಾಜಕಾರಣಿಗಳು ಲೋಕಾಪವಾದಕ್ಕೆ ಗುರಿಯಾಗುವರು.
ಶ್ರೀ ಶಿವ ಪಂಚಾಕ್ಷರೀ ಮಂತ್ರ ಜಪಿಸಿ. ಶುಭ ಸಂಖ್ಯೆ-4.

### ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಗುರು-ಶನಿ ಗ್ರಹಗಳು ನಿಮ್ಮ ಯೋಚನೆ ಹಾಗೂ ಯೋಜನೆಗಳಿಗೆ ಪೂರಕ ಶಕ್ತಿಯನ್ನು ನೀಡುತ್ತಿಲ್ಲ. 'ರೀತಿಗೆಟ್ಟರೂ ನೀತಿ ಗೆಡಬೇಡಿ'. ಸತಿ-ಪತಿಯರು ಉತ್ತರ-ದಕ್ಷಿಣ ಆಗದಿರಿ. ಹಲ್ಲನ್ನು ಬೆಟ್ಟ ಮಾಡಲು ಶನಿದೇವರು ನಿಮ್ಮ ರಾಶಿಯಲ್ಲೇ ಸ್ಥಿತರಿದ್ದಾರೆ. ವಾರ ಮಧ್ಯಾನಂತರ ಶನಿಗ್ರಹದ ಶುಭ ಸಂಚಾರ ಧನ-ಧಾನ್ಯಲಾಭ, ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆಗಳನ್ನು ನೀಡಲಿದೆ. ಮನೆಗೆ ಅತಿಥಿ-ಅಭ್ಯಾಗತರ ಆಗಮನದಿಂದ ಮನಸ್ಸಂತೋಷ. ಶ್ರೀ ಶನಿ ಮೂಲಮಂತ್ರ ಜಪ. ಶುಭ ಸಂಖ್ಯೆ-3.

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

'ಹಂಗಿನ ಅರಮನೆಗಿಂತ ರಾಗಿ ಅಂಬಲಿ ಲೇಸು' ಎಂಬಗಾದೆ ನಿಮ್ಮ ಅನುಭವಕ್ಕೆ ಬರಲು ಗ್ರಹಗತಿಗಳೇ ಕಾರಣ. ವಾರದ ಆದಿಗೆ ಕೊಂಚ ಉದ್ವೇಗಕ್ಕೆ ಒಳಗಾದರೂ ದಿನ ಸರಿದಂತೆ ಮನಸ್ಸಿಗೆ ನೆಮ್ಮದಿ ತರುವ ವಿಷಯಗಳು ಘಟಿಸುತ್ತವೆ. ಖಯ್ಯಾಲಿ ರೈಡಿಂಗ್‌ಗಳನ್ನು ಮಾಡದಿರಿ. ರಾತ್ರಿ ಪ್ರಯಾಣಗಳು ಬೇಡವೇ ಬೇಡ. ವಾರಾಂತ್ಯಕ್ಕೆ ಮಿತ್ರರ ಮಿಲನದಿಂದ ಆನಂದ. ಪರಿಮಳ ದ್ರವ್ಯಗಳು, ಮೃಷ್ಟಾನ್ನ ಭೋಜನಗಳು ಲಭಿಸುತ್ತವೆ.
ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ-5.

### ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆದಿಗೆ ಶುಭ ಫಲ ಹಾಗೂ ಶುಭ ವಾರ್ತೆಯನ್ನು ನಿರೀಕ್ಷಿಸಬಹುದು. ಬಂಧು-ಬಾಂಧವರ ಮಿಲನ ನಿಮ್ಮನ್ನು ಪುಳಕಿತಗೊಳಿಸುತ್ತದೆ. ನಿಮ್ಮ ಬಹುಕಾಲದ ಇಷ್ಟವು ಸಿದ್ಧಿಸುವುದು. ಗುರುಬಲವೂ ಇದೆ. ಪ್ರಯತ್ನಿಸುವುದು ವಾರ ಮಧ್ಯೆ ಶಿರೋಬಾಧೆ, ಅನಾರೋಗ್ಯ ಕಾಡಿಸುತ್ತದೆ. ಸರ್ಕಾರಿ ಕಚೇರಿಗಳಿಗೆ ಸುಮ್ಮನೆ ಎಡತಕುವಿರಿ. ಈ ವಾರ ಲಾಭ-ಅಲಾಭಗಳನ್ನು ಸಮನಾಗಿ ಸ್ವೀಕರಿಸಿ.
'ಓಂ ನಮೋ ನಾರಾಯಣಾಯ' ಮಂತ್ರ ಜಪಿಸಿ. ಶುಭ ಸಂಖ್ಯೆ-5.

### ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಧನ ಸಂಪಾದನೆಯಿಂದಲೂ ಶುಭ ಸುದ್ದಿ ಬರುವುದರಿಂದಲೂ ಹರ್ಷಚಿತ್ತರಾಗಿರುವಿರಿ. ನಿತ್ಯದ ಕೆಲಸ ಕಾರ್ಯಗಳನ್ನು ಆಸಕ್ತಿಯಿಂದ ನಿರ್ವಹಿಸುವಿರಿ. ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್ ವರ್ಕ್ ಅನ್ನು ಹೆಚ್ಚಿನ ಶ್ರಮವಿಲ್ಲದೇ ಮುಗಿಸುವರು. ಪಂಚಮ ಶನಿಯಿಂದ ಆಸ್ತಿ ನಷ್ಟ, ಪುತ್ರರ ಜೊತೆ ಕಲಹಗಳು ಉಂಟಾಗುವುದು. ವಾಹನ ಡ್ರೈವ್ ಮಾಡುವಾಗ ಮನೆಯಲ್ಲಿ ನಿಮ್ಮನ್ನು ಪ್ರೀತಿಸುವವರು ಇದ್ದಾರೆ ಎಂಬುದು ನೆನಪಿರಲಿ.
ಶ್ರೀ ಶ್ರೀನಿವಾಸಸ್ವಾಮಿ ದರ್ಶನ. ಶುಭ ಸಂಖ್ಯೆ-7.


### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಪ್ರಾರಂಭಕ್ಕೆ ಮನಸ್ಸಿಗೆ ಕಸಿವಿಸಿಯಾಗುವಂತಹ ಪ್ರಸಂಗಗಳು ಎದುರಾಗಲಿದೆ. ಮನಸ್ಸಿನ ದುಗುಡತೆ ನಿವಾರಣೆಗೆ ಗುರು-ಹಿರಿಯರ ಮಾರ್ಗದರ್ಶನ ಪಡೆದುಕೊಳ್ಳುವುದು ಉಚಿತ. ವಾರ ಮಧ್ಯೆ ಪ್ರತಿಷ್ಠಿತ ವ್ಯಕ್ತಿಗಳ ಸಂಪರ್ಕದಿಂದ ಪ್ರಮುಖ ಕಾರ್ಯವೊಂದು ಸಿದ್ಧಿಸುವುದು. ರೈತಾಪಿ ಜನರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರಕುವುದು. 'ಮೌನಂ ಕಲಹಂ ನಾಸ್ತಿ', ಅತೀ ಮಾತು ಕಲಹಕ್ಕೆ ನಾಂದಿ.
'ಓಂ ನಮೋ ಭಗವತೇ ವಾಸುದೇವಾಯ'. ಶುಭ ಸಂಖ್ಯೆ-8.

## ಮಕ್ಕಳ ಚಿತ್ರಕಥೆ

### 'ಹಿರಿಯರು ಹೇಳಿದ್ದು...!'

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಪ್ರಧಾನಿ ಮೋದಿ ಸ್ವಾತಂತ್ರ್ಯ ದಿನಾಚರಣೆ ವೇಳೆ ಹರ್ ಘರ್ ತಿರಂಗಾ ಘೋಷಿಸಿದ್ದಂತೆ

# ಗಣರಾಜ್ಯೋತ್ಸವಕ್ಕೆ ಹರ್ ಘರ್ ಸಂವಿಧಾನವೆಂದು ಘೋಷಿಸುತ್ತಾರೆಯೇ?

## ಮೈಸೂರಿನ ಶ್ರೀಶಿವಯೋಗಿ ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಸವಾಲು

ನಂಜನಗೂಡು, ಜ.14– ಸ್ವಾತಂತ್ರ್ಯ ದಿನಾಚರಣೆ ವೇಳೆ ಹರ್ ಘರ್ ತಿರಂಗಾ ಘೋಷಿಸಿದ್ದ ಪ್ರಧಾನಿ ಮೋದಿ ಗಣರಾಜ್ಯೋತ್ಸವಕ್ಕೆ ಹರ್ ಘರ್ ಸಂವಿಧಾನ ಎಂದು ಘೋಷಣೆ ಮಾಡುತ್ತಾರೆಯೇ ಎಂದು ಮೈಸೂರಿನ ಶ್ರೀಶಿವಯೋಗಿ ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಸವಾಲು ಹಾಕಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ದಲಿತ ಸಂಘಟನೆಗಳ ಒಕ್ಕೂಟದಿಂದ 205ನೇ ಭೀಮಾ ಕೋರೆಗಾಂವ್ ವಿಜಯೋತ್ಸವ ಅಂಗವಾಗಿ ಶನಿವಾರ ಆಯೋಜಿಸಿದ್ದ ಪ್ರಬುದ್ಧ ಭಾರತ ಹಾಗೂ ಪ್ರಜಾಪ್ರಭುತ್ವ ಉಳಿವಿಗಾಗಿ ಸಂವಿಧಾನ ರಕ್ಷಣೆ ಕುರಿತ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

ಹರ್ ಘರ್ ತಿರಂಗಾ ಘೋಷಿಸಿದ್ದ ಪ್ರಧಾನಿ ಮೋದಿ ಹರ್ ಘರ್ ಸಂವಿಧಾನ ಘೋಷಿಸಲು ಸಾಧ್ಯವಿಲ್ಲ. ಏಕೆಂದರೆ ಸಂವಿಧಾನ ನಾಶಪಡಿಸಲು ಅಧಿಕಾರಕ್ಕೆ ಬಂದಿರುವವರಿಂದ ಸಂವಿಧಾನ ರಕ್ಷಣೆ ಸಾಧ್ಯವಿಲ್ಲ. ಸಂವಿಧಾನ ಗಲ್ಲಿಗೇರಿಸುವ ಷಡ್ಯಂತ್ರ ನಡೆಯುತ್ತಿದೆ. ಮನುವಾದ ವರ್ಸಸ್ ಭೀಮವಾದ ನಡುವೆ ಸಂಘರ್ಷ ಏರ್ಪಟ್ಟಿದೆ. ಮಾಧ್ಯಮಗಳು ಪ್ರಜಾಪ್ರಭುತ್ವ ವ್ಯವಸ್ಥೆ ನಾಶಪಡಿಸುತ್ತಿದೆ ಎಂದು ಸುಪ್ರೀಂಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಮನುವಾದಿಗಳ ಮುಂದೆ ಮಾಧ್ಯಮಗಳು ಮಂಡಿಯೂರಿವೆ ಎಂದು ವಾಗ್ದಾಳಿ ನಡೆಸಿದರು.

ದೇಶ ಎತ್ತ ಸಾಗುತ್ತಿದೆ ಎಂಬ ಆತಂಕ ಶುರುವಾಗಿದೆ. 60 ಸಾವಿರ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಟ್ಟಿಲ್ಲ. 2 ಸಾವಿರ ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಫೆಲೋಶಿಪ್ ನೀಡಿಲ್ಲ. 5 ಲಕ್ಷ ಜನ ಉದ್ಯೋಗ ಕಳೆದುಕೊಂಡಿದ್ದಾರೆ.




75 ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಮಾರಾಟ ಮಾಡಿದ್ದಾರೆ. 140 ರೈಲ್ವೆ ನಿಲ್ದಾಣ ಹಾಗೂ ವಿಮಾನ ನಿಲ್ದಾಣಗಳು ಖಾಸಗಿ ಸ್ವತ್ತಾಗಿವೆ. ಮತಪಟ್ಟಿಯಲ್ಲಿ ಮತವನ್ನೇ ಕದಿಯುವ ಖದೀಮರು ಹುಟ್ಟುಕೊಂಡಿದ್ದಾರೆ ಎಂದು ದೂರಿದರು.

ಹೋರಾಟಗಳು ಮಾರಾಟವಾದ ಪರಿಣಾಮ ದಲಿತ ಸಂಘಟನೆಗಳನ್ನು ಆಳುವ ಸರ್ಕಾರಗಳು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಪ್ರಸ್ತುತ ಅಂಬೇಡ್ಕರ್ ವಾದಿಗಳಾಗುವ ಬದಲಾಗಿ ಅವಕಾಶವಾದಿಗಳಾಗಿ, ಸಾಧಕರಾಗುವ ಬದಲಾಗಿ ಸಮಯ ಸಾಧಕರಾಗುತ್ತಿರುವುದರಿಂದ ಜಾಗೃತ ಸಮಾಜ ಕಟ್ಟುವಲ್ಲಿ ನಾವು ಎಡವುತ್ತಿದ್ದೇವೆ ಮುಂದೆ ಹೀಗಾಗದಂತೆ ನಾವೆಲ್ಲರೂ ಒಗ್ಗಟ್ಟಿನಿಂದ ದೇಶದ ಸಂವಿಧಾನದ ಉಳಿವಿಗಾಗಿ ಹೋರಾಟ ರೂಪಿಸಬೇಕಾಗಿದೆ. ಮೈಮರೆತರೆ ಮತ್ತೆ ಮನುವಾದ ಅಟ್ಟಹಾಸ ಮೆರೆಯುವ ಕಾಲ ದೂರವಿಲ್ಲ ಎಂದರು.

ಹಿರಿಯ ಪತ್ರಕರ್ತ ಶಶಿಧರ್ ಭಟ್ ಮಾತನಾಡಿ, ಹಿಂದೂಗಳನ್ನು ಒಗ್ಗೂಡಿಸುವ ಭರದಲ್ಲಿ ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಇಂದಿನ ಪ್ರಭುತ್ವದಲ್ಲಿ ದಲಿತರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಭಯ ಹುಟ್ಟಿಸುವ ಹಾಗೂ ಭ್ರಮೆ ಸೃಷ್ಟಿಸುವ ಅಜೆಂಡಾ ನಾಗಾಪುರದಲ್ಲಿ ತಯಾರಾಗುತ್ತಿದೆ. ಪ್ರಧಾನಿ ಮೋದಿ ಧರ್ಮವನ್ನು ರಾಜಕೀಯಗೊಳಿಸುತ್ತಿದ್ದಾರೆ.

### ಆಕರ್ಷಕ ಮೆರವಣಿಗೆ

205ನೇ ಭೀಮಾ ಕೋರೆಗಾಂವ್ ವಿಜಯೋತ್ಸವ ಅಂಗವಾಗಿ ಆಕರ್ಷಕ ಮೆರವಣಿಗೆ ನಡೆಯಿತು. ನಗರದ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಮೆರವಣಿಗೆಗೆ ಜ್ಞಾನಪ್ರಕಾಶ ಸ್ವಾಮೀಜಿ ಚಾಲನೆ ನೀಡಿದರು. ಕೋರೆಗಾಂವ್ ವಿಜಯೋತ್ಸವ ಬಿಂಬಿಸುವ ಸ್ತಬ್ಧಚಿತ್ರದೊಂದಿಗೆ ಒಕ್ಕೂಟದ ನೂರಾರು ಕಾರ್ಯಕರ್ತರು ನೀಲಿ ಬಾವುಟ ಹಿಡಿದು ಸಾಗುವ ಮೂಲಕ ಗಮನ ಸೆಳೆದರು. ರಾಷ್ಟ್ರಪತಿ ರಸ್ತೆ, ಬ್ರಾಡ್‌ವೇ ರಸ್ತೆ ಮೂಲಕ ಸಾಗಿದ ಮೆರವಣಿಗೆ ಅಂಬೇಡ್ಕರ್ ಪ್ರತಿಮೆ ಮುಂಭಾಗ ಅಂತ್ಯಗೊಂಡಿತು. ನಂತರ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ದಲಿತರು ಮತ್ತು ಮುಸ್ಲಿಮರು ಒಂದಾದರೆ ಮಾತ್ರ ಭಾರತ ಉಳಿಯುತ್ತದೆ. ಇಲ್ಲವಾದಲ್ಲಿ 5 ಸಾವಿರ ವರ್ಷ ಹಿಂದಕ್ಕೆ ತೆಗೆದುಕೊಂಡು ಹೋಗಿ ಮನುವಾದ ಬಿತ್ತುವ ಹುನ್ನಾರ ನಡೆಯುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ ಡಾ.ಎಸ್.ತುಕರಾಂ, ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಂಕರಪುರ ಸುರೇಶ್, ನಿಕಟಪೂರ್ವ ಅಧ್ಯಕ್ಷರಾದ ಚುಂಚನಹಳ್ಳಿ ಮಲ್ಲೇಶ್, ಕಾರ್ಯ ಬಸವಣ್ಣ, ಮಲ್ಲಹಳ್ಳಿ ನಾರಾಯಣ, ಉಪಾಧ್ಯಕ್ಷ ಅಭಿನಾಗಭೂಷಣ್, ಖಜಾಂಚಿ ಮಂಜು ಶಂಕರಪುರ, ಮಟ್ಟಸ್ವಾಮಿ ದೇವರಸನಹಳ್ಳಿ, ಯೋಗೇಶ್, ಕಳಲೆ ಕುಮಾರ್, ಯಶ್ವಂತ್‌ಕುಮಾರ್, ಆನಂದ್ ಬ್ಯಾಳಾರು, ಪ್ರಶಾಂತ್ ಉಪಸ್ಥಿತರಿದ್ದರು.

## 62 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಗುದ್ದಲಿ ಪೂಜೆ



ಪಿರಿಯಾಪಟ್ಟಣ, ಜ.14– ತಾಲೂಕಿನ ಅಭಿವೃದ್ಧಿಗೆ ಪಕ್ಷಭೇದ ಮರೆತು ದುಡಿದಿರುವ ನನಗೆ ಪ್ರತಿಫಲವಾಗಿ ಮುಂಬರುವ ಚುನಾವಣೆಯಲ್ಲಿ ಮತಗಳ ರೂಪದಲ್ಲಿ ಕೂಲಿ ಕೊಡಿ ಎಂದು ಶಾಸಕ ಕೆ.ಮಹದೇವ್ ಮನವಿ ಮಾಡಿದರು.

ತಾಲೂಕಿನ ವಿವಿಧೆಡೆ 62 ಲಕ್ಷ ರೂ. ವೆಚ್ಚದ ಕಾಮಗಾರಿಗಳಿಗೆ ಗುದ್ದಲಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಚುನಾವಣೆ ಸಮೀಪಿಸುತ್ತಿದ್ದಂತೆ ವಿಪಕ್ಷದವರು ನನ್ನ ಮೇಲೆ ಆರೋಪಗಳ ಸುರಿಮಳೆಗೈಯುತ್ತಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದಿದ್ದು, ಅಲ್ಪಸಂಖ್ಯಾತರು ಹಾಗೂ ದಲಿತರ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್‌ನಿಂದ ಈ 2 ಸಮುದಾಯಗಳಿಗೆ ಯಾವುದೇ ಲಾಭವಾಗಿಲ್ಲ. ಆದ್ದರಿಂದ ಅಲ್ಪಸಂಖ್ಯಾತರು ಹಾಗೂ ದಲಿತರು ಕಾಂಗ್ರೆಸ್ ಮಾತಿಗೆ ಮರುಳಾಗಿ ಮತ ನೀಡಿ ಮತ್ತೊಮ್ಮೆ ಮೋಸ ಹೋಗಬೇಡಿ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಎಲ್ಲಾ ವರ್ಗದವರಿಗೂ ಸಾಕಷ್ಟು ಕೊಡುಗೆ ನೀಡಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಆಶೀರ್ವಾದ ಮಾಡುವ ಮೂಲಕ ಮತ್ತೊಮ್ಮೆ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಲು ಅವಕಾಶ ಮಾಡಿಕೊಡಿ ಎಂದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡರಾದ ರಾಜು, ರಫೀಕ್, ಮುನ್ನ, ರಂಗಸ್ವಾಮಿ, ರಘು ಸೇರಿದಂತೆ ಇನ್ನಿತರರಿದ್ದರು.

## ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ

### ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ ಕರೆ

ತಿ.ನರಸೀಪುರ, ಜ.14– ಮುಂಬರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಕಾರ್ಯಕರ್ತರು ಶ್ರಮಿಸಬೇಕು ಎಂದು ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ ಕರೆ ನೀಡಿದರು.

ತಾಲೂಕಿನ ಕರೋಹಟ್ಟಿ ಗ್ರಾಮದಲ್ಲಿ ನಡೆದ ಬಿಜೆಪಿ ಬೂತ್ ವಿಜಯ ಅಭಿಯಾನದಲ್ಲಿ ಬೂತ್ ಸಂಖ್ಯೆ 155, 156, 157 ಹಾಗೂ 158ರ ಅಧ್ಯಕ್ಷರ ಮನೆ ಮೇಲೆ ಪಕ್ಷದ ಬಾವುಟ ಕಟ್ಟಿ ಅವರು ಮಾತನಾಡಿದರು.



ಬೂತ್ ಎಲ್ಲಿ ಗಟ್ಟಿಯಾಗಿರುತ್ತದೋ ಅಲ್ಲಿ ಮಂಡಲ ಕೂಡ ಭದ್ರತೆಯಿಂದ ಕೂಡಿರುತ್ತದೆ. ಮಂಡಲ ಗಟ್ಟಿಯಾಗಿದ್ದಲ್ಲಿ ಇಡೀ ಕ್ಷೇತ್ರ ಸಹ ಗಟ್ಟಿಯಾಗಿರುತ್ತದೆ. ಆದರೆ ಕ್ಷೇತ್ರವನ್ನು ಗಟ್ಟಿಗೊಳಿಸಲು ಪಕ್ಷದ ಕಾರ್ಯಕರ್ತರು ಹಾಗೂ ಬೂತ್ ಕಮಿಟಿ ಸದಸ್ಯರು ನಿರಂತರ ಪರಿಶ್ರಮ ಹಾಕಬೇಕಿದೆ ಎಂದರು.

ಪ್ರಧಾನಿ ಮೋದಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ರಾಜ್ಯದ ಜನತೆಗೆ ನೀಡಿರುವ ಜನೋಪಯೋಗಿ ಕಾರ್ಯಕ್ರಮಗಳನ್ನು ಕ್ಷೇತ್ರದ ಪ್ರತಿ ಮನೆ ಮನೆಗೂ ತಲುಪಿಸಿ ಜನರಲ್ಲಿ ಪಕ್ಷದ ಬಗ್ಗೆ ವಿಶ್ವಾಸ ಮೂಡಿಸುವ ಕೆಲಸ ಮಾಡಬೇಕು. ಪ್ರತಿಯೊಂದು ಬೂತ್ ಮತ್ತು ಪೇಜ್ ಪ್ರಮುಖ್ ಮಾಡಿ ಪೇಜ್ ಪ್ರಮುಖ್‌ರಿಗೆ ಒಬ್ಬೊಬ್ಬ ಮುಖಂಡರನ್ನು ನೇಮಕ ಮಾಡಿ ಪಕ್ಷ ಸಂಘಟಿಸುವ ಕಡೆಗೆ ಹೆಚ್ಚು ಗಮನ ನೀಡಬೇಕೆಂದು ಕರೆ ನೀಡಿದರು.

ಪ್ರಧಾನಿ ಮೋದಿ ವಿಶ್ವನಾಯಕರಾಗಿ ಹೊರಹೊಮ್ಮಿದ್ದಾರೆ. ಇಂದು ಉಕ್ರೇನ್ ಯುದ್ಧ ನಿಲ್ಲಿಸಲು ಅಲ್ಲಿನ ಪ್ರಧಾನಿ ನಮ್ಮ ಮೋದಿ ಸಲಹೆ ಕೇಳುತ್ತಾರೆ ಎಂದರೆ ನಾವೆಲ್ಲರೂ ಹೆಮ್ಮೆ ಪಡಬೇಕು. ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವ ಮೂಲಕ ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಿಂದ ಶಾಸಕರನ್ನು ಆಯ್ಕೆ ಮಾಡಲು ಕೆಲಸ ಮಾಡಬೇಕು ಎಂದರು.

ಈ ವೇಳೆ ಬೂತ್ ಅಧ್ಯಕ್ಷರಾದ ಮಲ್ಲಿಕಾರ್ಜುನಸ್ವಾಮಿ, ಪುಟ್ಟಸ್ವಾಮಿ, ಜಗದೀಶ್, ರೇವಣ್ಣ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಬಸವರಾಜು, ಎಸ್.ಟಿ.ಮೋರ್ಚಾ ಉಪಾಧ್ಯಕ್ಷ ಮರಡೀಪುರ ನಾಗರಾಜು, ಮುಖಂಡರಾದ ರಾಜಶೇಖರ, ಸಿದ್ದರಾಜು, ಶಂಕರ್, ನಾಗೇಂದ್ರ, ಮಂಜು, ಗಿರೀಶ್, ವಿಜಯ್ ಮತ್ತಿತರರಿದ್ದರು.






ಮಕರ ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಬನ್ನೂರಿನ ಮಾರುಕಟ್ಟೆಯಲ್ಲಿ ಶನಿವಾರ ಎಳ್ಳುಬೆಲ್ಲ ಖರೀದಿಯಲ್ಲಿ ನಿರತರಾಗಿರುವ ಗ್ರಾಹಕ

## ಇಂದು ಸಾಮೂಹಿಕ ಗೋ ಪೂಜೆ



ಮೈಸೂರು, ಜ.14–ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ 10ನೇ ವರ್ಷದ ಸಾಮೂಹಿಕ ಗೋ ಪೂಜೆ ಮತ್ತು ಗೋವುಗಳಿಗೆ ಆಹಾರ ನೀಡುವ ಕಾರ್ಯಕ್ರಮವನ್ನು ನಾಳೆ (ಜ.15) ಬೆಳಗ್ಗೆ 11ರಿಂದ 12 ಗಂಟೆಯವರೆಗೆ ನಂಜರಾಜ ಬಹದ್ದೂರ್ ಛತ್ರದ ಬಳಿ ಆಯೋಜಿಸಲಾಗಿದ್ದು, ದೇವರಾಜ ಮೊಹಲ್ಲಾ (ವಿನೋಬಾ ರಸ್ತೆ) ನಿವಾಸಿಗಳು ಭಾಗವಹಿಸಬೇಕು ಎಂದು ಮೊಹಲ್ಲಾ ನಿವಾಸಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೆಡಿಎಸ್‌ಗೆ ದೇವರಹಳ್ಳಿ ಸೋಮಶೇಖರ್ ಗುಡ್‌ಬೈ



ಹುಣಸೂರು, ಜ.14– ಕಳೆದ ಉಪಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಪಕ್ಷದ ಹಾಲಿ ತಾಲೂಕು ಅಧ್ಯಕ್ಷ ದೇವರಹಳ್ಳಿ ಸೋಮಶೇಖರ್ ಅವರು ಜೆಡಿಎಸ್‌ಗೆ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

ಪಕ್ಷದ ತಾಲೂಕು ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರವೇ ಜಿಲ್ಲಾಧ್ಯಕ್ಷರಿಗೆ ರಾಜೀನಾಮೆ ಸಲ್ಲಿಸಿದ್ದ ಸೋಮಶೇಖರ್, ಇಂದು ನಗರದ ಜೆಡಿಎಸ್ ಕಚೇರಿಯಲ್ಲಿ ಕಾರ್ಯಕರ್ತರು ಮತ್ತು ಅಭಿಮಾನಿಗಳ ಸಭೆ ನಡೆಸಿ, ತಾನು ಪಕ್ಷ ತೊರೆಯುವುದಾಗಿ ಘೋಷಿಸಿದ್ದಾರೆ.

ಕಳೆದ ಉಪ ಚುನಾವಣೆಯಲ್ಲಿ ಪಕ್ಷದಿಂದ ಸ್ಪರ್ಧಿಸಲು ಯಾರೂ ಇಲ್ಲದಿದ್ದಾಗ ನಾನು ಸ್ಪರ್ಧಿಸಿ, ಪಕ್ಷದ ಮಾನ ಉಳಿಸಿದೆ. ಅಂದಿನಿಂದ ಇಲ್ಲಿಯವರೆಗೂ ಪಕ್ಷಕ್ಕೆ ದ್ರೋಹ ಬಗೆಯದೇ ಸಕ್ರಿಯವಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು ತಮ್ಮೆಲ್ಲರ ಅಭಿಮಾನ ಗಳಿಸಿದ್ದೇನೆ ಎಂದರು.

ಆದರೆ, ತಾಲೂಕು ಜೆಡಿಎಸ್ ಅಧ್ಯಕ್ಷನಾದ ನನ್ನ ಗಮನಕ್ಕೂ ತಾರದೇ, ಏಕಾಏಕಿ ಕ್ಷೇತ್ರದ ಅಭ್ಯರ್ಥಿ ಘೋಷಣೆ ಮಾಡಿದ್ದಾರೆ. ಈ ವಿಚಾರ ಕೇಳಲು ನಾವೇ ಖುದ್ದಾಗಿ ಹೋದರೂ ವರಿಷ್ಠರು ನಮಗೆ ಸ್ಪಂದಿಸದೇ ದೂರವಿರಿಸಿದ್ದಾರೆ. ಈ ಎಲ್ಲಾ ಬೆಳವಣಿಗೆಯಿಂದ ಬೇಸತ್ತು ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಪಕ್ಷದಿಂದ ಹೊರ ಹೋಗುತ್ತಿದ್ದೇನೆ. ನಿಮ್ಮೆಲ್ಲರ ಬೆಂಬಲ ಸದಾ ಹೀಗೆ ಇರಲಿ ಎಂದರು.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಸೋಮಶೇಖರ್, ಕಳೆದ 15 ವರ್ಷಗಳಿಂದ ಸೊರಗಿ ಹೋಗಿದ್ದ ಪಕ್ಷವನ್ನು ನನ್ನ ಮನೆಯ ಹಣ ತಂದು ಖರ್ಚು ಮಾಡಿ ತಳಮಟ್ಟದಿಂದ ಸಂಘಟಿಸಿದ್ದೇನೆ. ಆದರೆ ನನಗೆ ಪಕ್ಷದಲ್ಲಿ ಕಿಂಚಿತ್ತು ಗೌರವ ಇಲ್ಲ. ನನ್ನ ಗಮನಕ್ಕೂ ತಾರದೇ ಕ್ಷೇತ್ರದ ಅಭ್ಯರ್ಥಿ ಘೋಷಣೆ ಮಾಡಿ, ನನ್ನ ಭೇಟಿಗೆ ಅವಕಾಶ ನೀಡದಿರುವುದು ವೈಯಕ್ತಿಕವಾಗಿ ತೀವ್ರ ನೋವುಂಟು ಮಾಡಿದೆ. ಹೀಗಾಗಿ ಪಕ್ಷದಿಂದ ಹೊರ ಹೋಗುತ್ತಿದ್ದೇನೆ ಎಂದರು.

ಇಂದಿನ ಸಭೆಯಲ್ಲಿ ಪಕ್ಷದ ಗೌರವಾಧ್ಯಕ್ಷ ಗೋವಿಂದೇಗೌಡ, ಕಾರ್ಯದರ್ಶಿ ವಾಸು, ಖಜಾಂಚಿ ಶರವಣ, ಕಾರ್ಯಕಾರಿ ಸಮಿತಿ ಸದಸ್ಯ ಕೃಷ್ಣರಾಜಗುಪ್ತ, ಗ್ರಾಮಾಂತರ ಮಹಿಳಾಧ್ಯಕ್ಷೆ ಯಶೋಧಾ, ನಗರಸಭಾ ಸದಸ್ಯರಾದ ರಾಣಿ ಪೆರುಮಾಳ್, ರಾಧ, ದೇವರಾಜು.ಸಿ, ಮುಖಂಡರಾದ ರುದ್ರೇಗೌಡ, ರಮೇಶ್, ಹೆಚ್.ಟಿ.ಬಾಬು, ಜಯಣ್ಣ, ಸಿರಾಜ್, ಹೆಚ್.ಎನ್.ಕುಮಾರ್ ಸೇರಿದಂತೆ ನೂರಾರು ಮಂದಿ ಉಪಸ್ಥಿತರಿದ್ದರು.

## ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ತುನಿವು (ತ): ಬೆ.10.05ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ರಾ.10.10ಕ್ಕೆ, ವಾರಿಸು (ತ): ಸಂ.4ಕ್ಕೆ

ಸ್ಕ್ರೀನ್ 2 ತುನಿವು (ತ): ಬೆ.8ಕ್ಕೆ, ಸಂ.4.05ಕ್ಕೆ, ವೇದ (ಕ): ಮ.1.05ಕ್ಕೆ, ವಾರಿಸು (ತ): ರಾ.7.10ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 3 ವಾರಿಸು (ತ): ಬೆ.8.30ಕ್ಕೆ, ಮ.1.05ಕ್ಕೆ, ವೇದ (ಕ): ಸಂ.4.20ಕ್ಕೆ, ರಾ.10.20ಕ್ಕೆ, ತುನಿವು (ತ): ರಾ.7.30ಕ್ಕೆ.

ಸ್ಕ್ರೀನ್ 4 ವಾರಿಸು (ತ): ಬೆ.7.30ಕ್ಕೆ, ಬೆ.11.15ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಮ.2.40ಕ್ಕೆ.

## ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಮಿಸ್ಟರ್ ಬ್ಯಾಚುಲರ್ (ಕ): ಬೆ.10.30ಕ್ಕೆ, ಸಂ.4.35ಕ್ಕೆ, ರಾ.10.20ಕ್ಕೆ, ವೇದ (ಕ): ಮ.1.25ಕ್ಕೆ, ಕಾಕ್ಟೇಲ್ (ಕ): ರಾ.7.35ಕ್ಕೆ.

ಸ್ಕ್ರೀನ್ 2 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.40ಕ್ಕೆ, ಮ.2.30ಕ್ಕೆ, ಸಂ.6.20ಕ್ಕೆ, ರಾ.10.10ಕ್ಕೆ.

ಸ್ಕ್ರೀನ್ 3 ಸ್ಪೂಕಿ ಕಾಲೇಜ್ (ಕ): ಬೆ.10ಕ್ಕೆ, ಥಗ್ ಆಫ್ ರಾಮಘಡ (ಕ): ಮ.12.50ಕ್ಕೆ, ಮಿಸ್ ನಂದಿನಿ (ಕ): ಮ.3.25ಕ್ಕೆ, ಬೇಡಿಯಾ (ಹಿಂ): ಸಂ.6ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ರಾ.9.10ಕ್ಕೆ.

ಸ್ಕ್ರೀನ್ 4 ವೈಶಂಪಾಯನ ತೀರ (ಕ): ಬೆ.11.30ಕ್ಕೆ, ಸ್ಪೂಕಿ ಕಾಲೇಜ್ (ಕ): ಮ.1.55ಕ್ಕೆ, ರಾ.7.10ಕ್ಕೆ, ಲವ್‌ಸ್ಟೋರಿ 1998 (ಕ): ಸಂ.4.45ಕ್ಕೆ, ವೇದ (ಕ): ರಾ.10ಕ್ಕೆ.

## ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

## ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ವಾರಿಸು (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಕಾಂತಾರ (ಕ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಡೇ ಅಂಡ್ ಸಮ್‌ಒನ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಕುಟ್ಟೆ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ತುನಿವು (ತ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ತುನಿವು (ತ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ತುನಿವು (ತ) | 4 ಪ್ರದರ್ಶನಗಳು |
| **ಸಂಗಂ** | |
| ವಾಲ್ಟರ್ ವೀರಯ್ಯ (ತೆ) | 4 ಪ್ರದರ್ಶನಗಳು |
| ವಾರಿಸು (ತ) | 4 ಪ್ರದರ್ಶನಗಳು |
| **ಲಿಡೋ** | |
| ವೀರಸಿಂಹ ರೆಡ್ಡಿ (ತೆ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ವಾರಿಸು (ತ) | 4 ಪ್ರದರ್ಶನಗಳು |
| **ಪ್ರಭಾ** | |
| ಲವ್ ಸ್ಟೋರಿ (ಕ) ಕಾಕ್ಟೇಲ್ (ಕ) | 2 ಪ್ರದರ್ಶನಗಳು |

## ನೇಮಕ



ಸುತ್ತೂರು, ಜ.14– ವರುಣಾ ಬ್ಲಾಕ್ ಕಾಂಗ್ರೆಸ್ ಪರಿಶಿಷ್ಟ ಪಂಗಡಗಳ ವಿಭಾಗದ ಅಧ್ಯಕ್ಷರಾಗಿ ಎಂ.ಎನ್.ಪ್ರಶಾಂತ್ ಕುಮಾರ್ ನೇಮಕ ಮಾಡಲಾಗಿದೆ ಎಂದು ಕೆಪಿಸಿಸಿ ಪರಿಶಿಷ್ಟ ಪಂಗಡಗಳ ವಿಭಾಗದ ರಾಜ್ಯಾಧ್ಯಕ್ಷ ಕೆ.ಟಿ.ಪಾಲಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಸಿರು ನಮ್ಮ ಉಸಿರು

## ಅಶೋಕ್ ನಿಧನ



ಭೇರ್ಯ, ಜ.14– ಇಲ್ಲಿಗೆ ಸಮೀಪದ ಸುಗ್ಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರೂ ಆದ ಜೆಡಿಎಸ್ ಮುಖಂಡ ಅಶೋಕ್ (46) ಶುಕ್ರವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ದೇವೇಂದ್ರ



ಹುಣಸೂರು, ಜ.14– ತಾಲೂಕಿನ ಹೊಸವಾರಂಚಿ ಗ್ರಾಮದ ನಿವಾಸಿ, ಉಯಿಗೊಂಡನಹಳ್ಳಿ ಗ್ರಾಪಂ ಮಾಜಿ ಸದಸ್ಯ ದೇವೇಂದ್ರ (45) ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಶನಿವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ನಾಡಿನ ಸಮಸ್ತ ಜನತೆಗೆ
ಮಕರ ಸಂಕ್ರಾಂತಿ
ಹಬ್ಬದ ಶುಭಾಶಯಗಳು
ಎಂ.ಸತೀಶ್
ಸದಸ್ಯರು, ಮೈಸೂರು ಮಹಾ ನಗರಪಾಲಿಕೆ
ಬಿಜೆಪಿ ಆಕಾಂಕ್ಷಿ, ನರಸಿಂಹರಾಜ ವಿಧಾನಸಭಾ ಕ್ಷೇತ್ರ